CC-O. In Public Domain. Digitized by eGangotri

॥ ಓಂ ॥

ಮಾಸಪತ್ರಿಕೆ ಶ್ರೀ ಶಂಕರ ಕೃಪಾ



ಶೃಂಗೇರಿ ಮಠ
SRINGERI-577139

ವಾರ್ಷಿಕಚಂದಾ 10-00 ಸಂಪುಟ ೦೬ ಸಂಚಿಕೆ ೬
ಪಿಡಿ ಪತ್ರಿಕೆ 1-00 ಶ್ರೀ ಶೌದ್ರಿ ಫಾಲ್ಗುಣ

Sri Vidyabharathi Book Centre, Sringeri

ವಿಷಯಸೂಚನೆ

CC-O. In Public Domain. Digitized by eGangotri

ಶ್ರೀಮಜ್ಜಗದ್ಗುರು ಸಾರ್ವಭೌಮೋಪಹಾರಃ	1
ಶ್ರೀ ಶೃಂಗೇರಿ ಜಗದ್ಗುರುಗಳ ಉಪದೇಶ	2
ಗುರುನಂಶಕಾವ್ಯಂ	9
ಶ್ರೀಶಂಕರರ ಮಾತೃಭಕ್ತಿ	17
ಯಜ್ಞಯಾಗಗಳು ಈಗ ಅನಶ್ಯಕವೇ	21
ಅದ್ವೈತ ಸಿದ್ಧಾಂತದ ತಿರುಳು	28
ಶ್ರೀ ಮಹಾಗಣೇಶ ಪಂಚರತ್ನಂ	33
ಪ್ರಾತಃ ಸ್ಮರಣಂ	36
ಯೋಗಸೂತ್ರ	41

ಪಂಚಾಂಗ

ರೌದ್ರಿ - ಫಾಲ್ಗುಣಕೃಷ್ಣ ಪಕ್ಷ

24—3—81	ಮಂಗಳವಾರ	ಚೌತಿ - ಸಂಕಷ್ಟಹರಗಣಪತಿವ್ರತ
26—3—81	ಗುರುವಾರ	ಷಷ್ಠೀ ಶ್ರೀಶೃಂಗೇರಿ ಪರಾಪರಗುರು ಶ್ರೀ ಅಭಿನವ ಸಚ್ಚಿದಾನಂದ ಭಾರತೀಸ್ವಾಮಿಗಳ ಆರಾಧನೆ
28—3—81	ಶನಿವಾರ	ಸಪ್ತಮೀ - ಕೊಲ್ಲೂರು ಮೂಕಾಂಬಿಕಾ ರಥ
1—4—81	ಬುಧವಾರ	ಏಕಾದಶಿ - ಸರ್ವೇಷಾಮೇಕಾದಶೀ, ಶ್ರೀ ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ನೃಸಿಂಹಭಾರತೀಸ್ವಾಮಿಗಳ ಜಯಂತಿ
2—4—81	ಗುರುವಾರ	ದ್ವಾದಶೀ - ಪ್ರದೋಷ
4—4—81	ಶನಿವಾರ	ಅಮಾವಾಸ್ಯಾ - ಸರ್ವತ್ರಾಮಾವಾಸ್ಯಾ

ಶ್ರೀ ದುರ್ಮತಿನಾಮಸಂವತ್ಸರದ ಚೈತ್ರ ಶುಕ್ಲ

5—4—81	ಭಾನುವಾರ	ಪಾಡ್ಯ - ಚಾಂದ್ರಮಾನಯುಗಾದಿ
8—4—81	ಬುಧವಾರ	ಚೌತಿ - ವರಗಣಪತಿವ್ರತ
12—4—81	ಭಾನುವಾರ	ಅಷ್ಟಮೀ - ಶ್ರೀರಾಮನವಮೀ
13—4—81	ಸೋಮವಾರ	ನವಮೀ - ಶ್ರೀರಾಮನವಮೀ, ಸೌರಮಾನಯುಗಾದಿ
15—4—81	ಬುಧವಾರ	ಏಕಾದಶೀ - ಸರ್ವತ್ರೈಕಾದಶೀ
16—4—81	ಗುರುವಾರ	ದ್ವಾದಶೀ - ಪ್ರದೋಷ
19—4—81	ಭಾನುವಾರ	ಪೂರ್ಣಿಮಾ - ಚಿತ್ರಾಪೌರ್ಣಮಾ

ವಿ. ಸೂ.—ಇದುವರೆಗೂ ಚಂದಾಹಣವನ್ನು ಕಳುಹಿಸದಿರುವ ಮಹನೀಯರು ಕೂಡಲೇ ಪ್ರಕಾಶಕರ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಕೋರಿಕೆ.

ಶ್ರೀ ಕಾರಪಾ ಮುದ್ರಣ ಮತ್ತು ಪ್ರಕಾಶನಾಲಯ (ಪ್ರೈ.) ಲಿ. ಮೈಸೂರು-4 20-3-81

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರ ಕೃಪಾ

ರೌದ್ರಿ – ಫಾಲ್ಗುಣ ಸಂಪುಟ ೧೬ ಸಂ. ೬

ಶ್ರೀಮಜ್ಜಗದ್ಗುರು ಸಾರ್ವಭೌಮೋಪಹಾರಃ

ಅದ್ವೈತೇಂದು ಕಲಾವತಂಸರುಚಿರೋ ವಿಜ್ಞಾನಗಂಗಾಧರೋ
ಪಸ್ತಾಬ್ಜಾದೃತದಂಡಖಂಡಪರಶೂ ರುದ್ರಾಕ್ಷಭೂಷೋಜ್ಜ್ವಲಃ ।
ಕಾಷಾಯಾಮಲಕೃತ್ತಿವಾಸಸುಭಗಃ ಸಂಸಾರಮೃತ್ಯುಂಜಯೋ
ದ್ವೈತಾಖ್ಯೋಗ್ರಹಲಾಹಲಾಶನಪಟುಃ ಶ್ರೀ ಶಂಕರಃ ಪಾತು ನಃ ॥

ಶ್ರೀ ಪರಮೇಶ್ವರನು ಬಾಲಚಂದ್ರಕಲಾಲಂಕೃತನೂ, ವಿಮಲಗಂಗಾಧಾರಿಯೂ, ಖಂಡಪರಶುಹಸ್ತನೂ, ರುದ್ರಾಕ್ಷಮಾಲಾಭೂಷಣನೂ, ಕೃತ್ತಿವಾಸಸುಂದರನೂ, ಮೃತ್ಯುಂಜಯನೂ, ಹಾಲಾಹಲವಿಷಭಕ್ಷಕನೂ, ಸಕಲಲೋಕರಕ್ಷಕನೂ ಆಗಿ, ನಿಖಿಲ ಜಗದೇಕಸಾರ್ವಭೌಮನಾಗಿ ವಿರಾಜಿಸುತ್ತಿದ್ದಾನೆ,

ಜಗತ್ತ್ರೈಮಕರವಾದ ವೈದಿಕಸನಾತನ ವರ್ಣಾಶ್ರಮಧರ್ಮದ ರಕ್ಷಣೆಗಾಗಿ ಅವತರಿಸಿ ಬಂದ ಶ್ರೀಮಜ್ಜಗದ್ಗುರು ಸಾರ್ವಭೌಮ ಶ್ರೀಮಚ್ಛಂಕರಭಗವತ್ಪಾಜ್ಯಪಾದರವರ ರೂಪದಲ್ಲಿಯೂ ಸಹ ಶ್ರೀ ಪರಮೇಶ್ವರನು, ಅದ್ವೈತವೆಂಬ ಚಂದ್ರಕಲಾಲಂಕೃತನಾಗಿಯೂ, ಪರಮಪಾವನವಾದ ತತ್ತ್ವಜ್ಞಾನವೆಂಬ ಗಂಗಾಧಾರಿಯಾಗಿಯೂ; ಪರಮಹಂಸಪರಿವ್ರಾಜ್ಯದ ಚಿಹ್ನೆಯಾಗಿರುವ ದಂಡವೆಂಬ ಖಂಡಪರಶುಹಸ್ತನಾಗಿಯೂ; ರುದ್ರಾಕ್ಷಮಾಲಾಲಂಕೃತನಾಗಿಯೂ, ಕಾಷಾಯವಸ್ತ್ರರೂಪನಿರ್ಮಲಕೃತ್ತಿವಾಸಸುಂದರನಾಗಿಯೂ; ಸಂಸಾರಮೃತ್ಯುವನ್ನು ಜಯಿಸಿದವನಾಗಿಯೂ; ದುಃಖಕರವಾಗಿರುವ ದ್ವೈತರೂಪವಾದ ತೀವ್ರವಿಷಭಕ್ಷಕನಾಗಿಯೂ ಶೋಭಿಸುತ್ತಿದ್ದಾನೆ. ಹೀಗೆ ಸರ್ವ ವಿಧದಿಂದಲೂ ಆನ್ವರ್ಥವಾಗಿ ಶಂಕರನಾಗಿರುವ ಶ್ರೀ ಶಂಕರನು ನಮ್ಮೆಲ್ಲರನ್ನೂ ರಕ್ಷಿಸಲಿ.

[ಕವಿಃ]

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶೃಂಗೇರಿ ಜಗದ್ಗುರುಗಳ ಉಪದೇಶ

ಸಹಜಾನಂದ

ಇಂದು ನಾವು ಕಾಣುತ್ತಿರುವ ಜಗತ್ತಿಗೆ ಎಂದಾದರೂ ಒಂದು ಪ್ರಾರಂಭವಿದ್ದರೆ ಆ ಆರಂಭಕ್ಕೆ ಏಕದೇಶಿಯೂ ಅಸದ್ಭಾವೂ ಆದ ಕಾರಣ ವೊಂದಿದ್ದು, ಅದರಿಂದಲೇ ಜಗತ್ತು ಜನ್ಮತಳೆದಿರಬೇಕು. ಅನ್ಯಥಾಭಾವೂ ಆಕಾರರಹಿತವೂ ಆದ ಪರಮಾಣುಗಳ ಪುಂಜವೇ ಈ ಜಗತ್ತಿಗೆ ಕಾರಣವೆಂದು ಹೇಳುವವರೂ ಸಹ, ಆ ಪರಮಾಣುವು ತನ್ನಲ್ಲಿ ಅಂತರ್ಗತವಾದ ಅನಂತಶಕ್ತಿಯ ಸ್ಥೂಲರೂಪವೆಂದು ಈಗ ಅರಿತುಕೊಂಡಿದ್ದಾರೆ. ಶಕ್ತಿಯನ್ನು ವಿವಿಧರೀತಿಯಲ್ಲಿ ಪರಿವರ್ತಿಸಬಹುದಾದ್ದರಿಂದ, ಒಂದು ಪರಮಾಣುವಿನಲ್ಲಿ ಅಡಗಿರತಕ್ಕ ಮೂಲಶಕ್ತಿಯು ಇನ್ನೊಂದರಲ್ಲಿರತಕ್ಕ ಶಕ್ತಿಗಿಂತ ಪ್ರತ್ಯೇಕವೆಂದು ಊಹಿಸಲು ಕಾರಣವಿಲ್ಲ. ಆ ಮೂಲಶಕ್ತಿಯು, ಎಲ್ಲ ಧಾತುಗಳ ಪರಮಾಣುಗಳಿಗೂ ಸಾಮಾನ್ಯವಾಗಿದ್ದು, ಒಂದೇ ಆಗಿದ್ದು ಸಜಾತೀಯವಾಗಿದ್ದು ಅನಂತವಾಗಿರುತ್ತದೆ. ಈ ಅನಂತಶಕ್ತಿ ಅಥವ ಬಲವು ಜಗತ್ಸೃಷ್ಟಿಗೆ ನಿಮಿತ್ತವಾದ ಮೂಲವಸ್ತುವೆಂದು ಪರಿಗಣಿಸಬಹುದು. ಆದರೆ ಜಗತ್ತು ಕೇವಲ ಒಂದು ಪದಾರ್ಥವಲ್ಲ, ಪಂಚಭೂತಾತ್ಮಕವಾದುದಷ್ಟೇ ಅಲ್ಲ, ನಾವೂ ನೀವೂ ಸಹ ಇದ್ದೇವೆ. ನಮ್ಮ ಶರೀರಗಳು ಪಂಚಭೂತಾತ್ಮಕವಾದುವು ಸರಿಯಷ್ಟೆ. ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಪ್ರಕಾಶಿಸುತ್ತಿರುವ ಜ್ಞಾನಮಯವಾದ ಚಿಚ್ಛಕ್ತಿಯಿದೆ. ಆದು ಭೌತಿಕ ವಸ್ತುಗಳ ವರ್ಗಕ್ಕೆ ಸೇರುವುದಿಲ್ಲ. ಜಗತ್ತನ್ನು ಕುರಿತು ಪೂರ್ಣವಾಗಿ ವಿವರಿಸಬೇಕಾದರೆ ಇದನ್ನೂ "ಜ್ಞಾನಮಯೀ ಚಿಚ್ಛಕ್ತಿಯನ್ನೂ" ಸಹ ವಿವರಿಸಬೇಕು. ಮೊದಲನೆ ಸರಣಿಯನ್ನೇ ಘಾಟಿಯನ್ನೇ ಅನುರಿಸಿ, ಮುಂದುವರೆದು, ಅನಂತ ಜೀವಿಗಳ ಈ ಜಗತ್ತಿಗೆ ಕಾರಣವಾದ ಮೂಲಶಕ್ತಿಯನ್ನು ನಾವು ಒಪ್ಪಿ ಸ್ವೀಕರಿಸಬೇಕು. ಪ್ರತ್ಯೇಕವ್ಯಕ್ತಿತ್ವವನ್ನೇ ಕೊಡಬಹುದಾದ ಅನ್ಯಕಾರಣಗಳಿಂದ ಮುಕ್ತವಾದ ಒಂದು ಆತ್ಮವು ತಾತ್ವಿಕವಾಗಿ ಇನ್ನೊಂದಕ್ಕಿಂತ ಬೇರೆಯೆಂದು ಹೇಳಲು ಕಾರಣವೇ ಇಲ್ಲ. ಈ ತರ್ಕ ಸರಣಿಯಲ್ಲಿ ನಾವು ಬರಬಹುದಾದ ತೀರ್ಮಾನವೆಂದರೆ, ಭೌತಜಗತ್ತಿಗೆ ಕಾರಣವಾದ ಮೂಲ ಚೇತನವೊಂದಿದೆಯೆಂದೂ, ಹಾಗೆಯೇ ವಿಶ್ವದ ಎಲ್ಲ ಜೀವಗಳಿಗೂ ಕಾರಣವಾದ ಮೂಲ ಜ್ಞಾನವೊಂದಿದೆಯೆಂದೂ ಹೇಳಬಹುದು. ಇನ್ನೂ ಸುಲಭವಾಗಿ ಹೇಳುವುದಾದರೆ ಎರಡು ಮೂಲ ಕಾರಣಗಳ ಬದಲು ಒಂದೇ ಇದೆಯೆಂದು ಭಾವಿಸಿ ಅದನ್ನು ಜ್ಞಾನಮಯೀ ಚೈತನ್ಯ ಅಥವ ಚೈತನ್ಯಮಯೀಜ್ಞಾನವೆಂದು ಕರೆಯಬಹುದು. ನಮ್ಮ ತತ್ವ ಶಾಸ್ತ್ರದಲ್ಲಿ ನಾವಿದನ್ನು ಹಾಗೆಯೇ ಕರೆಯುತ್ತೇವೆ. ಮೂಲಕಾರಣವು ಜ್ಞಾನಮಯೀಚೈತನ್ಯವೆಂದು ಪರಿಗಣಿಸಲ್ಪಟ್ಟಾಗ ಅದನ್ನು ಶಕ್ತಿಯೆನ್ನುತ್ತೇವೆ. ಅದನ್ನು ಚೈತನ್ಯಮಯೀ

Sri Vidyabharathi Book Centre, Sringeri

 CC-O. In Public Domain. Digitized by eGangotri

ಜ್ಞಾನವೆಂದು ಪರಿಗಣಿಸಿದಾಗ 'ಚಿತ್' ಎನ್ನುತ್ತೇವೆ. ಈ ತರ್ಕವನ್ನು ಮುಂದುವರಿಸಿ ಇನ್ನೂ ಸೂಕ್ಷ್ಮಗೊಳಿಸಿ, ಚೈತನ್ಯ ಮತ್ತು ಜ್ಞಾನಗಳು ಒಂದೇ ಎಂದೂ ಬೇರೆಯೆಂಬ ಭಾವನೆಯನ್ನೇ ತೊಡೆದುಹಾಕಿಬಿಡುತ್ತೇವೆ. ಭೌತಜಗತ್ತಿನ ದೃಷ್ಟಿಯಿಂದ ಚೈತನ್ಯವು ಮೂಲಕಾರಣವೆಂದೂ, ಜೀವಜಗತ್ತಿನ ದೃಷ್ಟಿಯಿಂದ ಜ್ಞಾನವು ಮೂಲಕಾರಣವೆಂದೂ ಒಂದೇ ವಸ್ತುವನ್ನು ಎರಡು ದೃಷ್ಟಿಗಳಿಂದ ಪ್ರತ್ಯೇಕವಾಗಿ ಕಾಣುವಾಗ ನುಡಿಯುತ್ತೇವೆ. ಅದನ್ನೇ ಬ್ರಹ್ಮ ಎನ್ನುತ್ತೇವೆ. ಅದು ಶಕ್ತಿ ಮತ್ತು ಚಿತ್ ಎರಡನ್ನೂ ಒಳಗೊಂಡು ಮತ್ತು ಆವೆರಡನ್ನೂ ಮೀರಿರುವುದರಿಂದ ಅದನ್ನು "ಇರುವುದು" ಎಂದು ಮಾತ್ರ ಹೇಳಬಹುದು ಅದೇ ಶುದ್ಧವಾದ 'ಸತ್' ಇರುವಂಥಾದ್ದು.

ಈ ಜಗತ್ತಿನಲ್ಲಿರುವುದೆಲ್ಲವೂ ಅದೇ 'ಸತ್', ಆದರೆ ನಾಮ ರೂಪಗಳಲ್ಲಿ ಅಡಗಿರುವಂಥಾದ್ದು. ಈ ಜಗತ್ತಿನಲ್ಲಿ ಎಲ್ಲ ಜೀವಿಗಳಲ್ಲೂ ಆ 'ವಸ್ತು' ವೇ ಅಡಗಿದ್ದು, ಪ್ರತ್ಯೇಕ ವ್ಯಕ್ತಿತ್ವನನ್ನು ತೋರುತ್ತ ಹಲವಾರು ಶರೀರಗಳಲ್ಲಿ ಮನೆ ಯಾಗಿದೆ. ನಮ್ಮ ಗ್ರಹಣಶಕ್ತಿಯ ಮೇಲೆ ಒತ್ತಾಯವಾಗಿ ಬಂದೆರಗುವ, ನಾಮ ರೂಪಗಳಿಗೆ ಗಮನ ಕೊಡದೆ, ನಾಮರೂಪಗಳನ್ನು ಅಲಕ್ಷ್ಯ ಮಾಡಿ, ಅವುಗಳ ಹಿಂದೆ ಅಡಗಿರುವ ಸಾರ ವಸ್ತುವಿನ ಕಡೆಗೆ ನಮ್ಮ ಗಮನ ಕೇಂದ್ರೀಕೃತವಾದರೆ, ಸರ್ವವ್ಯಾಪಿ 'ಸತ್' ಗ್ರಾಹ್ಯವಾಗುತ್ತದೆ. ನಮ್ಮನ್ನು ಪ್ರತ್ಯೇಕಿಸುವ ಎಲ್ಲ ವಿಷಯಗಳಿಂದಲೂ ನಾವು ಹೊರಬಂದಾಗ ನಮ್ಮ ಅಂತರಾತ್ಮವು ಪರಮಾತ್ಮನಿಗಿಂತ ಬೇರೆಯಲ್ಲ ಎಂಬುದನ್ನು ಕಾಣುತ್ತೇವೆ.

ಆತ್ಮವು ಸದಾ ಅಂತರ್ಗತವಾಗಿ ನಮ್ಮಲ್ಲೇ ಇರುವಾಗ ಅದನ್ನು ಅರಿತು ಕೊಳ್ಳುವ ಅವಶ್ಯಕತೆಯೇನೆಂದು ಕೇಳಬಹುದು. ಸಾಮಾನ್ಯವಾಗಿ ಆಗಾಗ ನಡೆವ ಘಟನೆಯಿಂದಲೇ ಇದಕ್ಕೆ ಉತ್ತರ ಹೇಳಬಹುದು. ಚಿನ್ನದ ಸರ ಧರಿಸಿದ ವ್ಯಕ್ತಿ ತಾನು ಅದನ್ನು ಧರಿಸಿಕೊಂಡಿರುವುದನ್ನು ಮರೆತು ಅದನ್ನೆಲ್ಲೋ ಕಳೆದುಕೊಂಡಿರು ವುದಾಗಿ ಭಾವಿಸಿ ಎಲ್ಲೆಡೆಗಳಲ್ಲಿಯೂ ಹುಡುಕುತ್ತಿರುತ್ತಾನೆ. ದಯಾಳುವಾದ ಸ್ನೇಹಿತನೊಬ್ಬ ಬಂದು, ಅದು ತನ್ನ ಕೊರಳಲ್ಲೇ ಇರುವುದನ್ನು ತೋರಿಸುವವರೆಗೆ, ಗಾಬರಿಯಿಂದ ಚಿಂತಾಮಿಶ್ರಿತನಾಗಿ, ಆತ ಹುಡುಕುತ್ತಲೇ ಇರುತ್ತಾನೆ. ಸ್ನೇಹಿತನು ಅದನ್ನು ತೋರಿಸಿಕೊಟ್ಟಾಗ ಹೊಸದೊಂದು ಸರ ಬಂದಷ್ಟೇ ಸಂತೋಷ ಹರ್ಷ ಗಳನ್ನು ಅನುಭವಿಸುತ್ತಾನೆ. ಹಾಗೆಯೇ ಆತ್ಮಾನಂದವೂ ಸದಾ ನಮ್ಮಲ್ಲಿಯೇ ಇದ್ದರೂ ಸಹ, ನಾವು ಅದರ ವಿಷಯವಾಗಿ ಅಜ್ಞಾನದಿಂದಿದ್ದೇವೆ. ನಮ್ಮ ಪ್ರಯತ್ನ ನಡೆಯಬೇಕಾದುದು ಆನಂದವನ್ನು ಪಡೆಯಲಲ್ಲ, ಅಜ್ಞಾನವನ್ನು ತೊಲಗಿಸಲು.

ಆತ್ಮನು ಸ್ವಯಂತೇಜನಾಗಿದ್ದಾನೆ. ಉರಿಯುವ ದೀಪವನ್ನು ಕಾಣಲು, ಪ್ರತ್ಯೇಕವಾದ ಬೆಳಕು ಬೇಕಾಗದಿರುವಂತೆ, ಶಾಸ್ತ್ರಗಳಲ್ಲಿ ನಿರೂಪಿಸಲ್ಪಟ್ಟಿರುವ

CC-O. In Public Domain. Digitized by eGangotri

ಮಾರ್ಗಗಳೆಲ್ಲವೂ, ಆತ್ಮನು ಸ್ವಯಂಪ್ರಕಾಶನಾಗಲೆಂದಲ್ಲ; ಆತ್ಮನನ್ನು ಅರಿಯಲು ವಿಘ್ನನಾಗಿರುವ ಅವಿದ್ಯೆ ಅಥವ ಅಜ್ಞಾನದ ತೆರೆಯನ್ನು ತೆಗೆದುಹಾಕಲೆಂದು ನಿವರಿಸಲ್ಪಟ್ಟಿವೆ. ಎಲ್ಲ ಆಲೋಚನೆ ಮತ್ತು ಭಾವನೆಗಳು ದ್ವೈತದ ಸೀಮೆಯೊಳಗಿರುವುದರಿಂದ, ಭಾವತೀತವೂ, ವಾಗತೀತವೂ ಆದ ಪೂರ್ಣಸತ್ಯವನ್ನು ಕುರಿತು ಚಿಂತಿಸಲು ಅಥವ ಮಾತನಾಡಲು ನಾವು ದ್ವೈತಸಂಕೇತವನ್ನೇ ಅವಶ್ಯಕವಾಗಿ ಬಳಸಬೇಕು. ಆದರಿಂದ ಉಪನಿಷತ್ತು "ಬ್ರಹ್ಮವನ್ನು ಅರಿತವನು ಶ್ರೇಷ್ಠತಮವಾದುದನ್ನು ಪಡೆಯುವನು" ಎಂದು ನುಡಿಯುತ್ತದೆ, ಮುಕ್ತಿಯು, ಇಂದು ಸಂಭವಿಸದ ಮುಂದೆಂದೋ ಸಂಭವಿಸುವ ಸ್ಥಿತಿಯೆಂಬಂತೆ. ಒಬ್ಬ ವ್ಯಾಪಾರಿ ವ್ಯಾಪಾರ ಮುಗಿದ ನಂತರ, ಮಗನನ್ನು ಕರೆದು ರೋಜು ಪುಸ್ತಕ, ವರ್ಗದ ಪುಸ್ತಕ ಮತ್ತು ನಗದು ಹಣ ಎಲ್ಲವೂ ತಾಳೆಯಾಗುತ್ತದೆಯೇ ನೋಡಲು ಹೇಳುತ್ತಾನೆ. ಮಗನು ಲೆಕ್ಕವನ್ನೆಲ್ಲಾ ನೋಡಿ, ರೋಜು ಬುಕ್ಕಿಗೂ ವರ್ಗದ ಖಾತೆಗೂ ತಾಳೆಯಾಗದೆ ಎರಡಾಣೆ ವ್ಯತ್ಯಾಸವಿರುವುದನ್ನು ಕಾಣುತ್ತಾನೆ. ನಗದು ಹಣವು ರೋಜು ಬುಕ್ಕಿನಲ್ಲಿ ನಮೂದಿಸಿರುವಂತೆ ಸರಿಯಾಗಿದ್ದರೂ, ವರ್ಗದ ಖಾತೆಯ ಜುಮ್ಲಾವು ರೋಜು ಬುಕ್ಕಿನದಕ್ಕೆ ಸರಿಹೊಂದದೆಂದು ಮಗ ಹೇಳಿದಾಗ, ತಂದೆ "ಎರಡಾಣೆ ಎಲ್ಲಿ ಹೋಗುತ್ತದೆ? ಅಲ್ಲೇ ಇರಬೇಕು. ಸರಿಯಾಗಿ ನೋಡು," ಎಂದು ಉದ್ಗರಿಸುತ್ತಾನೆ. ಮಗ ಲೆಕ್ಕವನ್ನು ಮತ್ತೊಮ್ಮೆ ಜಾಗರೂಕತೆಯಿಂದ ಪರಿಶೀಲಿಸುತ್ತಾನೆ. ತಾನು ಕೂಡುವುದರಲ್ಲಿ ತಪ್ಪುಮಾಡಿರುವುದನ್ನು ಕಂಡು, ತಿದ್ದಿ, ಸಂತೋಷೋದ್ವೇಗದಿಂದ "ಎರಡಾಣೆ ಸಿಕ್ಕಿ ಬಿಟ್ಟಿತು" ಎಂದು ಸಾರುತ್ತಾನೆ! ಈ ಹಣ ಕಳೆದು ಹೋಗಿತ್ತೆ? ಮತ್ತೆ ಹೊಸದಾಗಿ ಬಂತೆ? ಆದರೂ ಒಮ್ಮೆ ಆದು ಇಲ್ಲವಾಗಿತ್ತು! ಮತ್ತೊಮ್ಮೆ ಸಿಕ್ಕಿತು. ನಿಜಾಂಶವೆಂದರೆ ತಂದೆ ಹೇಳಿದ "ಅಲ್ಲೇ ಎಲ್ಲೋ ಇರಬೇಕು, ಚೆನ್ನಾಗಿ ಹುಡುಕು" ಎಂಬುದು! ಹೀಗೆಯೇ 'ಆತ್ಮ' ಸಹ ಒಂದು ಘಟ್ಟದಲ್ಲಿ ಅರಿವಿಗೆ ನಿಲುಕದ್ದಾಗಿದ್ದು, ಇನ್ನೊಂದು ಘಟ್ಟದಲ್ಲಿ ಅನುಭವಗಮ್ಯವಾಗುತ್ತದೆ. ಆತ್ಮನು ಸದಾ ಸ್ವಯಂಪ್ರಕಾಶನಾಗಿದ್ದರೂ, ಆತ್ಮನ ಅರಿಗೆ ವಿಘ್ನವಾದ ತೆರೆಯನ್ನು ತೆಗೆಯಲು ಯತ್ನವು ನಡೆಯಬೇಕು. ತಂದೆಯ "ಸರಿಯಾಗಿ ನೋಡು" ಎಂಬ ಸಲಹೆ, "ಎರಡಾಣೆ ಸಿಕ್ಕದಂತೆ ಆಗಿರುವ ತಪ್ಪನ್ನು ಹುಡುಕಿ ತೆಗೆದು ಹಾಕು" ಎಂದು ಆಗುತ್ತದೆ. ಹಾಗೆಯೇ ಶಾಸ್ತ್ರಗಳಲ್ಲಿ ನಿರೂಪಿಸಲ್ಪಟ್ಟಿರುವ ಬೋಧನೆಯು ಆತ್ಮನು ಅರಿವಿಗೆ ನಿಲುಕುವ ವಸ್ತುವೆಂದಲ್ಲ. "ಅವಿದ್ಯೆಯನ್ನು ತೆಗೆದುಹಾಕು, ಆದರ ಕೊಂಬೆರೆಂಬೆಗಳು ಸದಾ ವ್ಯಕ್ತವಾಗಿರುವ ಸತ್ಯವನ್ನು ಅರಿಯಲು ವಿಘ್ನವಾಗಿದೆ" ಎಂಬುದಾಗಿ. ಆ ಕೆಲಸವು - ಅವಿದ್ಯಾ ನಿವಾರಣೆಯು - ಜಯಪ್ರದವಾಗಿ ನಡೆದಲ್ಲಿ, ಆತ್ಮವು ತಾನೇ ತಾನಾಗಿ ಪ್ರಕಾಶಿಸುವುದು.

CC-O. In Public Domain. Digitized by eGangotri

ಗುರುವಂಶಕಾವ್ಯ

ಭಾವನುವಾದ : ಟಿ. ಎಸ್. ವೆಂಕಣಯ್ಯ.

೧೨. ಅನಂತರ ಸೋಮಶೇಖರನಾಯಕನು 'ಧರ್ಮದೃಷ್ಟಿಯುಳ್ಳವರಾದ ಯತೀಶ್ವರರನ್ನು ಆದರಪೂರ್ವಕವಾಗಿ ಸಾಂತ್ವನಗೊಳಿಸಿ ಶೃಂಗೇರಿಯಲ್ಲಿ ನೆಲೆಗೊಳಿಸು. ನೀನು ಅವರಿಗೆ ಅಡ್ಡಿಯುಂಟುಮಾಡಬೇಡ' ಎಂದು ಆಜ್ಞಾಪಿಸಿದನು.

ನಿರ್ವಾಣಯ್ಯನ ಪುನರ್ವಂಚನೆ :-

೧೩. ವಂಚನಾಪರನಾದ ಆತನು ಹೀಗೆ ರಾಜನಿಂದ ಆಜ್ಞಾಪಿಸಲ್ಪಟ್ಟವನಾಗಿ ಕೂಡಲೇ ಯತೀಂದ್ರರ ಸನ್ನಿಧಿಗೆ ಆಗಮಿಸಿ ನೃಪನ ಮಾತನ್ನು ಮನಸ್ಸಿನಲ್ಲೇ ಬದಲಾಯಿಸಿಕೊಂಡವನಾಗಿ ಭಯಜನಕವಾದ ಮಾತನ್ನು ಗುರುಗಳಿಗೆ ಹೇಳಿದನು.

೧೪. 'ಯೋಗೀಂದ್ರರೆ! ನೃಪನು ನುಡಿದಿರುವ ಮಾತುಗಳನ್ನು ಗಮನಿಸಿ. ಸೈನ್ಯವು ಪ್ರವೇಶಿಸಿದೆ, ಸಚಿವನೂ ಬರಲಿಲ್ಲ. ತಮ್ಮ ಸಲುವಾಗಿ ಮಹತ್ತರವಾದ ರಾಜ್ಯ ಭಯ ಉಂಟಾಗಿದೆ. ಆದ್ದರಿಂದ ಮಹಾನಾಪರು ನನ್ನನ್ನು ಕುರಿತು ಹೀಗೆ ಆಜ್ಞೆ ಮಾಡಿದ್ದಾರೆ.'

೧೫. 'ಮಡುಗಳು ಸಹಿಸಲಾರದ ನೊಸಳೆಗಳೇ ಮೊದಲಾದ ಜಲಜಂತುಗಳಿಂದ ದೂಷಿತವಾಗಿರುವಂತೆ. ಪಾರ್ಥಿವರುಗೂಢಮಸ್ಕರಾಗಿರುತ್ತಾರೆ. ಅವರ ಹೃದಯದಲ್ಲಿರುವುದನ್ನು ಅರಿಯಲು ಈ ಭೂಮಿಯಲ್ಲಿ ಯಾರಿಗೆ ಸಾಧ್ಯ? ಆದ್ದರಿಂದ ಸೂಕ್ತವಾದುದೇನೆಂಬುದನ್ನು ತಾವೇ ವಿಚಾರಮಾಡಿರಿ.'

೧೬. ಕಪಟಿಯಾದ ಮಂತ್ರಿಯ ಈ ಬಗೆಯ ಮಾತುಗಳನ್ನು ಚೆನ್ನಾಗಿ ವಿಮರ್ಶಿಸಿ 'ಮಹಾರಾಜನ ಮನಸ್ಸಿನಲ್ಲಿ ನಿಶ್ಚಯವಾಗಿಯೂ ಎಲ್ಲವೂ ನಮ್ಮ ದೆಸೆಯಿಂದಲೇ ಜರುಗಿದೆಯೆಂದಿರುವುದಾದರೆ ನಮ್ಮ ತೀರ್ಮಾನವನ್ನು ಕೇಳು', ಎಂದರು.

೧೭. 'ಧರ್ಮಪಥದಲ್ಲಿ ಮುನ್ನಡೆಯುತ್ತಿರುವ ನಮಗೆ ಧನಪ್ರಾಪ್ತಿಯಿಂದಾಗಲಿ, ರಾಜ್ಯದಿಂದಾಗಲಿ ಯಾವ ಪ್ರಯೋಜನವೂ ಇಲ್ಲ. ಆದರೆ ದೇಶವು ಧರ್ಮ ಹಾಗೂ ಧನಧಾನ್ಯಗಳಿಂದ ಪುಷ್ಕಳವಾಗಿದ್ದು ವೃದ್ಧಿಹೊಂದಲಿ ಎಂಬುದೇ ಸದಾ ನಮ್ಮ ಭಾವನೆಯಾಗಿದೆ.'

೧೮. 'ಶ್ರೀಶಂಕರಾಚಾರ್ಯರ ತಪಃಪ್ರಭಾವದಿಂದ ಎಲ್ಲ ದಿಕ್ಕುಗಳಲ್ಲಿಯೂ ಪ್ರಸಿದ್ಧರಾದ ನಮ್ಮ ಶಿಷ್ಯರನೇಕರು ಇದ್ದಾರೆಂಬುದು ಸತ್ಯ. ಆದರೆ ನಾವು ಅವರನ್ನು ಕಾರ್ಯದಲ್ಲಿ ತೊಡಗಿಸಿದಲ್ಲ.'

Sri Vidyabharathi Book Centre, Sringeri

CC-O. In Public Domain. Digitized by eGangotri

೧೯. 'ಆದರೂ ಭೂಪತಿಗೆ ಅದರಿಂದ ದೇಶದ ಭೀತಿಯು ಉಂಟಾಗಿದೆಯೆಂಬ ಭಾವನೆ ಇರುವುದಾದರೆ ನಾನೇ ಹೋಗಿ ಅವರನ್ನು ತಡೆಯುತ್ತೇನೆ. ರಾಜನೂ ಈ ವಿಚಾರವನ್ನು ತಿಳಿಯಲಿ.

೨೦. 'ಆ ರಾಜನನ್ನು ಈಗ ನಾವು ನೋಡಿದ್ದೇ ಆದರೆ ಆತನೇನನ್ನು ನುಡಿಯುವನೋ ಅದನ್ನು ನಾವೂ ಅಂಗೀಕರಿಸುತ್ತೇವೆ. ಆದ್ದರಿಂದ ಆತನನ್ನು ನೋಡಲು ಅತ್ಯಾಸಕ್ತವಾಗಿರುವ ಈ ನಮ್ಮ ಮನಸ್ಸು ಮತ್ತೆ ಮತ್ತೆ ಈ ರೀತಿ ನಮ್ಮಿಂದ ನುಡಿಸುತ್ತಲಿದೆ.'

೨೧. ಯತೀಶ್ವರರ ಮಾತುಗಳನ್ನು ಕೇಳಿ 'ಹೀಗಿರುವುದಾದರೆ ತಾವು ನೃಪನ ಸನ್ನಿಧಿಗೆ ದಯಮಾಡಿಸಿ. ಅಲ್ಲಿ ಇವೆಲ್ಲವೂ ಸಮಂಜಸವಾದೀತು' ಎಂದು ನುಡಿದು ಬಂದಹಾಗೆಯೇ ಮಂತ್ರಿಯು ಹೊರಟನು.

ಶ್ರೀಗುರುಗಳ ರಾಮಚಂದ್ರಾಪುರ ಗಮನ :–

೨೨. ಆನಂತರ ಪ್ರಾಜ್ಞರಾದ ಯತೀಶ್ವರರು ಚೆನ್ನಾಗಿ ಆಲೋಚಿಸಿ ಖಡ್ಗ ಧಾರಿಗಳಾದ ಅನೇಕ ಯೋಧರೊಡನೆ ಅಲ್ಲಿಂದ ಹೊರಟು ಮಿತಶಿಷ್ಯ ಸಮೇತರಾಗಿ ಆಗ ರಾಮಚಂದ್ರಾಪುರಕ್ಕೆ ಹೊರಟರು.

೨೩. ರಾಮಚಂದ್ರಪುರದಲ್ಲಿದ್ದ, ಭವ್ಯಾಕೃತಿಯುಳ್ಳ. ಈಶ್ವರ ಸಮಾನರಾದ ಗುರುಗಳನ್ನು ಸವಿಾಪಿಸಿ, ಸನ್ಮಾನೀಲರಾದ ಬಿದನೂರಿನಲ್ಲಿದ್ದ ಜನರು ಆಗ ಬಹುವಾಗಿ ರಾಮಚಂದ್ರಾಪುರಕ್ಕೆ ಹೊರಟರು.

ಶರಾವತೀನದಿಯ ಅನ್ಯರ್ಥತೆ :–

೨೪. ರಾವಣನ ಕುತ್ತಿಗೆಗಳಿಂದ ಹೊರಬಂದರಕ್ತರಾಶಿಯಿಂದ ಮಲಿನಗೊಂಡಿದ್ದ ಬಾಣಗಳನ್ನು ಪರಾಕ್ರಮಶಾಲಿಯಾದ ಶ್ರೀರಾಮನು ತೊಳೆದಂತಹ ಶರಾವತೀ ನದಿಯು ಆ ರಾಮಚಂದ್ರಾಪುರದಲ್ಲಿ ಬೆಳಗುತ್ತಿದೆ,

ರಾಮಚಂದ್ರಾಪುರದಲ್ಲಿ ಶ್ರೀಗಳ ವಾಸ :–

೨೫. ಮಹರ್ಷಿಸದೃಶರಾದ ಭೂಸುರರೆಲ್ಲರಿಂದ ಅನವರತ ಪೂಜಿತರಾದ ಗುರುವರ್ಯರು ವಸಿಷ್ಠರೇ ಮೊದಲಾದ ಮಹರ್ಷಿಗಳಿಂದ ಪೂಜಿತನಾದ ಭಗವಾನ್ ಶ್ರೀರಾಮಚಂದ್ರನಂತೆ ಆ ರಾಮಚಂದ್ರಾಪುರದಲ್ಲಿ ಚಿರಕಾಲ ಶೋಭಿಸಿದರು.

ನಿರ್ವಾಣಯ್ಯನ ಉಪೇಕ್ಷೆ :–

೨೬. ಅಲ್ಲಿಯೂ ಕೆಲವು ದಿವಸಗಳು ಕಳೆದಿರಲಾಗಿ ಆಗಮಿಸಿರುವ ಯತೀಶ್ವರರ ವಿಚಾರವನ್ನಾಗಲಿ, ಅವರು ಹಿಂದೆ ಹೇಳಿದ ಮಾತುಗಳನ್ನಾಗಲಿ ಮಂತ್ರಿಯು ಉಪೇಕ್ಷೆಯಿಂದ ರಾಜನಿಗೆ ತಿಳಿಸಲಿಲ್ಲ.

CC-O. In Public Domain. Digitized by eGangotri

೨೭. ಈ ವಿಷಯವನ್ನು ಆಲೋಚಿಸಿ ತೇಜಶ್ಶಾಲಿಯಾದ ಯತೀಂದ್ರವರರು ಶಾರದಾಂಬೆಯನ್ನು ಪೂಜಿಸುವ ಇಚ್ಛೆಯುಳ್ಳವರಾಗಿ ಖಡ್ಗಧಾರಿಗಳಾದ ಯೋಧರಿಂದಲೂ, ಶಿಷ್ಯರಿಂದಲೂ ಪರಿವೃತರಾಗಿ ಶೃಂಗಪುರಕ್ಕೆ ತೆರಳಲು ಇಚ್ಛಿಸಿದರು.

ಶಿವರಾತ್ರಿಯಂದು ಶೃಂಗೇರಿಗೆ ಶ್ರೀಗಳ ಆಗಮನ :–

೨೮. ಆನಂತರ, ದೇವತೆಗಳಿಂದ ಪರಿವೃತನಾದ ಮಹೋಜ್ಜ್ವಲನಾದ ಈಶ್ವರನಂತೆ ಮಹಾತ್ಮರಾದ ಯತೀಶ್ವರರು ಪ್ರಸಿದ್ಧವೂ ಶ್ರೇಷ್ಠವೂ ಆದ ಶೃಂಗೇರಿಗೆ ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯ ರಾತ್ರಿ ಆಗಮಿಸಿದರು.

ಪೌರರ ಪರಮಾನಂದ :–

೨೯. ಆನಂದಾಶ್ರುಭರಿತವಾದ ಕಣ್ಣುಗಳನ್ನುಳ್ಳ ಪುತ್ರರು ಪ್ರವಾಸದಿಂದ ಬರಲಿರುವ ತಂದೆಯ ಚರಣಕಮಲಗಳಿಗೆ ನಮಸ್ಕರಿಸಿ ಆನಂದಪಡುವಂತೆ ಗುರುವರರ ಆಗಮನದಿಂದ ವಿಸ್ಮಿತರಾದ ಸಕಲ ಪುರಜನರೂ ಅವರನ್ನು ನೋಡಿ ಕೂಡಲೇ ಆನಂದವನ್ನು ಪಡೆದರು.

ಶ್ರೀ ಮಲ್ಲಿಕಾರ್ಜುನನ ಮಹೋತ್ಸವ :–

೩೦. ಆನಂತರ, ಪರಿಶುದ್ಧರೂ, ವಶೀಕೃತಚಿತ್ತರೂ, ಪಾವನರೂ ಆದ ಆ ಯೋಗಿಗಳು ದೇವನಾದ ಮಲ್ಲಿಕಾರ್ಜುನನನ್ನು ವಿವಿಧ ಮಹೋತ್ಸವಗಳಿಂದ ಆರಾಧಿಸಿ ಮೂರನೆಯ ದಿನವೇ ರಥೋತ್ಸವವನ್ನು ವಿಜೃಂಭಣೆಯಿಂದ ಮಾಡಿಸಿದರು,

ಶಾರದಾಂಬಾ ಸಮಾರಾಧನೆ :–

೩೧. ಹೀಗೆಯೇ ಶಾರದಾಂಬೆಯನ್ನೂ ಉತ್ಸಾಹದಿಂದ ಪೂಜಿಸಿ ಆಕೆಯ ಆನಂದಕ್ಕಾಗಿ ಸುವಾಸಿನಿಯರಿಗೆ ಅಸಂಖ್ಯವಾದ ಸೀರೆ, ಕಣಗಳನ್ನು ನೀಡಿದರು. ಅನಂತರ ವಿಪ್ರೋತ್ತಮರನ್ನು ಆದರಪೂರ್ವಕವಾದ ನಾನಾಪಕ್ವಾನ್ನ ಭೋಜನಗಳಿಂದ ಸಂತೋಷಪಡಿಸಿದರು.

ಶೃಂಗೇರಿಯಿಂದ ತೀರ್ಥಹಳ್ಳಿಗೆ ಆಗಮನ :–

೩೨. ಪೂಜ್ಯತಮರೂ, ಬೃಹಸ್ಪತಿಸಮಾನರೂ ಆದ ಆ ಗುರುಗಳು ಪುರದಲ್ಲಿದ್ದ ದೇವತೆಗಳನ್ನು ಪೂಜಿಸಿ, ಬಹುಶಿಷ್ಯರುಗಳಿಂದ ಸೇವಿತರಾಗಿ ಶೃಂಗೇರಿಯಿಂದ ಹೊರಟು ಕೂಡಲೆ ತೀರ್ಥಹಳ್ಳಿಯನ್ನು ತಲುಪಿದರು.

೩೩. ಹೀಗೆ ಯತಿರಾಜರು ತೀರ್ಥಹಳ್ಳಿಯಲ್ಲಿರಲಾಗಿ ಬಾಜಿರಾಯನು ಗೂಢಚಾರರಿಂದ ಸಕಲ ವೃತ್ತಾಂತವನ್ನು ತಿಳಿದುಕೊಂಡವನಾಗಿ ತನ್ನೊಡನೆ ಬಂದಿದ್ದ ಪೂರ್ವಸಚಿವನನ್ನು ಕುರಿತು ಹೀಗೆ ನುಡಿದನು,

CC-O. In Public Domain. Digitized by eGangotri

ಇಕ್ಕೇರಿ ಸಚಿವ ಹಾಗೂ ಬಾಜಿರಾಯನ ಸಮಾಲೋಚನೆ :-

೩೪. 'ಮಹಾಮಹಿಮರಾದ ನನ್ನ ಗುರುಗಳು ಈಗಲೂ ಸಹ ಶೃಂಗೇರಿಯನ್ನು ಪ್ರವೇಶಿಸಿಲ್ಲ. ಅದಕ್ಕೆ ಕಾರಣ ನಿಮ್ಮ ಮಹಾರಾಜನಾಗಲಿ ಅಥವಾ ನೀನಾಗಲಿ ಉಪೇಕ್ಷೆ ಮಾಡಿದುದೆ ಅಥವಾ ಬೇರಾವುದಾದರೂ ಕಾರಣವಿದೆಯೆ ? ಹೇಳು ?

೩೫. ಹೀಗೆ ಪ್ರಶ್ನಿಸಲ್ಪಟ್ಟು ಶಂಕೆಗೊಂಡವನಾದ ಮಂತ್ರಿಯು ಕೂಡಲೆ ಸಾಹು ನೃಪನ ಮಂತ್ರಿಯನ್ನು ಕುರಿತು 'ಈಗಲೇ ಯತೀಂದ್ರರ ಸನ್ನಿಧಿಗೆ ಹೊರಟು ನಾನೇ ಆವರನ್ನು ಅವರ ಮಠದಲ್ಲಿ ನೆಲೆಗೊಳಿಸುತ್ತೇನೆ' ಎಂದು ಉತ್ತರ ನೀಡಿದನು.

೩೬. ಹೀಗೆ ಉತ್ತರಿಸಿದ ಸಚಿವನಿಗೆ ಬಳಿಕ ಮಾಡಬೇಕಾದ ಕಾರ್ಯವನ್ನು ಆಜ್ಞಾಪಿಸಿ, ಶಾಹುರಾಜನ ಮಂತ್ರಿಯು ತನ್ನ ದೂತರುಗಳೊಡನೆ ಗುರುರಾಜರ ಸನ್ನಿಧಿಗೆ ಆತನನ್ನು ಸಂತೋಷದಿಂದ ಕಳುಹಿಸಿದನು.

೩೭. ಅನಂತರ ಆತನ ಆಪ್ಪಣೆಯನ್ನು ಕೇಳಿ ಪ್ರತಿಜ್ಞೆಮಾಡಿ ಆ ಸಚಿವನು ಬಿದನೂರಿಗೆ ತೆರಳಿ ರಹಸ್ಯದಲ್ಲಿ ರಾಜನಿಗೆ ಈ ಎಲ್ಲಾ ಸಮಾಚಾರವನ್ನು ಸ್ಫುಟವಾಗಿ ತಿಳಿಸಿದನು.

ಭೂಪತಿಗೆ ನಿರ್ವಾಣಯ್ಯನ ಕಪಟಬುದ್ಧಿಯ ಅರಿವು :-

೩೮. ಈ ಮಾತನ್ನು ಕೇಳಿದ ಸೋಮಶೇಖರನಾಯಕನು ಸಚಿವನ ಮಾತು ಗಳಿಂದ ಈ ಎಲ್ಲಾ ಕೃತ್ಯವೂ ತನ್ನ ಮುಖ್ಯಮಂತ್ರಿಯಾದ ನಿರ್ವಾಣಯ್ಯನ ಎಂದು ತಿಳಿದನು.

ನಿರ್ವಾಣಯ್ಯನಿಗೆ ರಾಜದಂಡ :-

೩೯. ಆವನ ಅಧಿಕಾರಕ್ಕೆ ಅವನ ಹೆಸರನ್ನೇ ಹೊಂದಿಸಕ್ಕದ್ದು (ನಿರ್ವಾಣಯ್ಯನನ್ನು ಅಧಿಕಾರದಿಂದ ನಿವೃತ್ತಿಗೊಳಿಸತಕ್ಕದ್ದು) ಎಂದು ಮನಸ್ಸಿನಲ್ಲಿಯೇ ನಿರ್ಧರಿಸಿ ಬಳಿಕ ಯತಿವರೇಣ್ಯರ ಸನ್ನಿಧಿಗೆ ತೆರಳಿ ಆವರನ್ನು ಸಮಾಧಾನ ಪಡಿಸುವಂತೆ ತನ್ನ ಸೇನಾಧಿಪತಿಗೆ ಆಜ್ಞಾಪಿಸಿದನು.

೪೦. ಸೋಮಶೇಖರರಾಜನು ಸೇನಾಧಿಪತಿಯನ್ನುದ್ದೇಶಿಸಿ 'ಪಾರಿತೋಷಕವನ್ನು ನೀಡಿ ಉಚಿತವಾದ ಮಾತುಗಳನ್ನು ಆಡುತ್ತಾ, ನೀತಿವಿಷಯಕವಾದ ಪ್ರಯತ್ನಗಳಿಂದ ಪ್ರಸನ್ನಗೊಳಿಸಿ ಮುನಿವರರನ್ನು ಶೃಂಗೇರಿಯಲ್ಲಿ ನೆಲೆಗೊಳಿಸು!' ಎಂದು ಆಪ್ಪಣೆ ಮಾಡಿದನು.

ನೃಪನ ಸೇನಾಪತಿಯಗುರು ಸಂದರ್ಶನ :-

೪೧. ಅನಂತರ ರಾಜನಿಂದ ಕಳುಹಲ್ಪಟ್ಟ ಚಾಣಾಕ್ಷನಾದ ಸೇನಾಪತಿಯು ಶ್ರೀ ಸಚ್ಚಿದಾನಂದ ಮುನೀಂದ್ರರ ಸನ್ನಿಧಿಗೆ ತೆರಳಿ, ಸಮಯವನ್ನು ಪ್ರತೀಕ್ಷಿಸಿ ಆವರ ಚರಣಕಮಲಗಳ ದರ್ಶನಮಾಡಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

೪೨. ರಾಜಾಧಿರಾಜರ ಉನ್ನತವಾದ ಶಿರಸ್ಸಿನಲ್ಲಿ ಶೋಭಿಸುವ ಕಿರೀಟಗಳ ಉಜ್ಜ್ವಲವಾದ ರತ್ನಗಳೆಂಬ ದೀಪಗಳಿಂದ ನೀರಾಜಿತವಾದ [illegible] ಚರಣ ಕಮಲಗಳಿಗೆ ನಮಸ್ಕರಿಸಿ, ಆತನು ಅಂಜಲಿಬದ್ಧನಾಗಿ ಪ್ರಾರ್ಥಿಸಿದನು.

ಸೇನಾಪತಿಯ ಪ್ರಾರ್ಥನೆ :–

೪೩. 'ಗುರುವರೇಣ್ಯರೆ! ನನ್ನನ್ನು ವಿರಾಜಮಾನನಾದ ಸೋಮಶೇಖರ ಮಹಾರಾಜನ ಸೇನಾಪತಿಯೆಂದು ತಾವು ತಿಳಿಯಬೇಕು. ಭಕ್ತಿಯಿಂದ ನಾನಾಡುತ್ತಿರುವ ಮಾತುಗಳನ್ನು ಆತನ ಮಾತುಗಳೆಂದೇ ಕೇಳಿ ಕ್ಷಿತಿಪತಿಯಲ್ಲಿ ದಯೆಯನ್ನು ತೋರಿರಿ.'

ಭೂಪತಿಕೃತ ಗುರುವರಸಾಂತ್ವನ :–

೪೪. 'ನನಗೆ ಅರಿವಿಲ್ಲದಂತೆ ಯಾವದೋ ದುರ್ಬುದ್ಧಿಯಿಂದ ಕಲ್ಪಿತವಾಗಿ ಯಾವುದು ಜರುಗಿದೆಯೊ ಅದರ ದೋಷಲೇಶದಲ್ಲಿಯೂ ನನ್ನನ್ನು ನೋಡಿಕೊಂಡು ತಾವು ಮನಸ್ಸನ್ನು, 'ಕೊಡಬೇಡಿರಿ' ಎಂದು ಮಹಾರಾಜರು ವಿನಂತಿಸಿಕೊಂಡಿದ್ದಾರೆ.

೪೫. 'ನನ್ನ ದೇಶದಲ್ಲಿ ಸಕಲ ಉಪದ್ರವವೂ ತಮ್ಮ ತಪಸ್ಸಿನಿಂದಲೇ ನಿತ್ಯವೂ ಪರಿಹಾರವಾಗುತ್ತಿದೆ. ಇಂತಹ ಮಹಿಮೆಯುಳ್ಳವರೂ, ತಪೋನಿಧಿಗಳೂ ಆದ ತಮಗೆ ಕ್ಷುದ್ರಜನರಿಂದ ಮನಸ್ಸಿಗೆ ಉಪದ್ರವವಾಗುವುದಾದರೂ ಹೇಗೆ?'

೪೬. 'ಹೀಗೆ ನಾನು ನುಡಿದಿರುವುದನ್ನು ಯೋಗಿವರರಲ್ಲಿ ನಿವೇದಿಸಿಕೊಂಡು ಅವರಿಗೆ ಕಾಣಿಕೆಯನ್ನು ಸಮರ್ಪಿಸಿ ಆದರದೊಡನೆ ಮಠದಲ್ಲಿ ನೆಲೆಗೊಳಿಸು' ಎಂದು ನನ್ನನ್ನು ಮಹಾರಾಜರು ಕಳುಹಿಸಿದ್ದಾರೆ.

೪೭. ಮತ್ತೆ ಮತ್ತೆ ಹೀಗೆ ಆದರದಿಂದ ಪ್ರಾರ್ಥಿಸುತ್ತಲಿದ್ದ ಸೇನಾಪತಿಯನ್ನು ಶ್ರೀ ಸಚ್ಚಿದಾನಂದಯತಿ ಪುಂಗವರು ಸೌಮ್ಯದೃಷ್ಟಿಯಿಂದ ನೋಡಿ ಆತನನ್ನು ದ್ವೇಷಿಸಿ ಪ್ರೇಮಪುರಸ್ಸರವಾದ ಮಾತುಗಳಿಂದ ನುಡಿದರು.

ಗುರುವರರ ಚಾತುರ್ಯದ ಉತ್ತರ :–

೪೮. 'ಇಂದ್ರನು ಮಳೆಗರೆಯುತ್ತಿರಲಾಗಿ ಸಸ್ಯಸಂಪತ್ತುಗಳು ವೃದ್ಧಿಗೊಳ್ಳುವಂತೆ ಸೋಮಶೇಖರ ನೃಪತಿಯು ರಾಜ್ಯವನ್ನು ಈತಿ ಬಾಧೆಯಿಲ್ಲದಂತೆ ಆಳುತ್ತಿರಲಾಗಿ ಸತ್ಪುರುಷರ ತಪಃಕ್ರಿಯೆಗಳು ವೃದ್ಧಿಸುತ್ತಿವೆ.'.

೪೯. 'ಗರ್ಜಿಸುತ್ತಿರುವ ಮೇಘಗಳ ಸಮೂಹದಿಂದ ಆವೃತವಾದ ಪೂರ್ಣಿಮಾ ಚಂದ್ರನ ನಿರ್ಮಲವಾದ ಬೆಳದಿಂಗಳು ಪ್ರಕಾಶಿಸದಿರುವಂತೆ, ಜಡಬುದ್ಧಿಯುಳ್ಳ ವ್ಯಕ್ತಿಗಳಿಂದಾವೃತರಾದ ರಾಜರ ಪ್ರಸಿದ್ಧನಾಗಿರುವ ಸದ್ಗುಣವೂ ಕೂಡ ಪ್ರಕಾಶಿಸುವುದಿಲ್ಲ'

CC-O. In Public Domain. Digitized by eGangotri

೫೦. 'ಹೀಗಿದ್ದರೂ ಸಹ ಕಾಲಕ್ರಮದಲ್ಲಿ ಸತ್ಪುರುಷರ ಸಹವಾಸದಿಂದ ಮತ್ತೊಮ್ಮೆ ಆ ಗುಣವು ಪ್ರಸನ್ನತೆಯನ್ನು ಪಡೆಯುತ್ತದೆ ಎಂದು ಎದುರು ನೋಡುತ್ತಲೇ ಬಹುಕಾಲದಿಂದ ಹೊರಗಡೆ ವಾಸಿಸುತ್ತಿದ್ದೆವು. ಇನ್ನು ಮುಂದೆ ರಾಜನ ಮಾತನ್ನು ಒಪ್ಪುತ್ತೇವೆ.'

ತೀರ್ಥಹಳ್ಳಿಯಿಂದ ಶ್ರೀಗಳ ಶೃಂಗೇರಿಯತ್ತ ಗಮನ :-

೫೧. ಈ ರೀತಿ ಆತನಿಗೆ ನುಡಿದು ಆಗ ಸ್ವಜನರಿಂದಲೂ, ಆ ಸೇನಾ ಪತಿಯಿಂದಲೂ ಸೇವಿತರಾದ, ಉದಾರಮನಸ್ಕರಾದ ಶ್ರೀ ಸಚ್ಚಿದಾನಂದಗುರುಗಳು ತೀರ್ಥಹಳ್ಳಿಯಿಂದ ಸಂಭ್ರಮದಿಂದ ಹೊರಟರು.

೫೨. ಮಾರ್ಗದಲ್ಲಿ ಸಮಸ್ತ ಸೈನಿಕರೊಡನೆ ತೆರಳುತ್ತಲಿದ್ದ ಗುರುವರರನ್ನು ಆವರ ಸನ್ನಿಧಿಯನ್ನು ತ್ಯಜಿಸಲು ಇಚ್ಛಿಸದಿರುವ ಪುರಜನರು ಹಿಂಬಾಲಿಸಿದರು. ಅನಂತರ ನಾಗರಿಕರು ಆವರನ್ನು ಸಂದರ್ಶಿಸಿದವರಾಗಿ ನಮಸ್ಕರಿಸಿ ಆನಂದದಿಂದ ಕಾಣಿಕೆಗಳನ್ನು ಸಲ್ಲಿಸಿದರು.

೫೩. ಇವರೆಲ್ಲರಿಂದಲೂ ಹಾಗೂ ವಂದಿಮಾಗಧರಿಂದಲೂ ಸ್ತುತಿಸಲ್ಪಡುತ್ತಾ, ಮಹಾರಾಜರ ವಾದ್ಯಗಳಿಂದ ಗುಹೆಗಳನ್ನು ತುಂಬುವಂತೆ ಮಾಡುತ್ತಾ, ಸುಂದರ ವಾದ ಶ್ವೇತಚ್ಛತ್ರಿಯನ್ನುಳ್ಳ ದೇಶಿಕ ಪುಂಗವರು ಶೃಂಗಪುರಕ್ಕೆ ಹೊರಟರು.

ಶ್ರೀ ಗಳ ಶೃಂಗೇರಿಗೆ ಆಗಮನ - ಪೌರರ ಸನ್ಮಾನ :-

೫೪. ಫಲವನ್ನು ಕೈಯ್ಯಲ್ಲಿ ಹಿಡಿದಿರುವ ಸ್ವಜನರಿಂದಲೂ, ಊರಿನ ಮುಂದೆ ಎದುರ್ಗೊಳ್ಳಲ್ಪಟ್ಟವರಾದ ಜಗದ್ಗುರುಗಳು ಜಯಲಕ್ಷ್ಮೀ ಸಮೇತನಾದ ದೇವರಾಜ ನಂತೆ ಆ ಶೃಂಗಪುರದಲ್ಲಿ ಶೋಭಿಸಿದರು.

ಶ್ರೀ ಗಳವರಿಂದ ಬ್ರಾಹ್ಮಣ್ಯದ ಸಂರಕ್ಷಣೆ :-

೫೫. 'ಹಿಂದೆ ವರಾಹಾವತಾರದಲ್ಲಿ ಮಹಾವಿಷ್ಣುವಿನಿಂದ ಭೂಮಂಡಲವು ಸ್ಥಿರಗೊಳಿಸಲ್ಪಟ್ಟಂತೆ ಈ ಗುರುಗಳಿಂದ ಬ್ರಾಹ್ಮಣ್ಯವು ಸ್ಥಿರಗೊಳಿಸಲ್ಪಟ್ಟಿದೆ' ಎಂಬುದಾಗಿ ಶೃಂಗಪುರದಲ್ಲಿ ಮನೆಮನೆಯಲ್ಲಿಯೂ ಮಹಾಜನರು ಪರಸ್ಪರ ಬಹುವಾಗಿ ಪ್ರಶಂಸಿಸುತ್ತಿದ್ದರು.

೫೬. ಅನಂತರ ಆನಂದಭರಿತರಾದ ನಾಗರಿಕರು ಅನೇಕ ಆರತಿಗಳನ್ನು ಗುರುವರರಿಗೆ ಬೆಳಗಿದರು. ಎಲ್ಲಿಡೆಯಿಂದಲೂ ಪುಷ್ಪಸಹಿತವಾದ ಅರಳುಗಳನ್ನು ಅರ್ಪಿಸಿದರು, ಮತ್ತು ಅನೇಕ ಬಾರಿ ನಮಸ್ಕರಿಸಿದರು.

CC-O. In Public Domain. Digitized by eGangotri

ಸ್ತಂಭಹೇರಂಬಾರ್ಚನ :-

೫೭. ಆಗ ಆನಂದಭರಿತರಾದ ಶ್ರೀ ಸಚ್ಚಿದಾನಂದರು ಮಲ್ಲಿಕಾರ್ಜುನ ಬೆಟ್ಟದಲ್ಲಿ ಶಿಲಾಸ್ತಂಭದಲ್ಲಿ ಶೋಭಿಸುತ್ತಿದ್ದ ವಿಘ್ನೇಶ್ವರನನ್ನು ಪೂಜಿಸಿ ಕಲ್ಲು ಸಕ್ಕರೆಯ ರಾಶಿಯನ್ನು ನೈವೇದ್ಯ ಮಾಡಿದರು.

೫೮. ಅನಂತರ ಭವಾನೀಸಹಿತನಾದ ಮಲ್ಲಿಕಾರ್ಜುನನಿಗೆ ನಮಸ್ಕರಿಸಿ, ಪ್ರಾಜ್ಞರಾದ ಗುರುಗಳು ಮಠದ ಕಡೆಗೆ ತೆರಳಿದರು. ಅಲ್ಲಿಯೂ ಸಹ ವಿದ್ಯಾಶಂಕರರನ್ನೂ, ಹಾಗೂ ಶಾರದಾಂಬೆಯನ್ನೂ ಸಂತೋಷದಿಂದ ವಿಧಿಪೂರ್ವಕವಾಗಿ ಪೂಜೆ ಸಲ್ಲಿಸಿದರು.

೫೯. ಅನಂತರ ಮಠದಲ್ಲಿ ಪ್ರಶಸ್ತವಾದ ಆಸನದಲ್ಲಿ ಕುಳಿತು ಆ ಮುನೀಶ್ವರರು ತಮ್ಮನ್ನು ಅನುಸರಿಸಿ ಬಂದ ಜನರನ್ನು ಯಥೋಚಿತವಾದ ಮಾತುಗಳಿಂದ ತಮ್ಮ ಮನೆಗಳಿಗೆ ಹಿಂತಿರುಗಲು ಆದರಪೂರ್ವಕವಾಗಿ ಅನುಮತಿ ನೀಡಿದರು.

೬೦. ಬಳಿಕ, ಶರತ್ಕಾಲದಲ್ಲಿ ಪ್ರತಾಪದಿಂದ ಭೇದಿಸಲ್ಪಟ್ಟ ಮೇಘಮಂಡಲವನ್ನುಳ್ಳ ಸೂರ್ಯನಂತೆ ಗುರುರಾಜರು ರಾಜಾಧಿರಾಜರಿಂದ ಅರ್ಚಿತವಾದ ಪಾದಕಮಲವುಳ್ಳವರಾಗಿಯೂ, ತಪೋಬಲದಿಂದ ಶತ್ರುಗಳೆಂಬ ಧೂಳಿಗಳನ್ನು ಅಡಗಿಸಿದವರಾಗಿಯೂ ಪ್ರಕಾಶಿಸಿದರು.

೬೧. ವಿದ್ವಾಂಸರುಗಳಿಂದ ಒಡಗೂಡಿದವರಾಗಿ, ನಕ್ಷತ್ರಗಳ ನಡುವೆ ಶುಕ್ರನಂತೆ, ಶುಕ್ಲಪಕ್ಷದಲ್ಲಿ ಚಂದ್ರನಂತೆ ದಿಕ್ಕುದಿಕ್ಕುಗಳಲ್ಲಿಯೂ ಬೆಳದಿಂಗಳ ಸಮೂಹವನ್ನು (ಜ್ಞಾನ ಜ್ಯೋತಿಯನ್ನು) ಸಂತತವಾಗಿ ಹರಡುತ್ತಾ, ಕೀರ್ತಿಯಿಂದ ಖ್ಯಾತರಾಗಿ, ವಚನಾಮೃತದಿಂದ ಸಕಲಶಿಷ್ಯರಿಗೂ ಆನಂದವುಂಟುಮಾಡುತ್ತಾ ಸತ್ಪುರುಷರ ಸಹಿತರಾಗಿ, ಸಭೆಯಲ್ಲಿ ಮಹಾಮಹಿಮರಾದ ಸಚ್ಚಿದಾನಂದಯೋಗಿಗಳು ವಿಶೇಷವಾಗಿ ಪ್ರಕಾಶಮಾನರಾಗಿದ್ದರು.

ಶ್ರೀಗಳವರ ಮಹಿಮೆ ವರ್ಣನಾತೀತ :-

೬೨. ಸಮಸ್ತ ದ್ವೀಪಸಹಿತವಾದ ಭೂಮಂಡಲ, ಪರ್ವತಗಳವರೆಗೆ ವ್ಯಾಪಿಸಿದ್ದ ಕೀರ್ತಿಯುಳ್ಳ ಈ ಗುರುಗಳ ಮಹಿಮೆಯನ್ನು (ಚರಿತ್ರೆಯನ್ನು ವರ್ಣಿಸಲು ವಿದ್ವಾಂಸರಿಗೆ ಈ ಭೂಲೋಕದಲ್ಲಿ ಹೇಗೆ ಸಾಧ್ಯ ? ಒಂದು ವೇಳೆ ಸಹಸ್ರಮುಖನಾದ ಆದಿಶೇಷನು ವರ್ಣಿಸುವವನಾದರೆ ಆಗಲೂ ಇದು ವರ್ಣಿತವಾಗುವುದೋ ಇಲ್ಲವೋ ಎಂಬುದು ಊಹಿಸಲಸಾಧ್ಯ.

ಹದಿನೆಂಟನೆಯ ಸರ್ಗ ಸಮಾಪ್ತ :

ಏಕೋನವಿಂಶ ಸರ್ಗಃ

ದೇವತಾಮೂರ್ತಿ ನಿರ್ಮಾಪಣ :-

೧. ಈ ರೀತಿ ಸಮಸ್ತ ದಿಗ್ವಿಜಯವನ್ನೂ ಕೈಕೊಂಡು ಶೋಭಾಯಮಾನವಾದ ಶ್ರೀಮಠದಲ್ಲಿ ಗುರುವರರು ಶಿಲ್ಪಶಾಸ್ತ್ರವೇತ್ತರಾದ ಶಿಲ್ಪಿಗಳಿಂದ ಸುವರ್ಣ ಹಾಗೂ ರಜತದ ಸುಂದರವಾದ ದೇವತಾಮೂರ್ತಿಗಳನ್ನು ನಿರ್ಮಾಪಣಮಾಡಿಸಿದರು.

ದೇವತಾಮೂರ್ತಿ ಪ್ರತಿಷ್ಠಾಪನೆ :-

೨. ಉದಾರಿಗಳೂ, ವೇದಾಂತ, ಮಂತ್ರಶಾಸ್ತ್ರ, ಆಗಮಶಾಸ್ತ್ರಗಳ ತತ್ವವನ್ನು ರಿತನರೂ, ಆದ ಯತಿರಾಜರು ಗ್ರಹಬಲಯುತವಾದ ಸುಮುಹೂರ್ತದಲ್ಲಿ, ವಿಪ್ರರಿಂದ ಜಪಹೋಮಾದಿ ಅನುಷ್ಠಾನಗಳನ್ನು ಶಾಸ್ತ್ರೋಕ್ತರೀತ್ಯ ಮಾಡಿಸಿ ಭವ್ಯವಾದ ಆ ಮೂರ್ತಿಗಳನ್ನು ಪ್ರತಿಷ್ಠಾಪನ ಮಾಡಿಸಿದರು.

೩. ವೇದಾಂತ ತತ್ವದ ಪರಿಶೀಲನೆಯಲ್ಲಿ ಆಸಕ್ತವಾದ ಮನಸ್ಸುಳ್ಳವರೂ, ನಿದ್ವತ್ಸಮೂಹವೆಂಬ ಕಮಲಗಳಿಗೆ ಸೂರ್ಯಪ್ರಾಯರೂ, ಮಹಿಮೋನ್ವಿತರೂ ಆದ ಯತೀಂದ್ರರು ಈ ರೀತಿಯಾಗಿ ತನ್ಮ ಮತವಲ್ಲಿ, ಸಂತತವಾಗಿ ಪ್ರಜೆಗಳನ್ನು ರಕ್ಷಿಸುತ್ತಾ, ಕೆಲವು ದಿನಗಳನ್ನು ಕಳೆದರು.

ಶ್ರೀಗಳವರ ಕೊಲ್ಲಾಪುರೀ ಗಮನ :-

೪. ಪ್ರಶಸ್ತ ಮನಸ್ಕರೂ, ಸ್ತುತಿಪಾತಕರುಗಳಿಂದ ಸ್ತುತಿಸಲ್ಪಟ್ಟ ಸದ್ಗುಣರಾಶಿಯುಳ್ಳವರೂ ಆದ ಗುರುವರರು ಸಾವಾಜಿಕರಿಂದಲೂ, ಪರಿವಾರದಿಂದಲೂ ಪರಿವೃತರಾಗಿ ಮೂಕಾಂಬಿಕೆಯನ್ನು ಪೂಜಿಸಲು ಅನಂತರ ಸಕಲಸೇವತೆಗಳಿಗೆ ನೆಲೆಯಾಗಿರುವ ಕೊಲ್ಲೂರಿಗೆ ಹೊರಟರು.

ಮೂಕಾಂಬಿಕಾ ಸಮಾರಾಧನ :-

೫. ಮುನೀಂದ್ರರು ಮೂಕಾಂಬಿಕೆಯನ್ನು ವಿವಿಧ ಮಹೋಪಚಾರಗಳಿಂದಲೂ, ಮಹಾನ್ಯೆಭವಗಳಿಂದಲೂ ಆರ್ಚಿಸಿದರು. ಆಕೆಯ ಸಂತೋಷಕ್ಕಾಗಿ ಸಮಸ್ತ ವಿಪ್ರರ ಹಾಗೂ ಸುವಾಸಿನಿಯರ ಸಮೂಹಕ್ಕೆ ವಸ್ತ್ರಾದಿಗಳನ್ನು ನೀಡಿ ಸಂತೋಷಪಡಿಸಿದರು.

ಸಮುದ್ರಸ್ನಾನ ಕೋಟೇಶ್ವರ ದರ್ಶನ :-

೬. ಆಲ್ಲಿ ಮೂಕಾಂಬಿಕೆಯ ಪ್ರಸಾದವನ್ನು ಪಡೆದು ಗುರುವರರು ಕೋಟೇಶ್ವರವನ್ನು ಸಂದರ್ಶಿಸಲು ಅತ್ಯಂತ ಉತ್ಸುಕವಾದ ಮನಸ್ಸುಳ್ಳವರಾಗಿ ಅಲ್ಲಿಂದ ಹೊರಟೆ ಸಮುದ್ರದಲ್ಲಿ ಸ್ನಾನಮಾಡಿ ದೇವರನ್ನು ಪೂಜಿಸಿ ಬಹು ಸಂತೋಷ ಹೊಂದಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶಂಕರ ಭಗವತ್ಪಾದರ ಮಾತೃಭಕ್ತಿ

ಲೇಖಕರು :- ಬಿ. ವಿರೂಪಾಕ್ಷ ಭಟ್ಟ.

ಅತಿಪ್ರಾಚೀನಕಾಲದಿಂದಲೂ ನಮ್ಮೆಲ್ಲರ ಮಾತೃಭೂಮಿಯಾದ ಭಾರತವು ಉತ್ತಮ ಸಂಸ್ಕೃತಿಗೆ ಹೆಸರುವಾಸಿಯಾಗಿದೆ. ಕಾಲಕಾಲಕ್ಕೆ ಶಾಂತಿಪ್ರಿಯ ದೇಶವಾದ ಭಾರತದಲ್ಲಿ ಮಹಾಪುರುಷರುಗಳು ಜನಿಸಿ ಲೋಕಕಲ್ಯಾಣ ಮಾಡಿ ಧರ್ಮದ ಪುನರುಜ್ಜೀವನ ಮಾಡಿ ಕೀರ್ತಿ ಪಡೆದಿದ್ದಾರೆ. ಅಂತಹ ಮಹಾಪುರುಷರಲ್ಲಿ ಶ್ರೀ ಶಂಕರಾಚಾರ್ಯರು ಪ್ರಮುಖರೆನ್ನಬಹುದು. ನಾಸ್ತಿಕಮತಗಳು ತಾಂಡವವಾಡುತ್ತಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಶಿವಾವತಾರವಾಯಿತು. ಪರಮೇಶ್ವರನೇ ಲೋಕ ಕಲ್ಯಾಣಕ್ಕಾಗಿ ಶ್ರೀ ಶಂಕರಾಚಾರ್ಯರೆಂಬ ನಾಮದಿಂದ ಮಾನವ ಜನ್ಮ ತಾಳಿ ವೇದ ಸಮ್ಮತವಾದ ಸನಾತನ ಧರ್ಮವನ್ನು ಪುನಶ್ಚೇತನಗೊಳಿಸಿ ನಾಸ್ತಿಕರ ವಾದಗಳನ್ನು ಖಂಡಿಸಿ ಅದ್ವೈತ ಸಿದ್ಧಾಂತವನ್ನು ನಿರೂಪಿಸಿ ಪ್ರಚಾರ ಮಾಡಿರುವುದು ಜಗನ್ಮಾನ್ಯ ಸಂಗತಿಯಾಗಿದೆ.

ಜನ್ಮಕೊಟ್ಟ ತಾಯಿಯು ಹಾಗೂ ಮಾತೃಭೂಮಿಯು ಸ್ವರ್ಗಕ್ಕಿಂತಲೂ ಹೆಚ್ಚಿನವುದೆಂದು ವಿದ್ವಾಂಸರ ವಿಚಾರಧಾರೆಯಾಗಿದೆ. " ನ ಮಾತುಃ ಪರದೇವತಾ " ವೆಂಬಂತೆ ತಾಯಿಯ ಸ್ಥಾನ ಹಿರಿದಾಗಿದೆ ಎಂದು ಹೇಳಿರುವ ಅಂಶವು ಶಾಸ್ತ್ರ ಸಮ್ಮತವಾಗಿದೆ. " ಉಪ್ಪಿಗಿಂತ ರುಚಿ ಇಲ್ಲ ತಾಯಿಗಿಂತ ಬಂಧುವಿಲ್ಲ " ವೆಂಬ ಗಾದೆಯು ಮಾತುಗಳು ಹಾಗೂ " ಮಾತೃ ದೇವೋ ಭವ, ಪಿತೃ ದೇವೋ ಭವ, ಆಚಾರ್ಯ ದೇವೋ ಭವ " ಇವೇ ಮುಂತಾದ ವೇದ ಮಂತ್ರಗಳು ತಾಯಿಗೆ ಅಗ್ರಸ್ಥಾನ ನೀಡಿವೆ. ಜನ್ಮಕೊಟ್ಟ ತಾಯಿ ತಂದೆಯರ ಋಣವನ್ನು ತೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಮಹಾತ್ಮರೂ ಹಾಗೂ ಜಗದ್ಗುರುಗಳಾದ ಶ್ರೀ ಶಂಕರ ಭಗವತ್ಪಾದರು "ಕೆಟ್ಟ ಮಕ್ಕಳು ಹುಟ್ಟಬಹುದು. ಆದರೆ ಕೆಟ್ಟ ತಾಯಿಯು ಜನಿಸಲಾರಳು ಎಂಬ ಅಂಶವನ್ನು ಸ್ಪಷ್ಟಪಡಿಸಿ ತಾಯಿಯು ಕರುಣಾಮಯಿ " ಎಂದು ಮುಕ್ತಕಂಠದಿಂದ ತಾಯಿಯನ್ನು ಕೊಂಡಾಡಿದ್ದಾರೆ. ನಂಬೂದರೀ ಬ್ರಾಹ್ಮಣರಾದ ಶಿವಗುರು ಹಾಗೂ ಆರ್ಯಾಂಬರು ಧನ್ಯರು. ಪರಮೇಶ್ವರನು ಶಿವಗುರು—ಆರ್ಯಾಂಬರ ಉದರದಲ್ಲಿ ಜನಿಸಿದ ಶ್ರೀ ಶಂಕರರು ಅಸಾಧಾರಣ ಪಾಂಡಿತ್ಯದಿಂದ ಲೋಕಕಲ್ಯಾಣ ಕಾರ್ಯಗಳನ್ನು ಮಾಡಿದುದು ತಂದೆತಾಯಿಗಳ ಪುಣ್ಯ ಫಲವೆನ್ನಬಹುದು. ಈಶ್ವರನನ್ನೇ ಪುತ್ರನನ್ನಾಗಿ ಪಡೆದ ಶಿವಗುರು ಆರ್ಯಾಂಬರಿಗೆ ಪುನರ್ಜನ್ಮವೇ ಇಲ್ಲವೆಂದು ಧಾರಾಳವಾಗಿ ಹೇಳಬಹುದು.

" ಅಪುತ್ರಸ್ಯ ಗತಿರ್ನಾಸ್ತಿ " ವೆಂದು ಉಲ್ಲೇಖವಿರುವುದರಿಂದ ಶಿವಗುರು ಆರ್ಯಾಂಬರ ವಿವಾಹವಾಗಿ ಅನೇಕ ವರ್ಷಗಳು ಕಳೆದರೂ ಸಂತಾನವಾಗದೇ ಇದ್ದ ಕಾರಣ ದಂಪತಿಗಳು ಚಿಂತಾಕ್ರಾಂತರಾದರು. ಪರಮಶಿವಭಕ್ತರಾದ ಈ ದಂಪತಿಗಳು ತಮ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಆರಾಧ್ಯದೈವವಾದ ವೃಷಾಚಲೇಶ್ವರನನ್ನು ನಿತ್ಯವೂ ಅನನ್ಯಭಕ್ತಿಯಿಂದ ಆರಾಧಿಸುತ್ತಿದ್ದರು. ಅವರ ಭಕ್ತಿಗೆ ಮೆಚ್ಚಿ ಈಶ್ವರನು ಸಂತುಷ್ಟನಾಗಿ ಒಂದು ದಿನ ಕನಸಿನಲ್ಲಿ "ನಿನ್ನ ಭಕ್ತಿಗೆ ಮೆಚ್ಚಿದ್ದೇನೆ. ನಿನ್ನ ಬಯಕೆಯೂ ನನಗೆ ಗೊತ್ತಿದೆ. ದೀರ್ಘಾಯುಗಳಾದ ಅನೇಕ ದುಷ್ಪುಮಕ್ಕಳು ಬೇಕೋ ಇಲ್ಲವೇ ಸರ್ವಜ್ಞನಾದ ಅಲ್ಪಾಯುಷ್ಯವುಳ್ಳ ಒಬ್ಬ ಸುಪುತ್ರನು ಬೇಕೋ ಎಂದು ಕೇಳಲು ಸರ್ವಜ್ಞನಾದ ಒಬ್ಬ ಸುಪುತ್ರ ಬೇಕೆಂದು ಹೇಳಲು ಹಾಗೆಯೇ ಆಗಲಿ ಎಂದು ಹೇಳಿ ಈಶ್ವರನು ಅದೃಶ್ಯನಾದನು. ಕೆಲವೇ ದಿವಸಗಳಲ್ಲಿ ಆರ್ಯಾಂಬಳು ಗರ್ಭವತಿಯಾಗಿ ನವಮಾಸಗಳು ತುಂಬಿದ ಕೂಡಲೇ ವೈಶಾಖ ಶುದ್ಧ ಪಂಚಮಿಯ ದಿವಸ ಪುನರ್ವಸು ನಕ್ಷತ್ರ, ಮಿಥುನರಾಶಿಯಲ್ಲಿಯೂ ಸುದಿನಲ್ಲಿ ೨ ಗ್ರಹಗಳು ಶುಭವಾಗಿರುವ ಸಮಯದಲ್ಲಿ ಪುತ್ರರತ್ನನನ್ನು ಹೆತ್ತಳು. ಈಶ್ವರಾನುಗ್ರಹದಿಂದ ಜನಿಸಿದ ಮಗುವಿಗೆ "ಶಂಕರ" ವೆಂದು ನಾಮಕರಣ ಮಾಡಿದರು. ಸರ್ವರಿಗೂ ಸುಖವನ್ನು ಕೊಡುವವರೆಂದು ಶಂಕರವೆಂಬ ನಾಮವೇ ತಿಳಿಸುತ್ತದೆ. "ಸುಖಂಕರೋತೀತಿ ಶಂಕರಃ" ವೆಂದರ್ಥವಾಗುತ್ತದೆ. ಚಿಕ್ಕಮಗುವಿದ್ದಾಗಲೇ ಬಾಲಲೀಲೆಗಳನ್ನು ತೋರಿಸಿ ಜನರನ್ನು ಬೆರಗುಗೊಳಿಸಿದರು. ಸಂಪ್ರದಾಯದಂತೆ ೫ನೆಯ ವಯಸ್ಸಿನಲ್ಲಿಯೇ ಶ್ರೀಶಂಕರರ ಉಪನಯನವಾಗಿ ಸಕಲ ಶಾಸ್ತ್ರಗಳು, ವೇದಗಳು, ಪುರಾಣ ಇತಿಹಾಸಗಳಲ್ಲಿ ಪಾರಂಗತರಾದರು.

"ಪ್ರಾಣಿಮಾತ್ರಕ್ಕೆ ಯಾವಾಗ ಏನು ಆದೀತೆಂಬುವದು ನಿಯಮದ್ದಲ್ಲ" ವೆಂದು ಬಾಣ ಕವಿಯು ತನ್ನ "ಕಾದಂಬರಿ" ಯಲ್ಲಿ ಹೇಳಿದ ಮಾತುಗಳು ಶಿವಗುರುವಿಗೂ ಅನ್ವಯಿಸುತ್ತದೆ. ಮಗನ ಅಭ್ಯುದಯ ನೋಡುವ ಪುಣ್ಯ ಶಿವಗುರುವಿಗೆ ಇದ್ದಿಲ್ಲವೆಂದು ಹೇಳಬಹುದು. ಶಿವಗುರುವು ವಿಧಿವಶರಾಗಿ ಕೈಲಾಸಕ್ಕೆ ಹೊರಟರು. ಪತಿಯಾದ ಶಿವಗುರುವು ವಿಧಿವಶರಾದ ಕೂಡಲೇ ತನ್ನ ಏಕಮಾತ್ರ ಪುತ್ರನಾದ ಶ್ರೀಶಂಕರರೇ ಆರ್ಯಾಂಬಳ ಆಶಾಕಿರಣವಾಗಿದ್ದರು. ತನ್ನ ಮಗನಿಗೆ ಮದುವೆ ಮಾಡಿ ಗೃಹಸ್ಥಾಶ್ರಮಿಯನ್ನಾಗಿ ಮಾಡಬೇಕೆಂಬ ಇಚ್ಛೆ ತಾಯಿಗಿದ್ದಿತು. ಆದರೆ ಶ್ರೀಶಂಕರರ ವಿಚಾರವೇ ಬೇರೆಯಾಗಿತ್ತು. ಅದ್ವೈತ ಮತಸ್ಥಾಪನೆ ಮಾಡಿ, ಮಾನವ ಕುಲವನ್ನು ಸಂಘಟಿಸಿ ಶಾಂತಿ ಸಮಾಧಾನ ಮಾರ್ಗಕ್ಕೆ ಎಳೆಯಬೇಕೆಂದು ನಿರ್ಧರಿಸಿದ್ದರು. ಸನ್ಯಾಸವನ್ನು ಸ್ವೀಕರಿಸಿ ಲೋಕಕಲ್ಯಾಣ ಕಾರ್ಯಗಳನ್ನು ಮಾಡುವುದಕ್ಕಾಗಿಯೇ ತಮ್ಮ ಜೀವನವನ್ನು ವಿನಿಯೋಗಿಸಬೇಕೆಂಬ ದೃಢ ಸಂಕಲ್ಪ ಅವರದಾಗಿತ್ತು.

ದೇಹವು ಶಾಶ್ವತವಲ್ಲ. ಸಂಸಾರದಲ್ಲಿ ಸುಖವಿಲ್ಲ. ಭಗವಂತನನ್ನು ಸದಾ ನೆನೆಯುತ್ತಿರಬೇಕು. ಅದು ಶಾಶ್ವತ ಶಾಂತಿಯನ್ನು ಕೊಡುತ್ತದೆ ಎಂದು ತಾಯಿಗೆ ಶ್ರೀಶಂಕರರು ಹೇಳಿದರು. ತಾಯಿಯ ಮನಸ್ಸನ್ನು ನೋಯಿಸದೆ ಸನ್ಯಾಸಿಯಾಗಲು ಅನುಮತಿಯನ್ನು ಪಡೆಯಬೇಕೆಂಬ ವಿಚಾರ ಶ್ರೀ ಶಂಕರರ ಮನಸ್ಸಿನಲ್ಲಿತ್ತು. ಒಂದು ದಿನ ತಾಯಿಯೊಂದಿಗೆ ಹೊಳೆ ಸ್ನಾನಕ್ಕೆ ಹೋದಾಗ ಇದಕ್ಕಿದ್ದ ಹಾಗೆ ಮುಳುಗಿ ಮುಳುಗಿ

CC-O. In Public Domain. Digitized by eGangotri

ಮಗನು ಏಳತೊಡಗಿದನು. ಕಂಗಾಲಾದ ತಾಯಿಯನ್ನು ಶ್ರೀಶಂಕರರು ನೋಡಿ ಗಟ್ಟಿಯಾಗಿ ಕೇಳಿಸುವಂತೆ ಕೂಗಿ ಹೇಳಿದರು. " ನನ್ನನ್ನು ಮೊಸಳೆಯು ಹಿಡಿದಿದೆ. ನನ್ನ ಅಂತ್ಯಕಾಲ ಸಮೀಪಿಸಿದಂತೆ ಕಾಣುತ್ತಿದೆ. ನಾನು ಈಗ ಆಪತ್ ಸನ್ಯಾಸ ಸ್ವೀಕರಿಸಿದಲ್ಲಿ ಮಾತ್ರ ಬದುಕುತ್ತೇನೆ. ಕೂಡಲೇ ನೀನು ಅನುಮತಿಯನ್ನು ಕೊಡು " ಎಂದ ಮಾತುಗಳನ್ನು ಕೇಳಿದ ತಾಯಿಯು ಏನು ತೋಚದೆ ಶ್ರೀಶಂಕರರು ಸನ್ಯಾಸಿಯಾಗಲು ತನ್ನ ಸಮ್ಮತಿಯನ್ನು ಕೊಟ್ಟ ಕೂಡಲೇ ಮೊಸಳೆಯು ಶ್ರೀಶಂಕರರ ಕಾಲುಗಳನ್ನು ಬಿಟ್ಟು ಅದೃಶ್ಯವಾಯಿತು. ತನ್ನ ಇಚ್ಛೆ ನೆರವೇರಿತೆಂದು ಶ್ರೀಶಂಕರರು ಹರ್ಷಗೊಂಡು ಹೊಳೆಯದಂಡೆಗೆ ಸುರಕ್ಷಿತವಾಗಿ ಬಂದರು

ಶ್ರೀ ಶಂಕರರು ಮನೆಗೆ ಬಂದ ಕೂಡಲೇ ತಾಯಿಗೆ ನಮಸ್ಕರಿಸಿ " ನಾನು ಯೋಗ್ಯ ಗುರುವನ್ನು ಆಶ್ರಯಿಸಲು ಮನೆ ಬಿಟ್ಟು ಹೋಗುತ್ತಿದ್ದೇನೆ. ಸನ್ಯಾಸಿಯಾಗಿ ವೇದಾಂತದ ರಹಸ್ಯವನ್ನು ಜನತೆಗೆ ತಿಳಿಸುವುದೇ ನನ್ನ ಜೀವನದ ಗುರಿಯಾಗಿದೆ. ಆಶೀರ್ವದಿಸಿ ಕಳಿಸಿಕೊಡು ನಾನು ಮನೆಬಿಟ್ಟು ಹೋಗುತ್ತೇನೆಂದು ನೀನು ಚಿಂತಿಸಬೇಡ. ನಿನ್ನ ಅಂತ್ಯಕಾಲದಲ್ಲಿ ನಿನ್ನ ಹತ್ತಿರವೇ ಇರುತ್ತೇನೆ. " ಶಂಕರನೆಂದು " ನೀನು ಯಾವಾಗ ಸ್ಮರಿಸುವಿಯೋ ಆಗ ತಪ್ಪದೇ ದರ್ಶನ ಕೊಟ್ಟು ರಕ್ಷಿಸುತ್ತೇನೆ. ಇದು ಸತ್ಯವೆಂದು " ಹೇಳಿದರು. " ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಃ " ವೆಂಬಂತೆ ಶ್ರೀ ಶಂಕರರು ತನ್ನ ತಾಯಿಗೆ ಕೊಟ್ಟ ಭಾಷೆಯ ಪ್ರಕಾರ ನಡೆದುಕೊಂಡರು. ಈ ಅಂಶವನ್ನು ಗಮನಿಸಿದಲ್ಲಿ ಮಾತೃಸ್ಥಾನ ದೊಡ್ಡದು. ತಾಯಿಯೇ ಪ್ರತ್ಯಕ್ಷ ದೇವರು ಎಂದು ನನ್ನ ಅಭಿಮತವಾಗಿದೆ. ನಂತರ ಶ್ರೀಶಂಕರರು ನರ್ಮದಾ ನದಿತೀರದಲ್ಲಿರುವ ಗೋವಿಂದ ಭಗವತ್ಪಾದರ ದರ್ಶನ ಮಾಡಿಕೊಂಡು ತನ್ನನ್ನು ಶಿಷ್ಯನನ್ನಾಗಿ ಮಾಡಿಕೊಂಡು ವೇದಾಂತದ ರಹಸ್ಯ ತಿಳಿಸಬೇಕೆಂದು ಕೇಳಿಕೊಂಡರು. ಆಗ ಗೋವಿಂದಭಗವತ್ಪಾದರು " ನೀನು ಯಾರು " ಎಂದು ಪ್ರಶ್ನೆ ಮಾಡಿದರು. ಆಗ ಶ್ರೀಶಂಕರರು " ನಾನು ಇಂದ್ರಿಯಗಳಲ್ಲ. ಮನಸ್ಸು ಅಲ್ಲ. ಬುದ್ಧಿ ಅಲ್ಲ. ಎಲ್ಲವುಗಳಿಗೂ ಸಾಕ್ಷೀಭೂತನಾದ ಆತ್ಮನೇ ನಾನು " ಎಂದು ಉತ್ತರಿಸಿದರು, ಗುರುಗಳು ಹರ್ಷಗೊಂಡು ಅವರನ್ನು ಶಿಷ್ಯರನ್ನಾಗಿ ಮಾಡಿಕೊಂಡು ವೇದಾಂತದ ರಹಸ್ಯವನ್ನು ಉಪದೇಶಿಸಿದರು. ಗೋವಿಂದ ಭಗವತ್ಪಾದರ ಗುರುಗಳಾದ ಗೌಡಪಾದರ " ಮಾಂಡೂಕ್ಯಕಾರಿಕೆ " ಗೆ ಭಾಷ್ಯವನ್ನು ಶ್ರೀಶಂಕರರು ಬರೆದು ವೇದಾಂತದ ತಿರುಳನ್ನು ತಿಳಿಯಪಡಿಸಿದ್ದಾರೆ. ಭಾಷ್ಯಕಾರರಲ್ಲಿ ಶ್ರೀಶಂಕರರೇ ಮೊದಲಿಗರು. ಅವರ ಪ್ರಸ್ಥಾನತ್ರಯ ಭಾಷ್ಯವು ಸೂರ್ಯಚಂದ್ರರು ಇರುವವರೆಗೆ ಅಂದರೆ ಜಗತ್ತು ಪ್ರಳಯವಾಗುವವರೆಗೆ ಜಗತ್ಪ್ರಸಿದ್ಧಿಯಲ್ಲಿರುತ್ತದೆ ಎಂದು ಧಾರಾಳವಾಗಿ ಹೇಳಬಹುದು.

ಶ್ರೀಶಂಕರರು ಶೃಂಗೇರಿಯಲ್ಲಿದ್ದಾಗ ತಾಯಿಯು ತನ್ನ ಅಂತ್ಯಕಾಲ ಸಮೀಪಿಸಿದನ್ನು ಕಂಡು " ಶಂಕರ " ವೆಂದು ಸ್ಮರಿಸಿದಳು. ತ್ರಿಕಾಲಜ್ಞಾನಿಗಳಾದ ಶ್ರೀಶಂಕರರು

 CC-O. In Public Domain. Digitized by eGangotri

ತತ್‌ಕ್ಷಣವೇ ಕಾಲಟಿಗೆ ಹೋಗಿ (Kalady) ದರ್ಶನ ನೀಡಿ ಸಂತೋಷಪಡಿಸಿದರು. ಜಗದ್ವಿಖ್ಯಾತರಾದ ಶ್ರೀ ಶಂಕರರ ಅಭ್ಯುದಯ ನೋಡಿದ ಬಂಧುಗಳಿಗೆ ಸಹನೆಯಾಗದೇ ಅವರ ತಾಯಿಯು ವಿಧಿವಶರಾದ ಕೂಡಲೆ ಶವಸಂಸ್ಕಾರ ಮಾಡಲು ನಿರಾಕರಿಸಿದರು. ಶ್ರೀಶಂಕರರೇ ತನ್ಮ್ರ ತಾಯಿಯ ಶವಸಂಸ್ಕಾರಗಳನ್ನು ಮಾಡಿ ತಾಯಿಯ ಆಪೇಕ್ಷೆಯಂತೆ ವೈಕುಂಠಕ್ಕೆ ಕಳುಹಿಸಿದರೆಂದು ಅನೇಕ ಶಂಕರ ವಿಜಯಗಳು ಸಾರುತ್ತಲಿವೆ. ತನ್ಮ್ರ ಬಂಧುಗಳ ವರ್ತನೆ ಸಹಿಸದ ಶ್ರೀ ಶಂಕರರು ನಂಬೂದರಿ ಬ್ರಾಹ್ಮಣರಿರುವ ಕಾಲಟಿಗೆ ಅಗ್ರಹಾರದಲ್ಲಿ ಪ್ರತಿಯೊಂದು ಮನೆಯಲ್ಲಿ ಸ್ಮಶಾನವಿರಲಿ. ಆಂದರೆ ಮನೆಯಲ್ಲಿ ಯಾರಾದರೂ ಸತ್ತರೆ ತನ್ಮ್ರ ಮನೆಯ ಸ್ಮಶಾನದಲ್ಲಿಯೇ ಸುಡಬೇಕೆಂದು ಆಜ್ಞೆ ಮಾಡಿದರು. ನಂತರ ಪಶ್ಚಾತ್ತಾಪಗೊಂಡ ಬಂಧುಗಳು ಹಾಗೂ ನಂಬೂದರಿ ಬ್ರಾಹ್ಮಣ ಸಮಾಜವು ತಮ್ಮ ಮೇಲೆ ಕೃಪೆಮಾಡಿ ಶಾಪವನ್ನು ಪರಿಹರಿಸಬೇಕೆಂದು ದೈನ್ಯದಿಂದ ಕೇಳಿಕೊಳ್ಳಲಾಗಿ ಕೃಪಾಸಾಗರರಾದ ಶ್ರೀಶಂಕರ ಭಗವತ್ಪಾದರು " ನಾನು ಪುನಃ ಪುನಃ ವೈದಿಕಧರ್ಮದ ಪುನಸ್ಥಾಪನೆ ಹಾಗೂ ರಕ್ಷಣೆಗಾಗಿ ಅವತರಿಸುತ್ತಿರುತ್ತೇನೆ. ಶೃಂಗೇರಿ ದಕ್ಷಿಣಾಮ್ನಾಯ ಪೀಠದ 33 ನೇ ಗುರುವಾಗಿ ಅವತರಿಸಿ ಬಂದಾಗ ನಾನು ಕೊಟ್ಟ ಶಾಪ ವಿಮೋಚನೆಯಾಗುವುದೆಂದು " ಹೇಳಿದರು. ಶ್ರೀಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಮಹಾಸ್ವಾಮಿಗಳವರೇ ಶೃಂಗೇರಿಯ 33ನೆಯ ಗುರುಗಳಾಗಿದ್ದರಿಂದ ಅವರು ಶ್ರೀಶಂಕರರ ಅಪರಾವತಾರರಾಗಿದ್ದು ಶಾಪ ವಿಮೋಚನೆ ಮಾಡಿದರು ಎಂದು ಹೇಳಬಹುದು. 1866ನೇ ಇಸವಿಯಲ್ಲಿ ಸನ್ಯಾಸ ಪಡೆದ ಇವರು 1879ರಿಂದ 1912ರ ವರೆಗೆ ಶೃಂಗೇರಿಯ ಪೀಠವನ್ನು ಆಳಿ, ಕೈಲಾಸಗಮನ ಮಾಡಿದರೆಂಬ ವಿಷಯವು ಆದ್ವೈತಿಗಳಿಗೂ ಹಾಗೂ ಆಸ್ತಿಕರಿಗೆ ಸನ್ಮತವಾದ ಸಂಗತಿಯಾಗಿದೆ.

ಶ್ರವಣನ ತಂದೆತಾಯಿಗಳ ಭಕ್ತಿ ಪ್ರಸಿದ್ಧಿಯಲ್ಲಿದೆ. ಶ್ರೀಶಂಕರ ಭಗವತ್ಪಾದರ ಮಾತೃಭಕ್ತಿಯು ಅನುಕರಣೀಯವಾದುದು. ನುಡಿದಂತೆ ನಡೆದು ಜನ್ಮಕೊಟ್ಟ ತಂದೆ ತಾಯಿಗಳನ್ನು ಪ್ರೀತಿ ವಿಶ್ವಾಸ ಆದರಗಳಿಂದ ಕಂಡು ಅವರ ಸೇವೆ ಮಾಡಿದಲ್ಲಿ ನಮಗೆ ಒಳ್ಳೆಯ ಫಲವೇ ಸಿಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಶ್ರೀಶಂಕರ ಭಗವತ್ಪಾದರು ಸರ್ವರಿಗೂ ಕಲ್ಯಾಣವನ್ನುಂಟು ಮಾಡಲಿ ಹಾಗೂ ಮಾತಾಪಿತೃಗಳಲ್ಲಿ ಭಕ್ತಿಯನ್ನಿಡುವ ಬುದ್ಧಿಯನ್ನು ಆಸ್ತಿಕ ಜನರಿಗೀಯಲಿ ಎಂದು ಆಶಿಸುತ್ತೇನೆ.

CC-O. In Public Domain. Digitized by eGangotri

ಯಜ್ಞ ಯಾಗಗಳು ಈಗ ಅವಶ್ಯಕವೇ?

ಲ. ನ. ಶಾಸ್ತ್ರೀ

ಹೋಮ ಹವನಾದಿಗಳು, ಯಜ್ಞಯಾಗಾದಿಗಳು ಭರತಖಂಡದ ಸಾಂಸ್ಕೃತಿಕ ಚರಿತ್ರೆಯಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದಿವೆ. ಈ ಯಜ್ಞಯಾಗಾದಿಗಳ ಪ್ರಾಧಾನ್ಯದಿಂದಲೇ ವೇದದ ಪೂರ್ವಭಾಗಕ್ಕೆ ಕರ್ಮಕಾಂಡವೆಂದು ಹೆಸರು ಬಂದಿದೆ. ಪ್ರಾಚೀನಕಾಲದಲ್ಲಿ ಮಂತ್ರದ್ರಷ್ಟಾರರಾದ ಋಷಿಗಳು, ರೂಢಿಗೆ ತಂದ ಈ ವೈದಿಕ ಕರ್ಮಗಳು ಇಂದಿನ ವೈಜ್ಞಾನಿಕ ಯುಗದಲ್ಲಿ ಅವಶ್ಯಕವೇ? ಆಹಾರ ಪದಾರ್ಥಗಳು, ಮತ್ತಿತರ ಅಮೂಲ್ಯವಾದ ಪದಾರ್ಥಗಳನ್ನು ದೇವರ ಹೆಸರಿನಲ್ಲಿ ಬೆಂಕಿಗೆ ಹಾಕುವುದು ಮೌಢ್ಯವಲ್ಲವೇ? ಎಂದು ಮುಂತಾಗಿ ಇಂದಿನ ಬುದ್ಧಿವಂತರು ಪ್ರಶ್ನೆ ಮಾಡುತ್ತಾರೆ. ತಮ್ಮ ಅಸಮಾಧಾನವನ್ನು ಸೂಚಿಸಲು, ಇಂತಹ ಸಮಾರಂಭಗಳು ನಡೆಯುವ ಸ್ಥಳಕ್ಕೆ ಹೋಗಿ ತಮ್ಮ ಪ್ರತಿಭಟನೆಯನ್ನು ತೋರಿಸುತ್ತಾರೆ. ಇದು ವಿಚಾರ ಮಾಡಬೇಕಾದ ವಿಷಯ.

ಗಾಳಿಯಿಲ್ಲದೆ ಯಾವ ಪ್ರಾಣಿಯೂ ಬದುಕಲಾರದು. ಪ್ರತಿ ನಿಮಿಷದಲ್ಲಿಯೂ, ಪ್ರತಿ ಸೆಕೆಂಡಿನಲ್ಲಿಯೂ ಪ್ರಾಣಿಗಳು ಉಸಿರಾಡುತ್ತಲೇ ಇರುತ್ತವೆ. ಈ ಉಸಿರಾಟ ಅಥವಾ ಶ್ವಾಸೋಚ್ಛ್ವಾಸವು ಎಚ್ಚರದಲ್ಲಿಯೂ, ನಿದ್ರೆಯಲ್ಲಿಯೂ ಎಡೆಬಿಡದೆ ಸಾಗುತ್ತಲೇ ಇರುತ್ತದೆ. ಇದು ನಿಂತಾಗ ಪ್ರಾಣಿಯ ಚಟುವಟಿಕೆಯು ಸ್ತಬ್ಧವಾಗಿ ಆದು ಮೃತವಾಗುತ್ತದೆ.

ಗಾಳಿಯಂತೆಯೇ ಪ್ರಾಣಿಗಳಿಗೆ ನೀರೂ ಅವಶ್ಯಕವಾದುದು. ಅನಂತರ ಆಹಾರ, ಗಾಳಿಯೂ, ನೀರೂ, ಪ್ರಕೃತಿದತ್ತವಾದುವು. ಆಹಾರವೂ ಪ್ರಕೃತಿದತ್ತವೇ ಆದರೂ ಅದಕ್ಕೆ ಕೃಷಿಯು ಅವಶ್ಯಕವಿರುವುದರಿಂದ ಅದರ ವಿಚಾರ ಸದ್ಯಕ್ಕೆ ಅನವಶ್ಯಕ. ಜೀವರಾಶಿಗೆ ಶುದ್ಧವಾದ ಗಾಳಿಯೂ ನೀರೂ, ಶುದ್ಧವಾದ ಅತ್ಯಾವಶ್ಯಕವಾದ ವಸ್ತುಗಳು, ಇವು ಪೂರ್ಣವಾಗಿ ಪ್ರಕೃತಿಯ ಕೊಡುಗೆಗಳು.

ಉಸಿರಾಟದಲ್ಲಿ ಪ್ರಾಣಿಯು ಹೊರಗಿರುವ ವಾಯುವನ್ನು ಎಳೆದುಕೊಂಡು ಒಳಗಿರುವ ಮಲಿನ ವಾಯುವನ್ನು ಹೊರಕ್ಕೆ ಬಿಡುತ್ತದೆ. ಹೊರವಾಯುವಿನಲ್ಲಿರುವ ಆಮ್ಲಜನಕ ಬದುಕಲು ಅತ್ಯಾವಶ್ಯಕ. ಹಾಗೆಯೇ ಒಳಗಿರುವ ಇಂಗಾಲಾನಿಲ ಹೊರ ಹೋಗುವುದೂ ಅತ್ಯಾವಶ್ಯಕ. ಪ್ರಾಣಿಗಳ ಶ್ವಾಸಕೋಶದಲ್ಲಿ ಈ ವಿನಿಮಯ ಸದಾ ಆಗುತ್ತಲೇ ಇರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಪ್ರಾಣಿಗಳ ಶರೀರದಿಂದ ಹೊರಟ ಇಂಗಾಲಾಮ್ಲವು ವಾತಾವರಣವನ್ನೆಲ್ಲಾ ವ್ಯಾಪಿಸಿಬಿಟ್ಟಲ್ಲಿ ಪ್ರಾಣಿಜೀವನ ಎಂದೋ ನಿಂತು ಹೋಗಿ ಜೀವರಾಶಿಯಲ್ಲಾ ನಶಿಸಿ ಹೋಗುತ್ತಿತ್ತು. ಸಸ್ಯಗಳು ಪ್ರಾಣಿ ಶರೀರಕ್ಕೆ ಅನಗತ್ಯವಾದ ಇಂಗಾಲಾಮ್ಲವನ್ನು ತೆಗೆದುಕೊಂಡುಆಮ್ಲಜನಕವನ್ನು ಪ್ರತಿಯಾಗಿ ನೀಡುತ್ತವೆ. ಪ್ರಕೃತಿಯು ನಡೆಸುತ್ತಿರುವ ಈ ವಿನಿಮಯದಿಂದಾಗಿ ವಾತಾವರಣದಲ್ಲಿ ಆಮ್ಲಜನಕ, ಇಂಗಾಲಾಮ್ಲಗಳ ಬಳಕೆಯ ಸಮತೋಲನ ಉಂಟಾಗುತ್ತಿದೆ.

ಮಾನವನು ಪ್ರಕೃತಿದತ್ತವಾದ ಸೌಲಭ್ಯಗಳನ್ನೆಲ್ಲಾ ಉಪಯೋಗಿಸಿಕೊಂಡು ತೃಪ್ತಜೀವನವನ್ನು ನಡೆಸಬಹುದು. ಹಾಗಿದ್ದಲ್ಲಿ ಈ ನೈಸರ್ಗಿಕ ವಿನಿಮಯ ವ್ಯವಸ್ಥೆ ಸಮರ್ಪಕವಾಗಿ ನಡೆಯುತ್ತದೆ. ಆದರೆ ಮಾನವ ಮಹತ್ವಾಕಾಂಕ್ಷಿ ಅವನ ಸುಖದ ಕಲ್ಪನೆ ಕೃಷ್ಟಿಯ ಎಲ್ಲೆಯನ್ನು ದಾಟಿಬಿಟ್ಟಿದೆ. ಆ ಸುಖವನ್ನು ಪಡೆಯಲು ಆವನು ತನ್ನ ಚಟುವಟಿಕೆಯನ್ನು ವಿಸ್ತರಿಸಿಕೊಂಡಿದ್ದಾನೆ ದಿನದಿನವೂ ಹೊಸ ಹೊಸ ಸಂಶೋಧನೆಗಳನ್ನು ನಡೆಸಿ ಸುಖೀ ಜೀವನಕ್ಕಾಗಿ ನೂರಾರು ಸಾಧನಗಳನ್ನು ಸೃಷ್ಟಿಸಿದ್ದಾನೆ. ಅಷ್ಟೇ ಅಲ್ಲ ತನ್ನ ಸಮಕ್ಕೆ ಯಾರೂ ಬರಬಾರದು, ತನ್ನನ್ನು ಯಾರೂ ಮೀರಿಸಬಾರದು ಎಂಬ ಲೋಭವನ್ನೂ ಹೊಂದಿದ್ದಾನೆ. ನೂರಾರು ಕೈಗಾರಿಕೆಗಳನ್ನೂ ಸ್ಥಾಪಿಸಿಕೊಂಡಿದ್ದಾನೆ. ಸೀಮೆ ಎಣ್ಣೆ, ಪೆಟ್ರೋಲು ಮತ್ತು ಡೀಸಲ್ ಬಳಕೆ ಅವನಿಗೆ ಇಂದು ಉಸಿರಾಡುವ ಗಾಳಿ ಕುಡಿಯುವ ನೀರಿನಷ್ಟೇ ಅವಶ್ಯಕವಾಗಿದೆ. ಅಪನಂಬಿಕೆ ಅಸೂಯೆಗಳಿಂದ, ತನ್ನ ರಕ್ಷಣೆಗಾಗಿ ವಿರೋಧಿಗಳ ನಾಶಕ್ಕಾಗಿ, ಆಸ್ತ್ರಶಸ್ತ್ರಗಳನ್ನೂ ತಯಾರಿಸುತ್ತಿದ್ದಾನೆ. ಮಾರಕಾಸ್ತ್ರಗಳನ್ನೂ ಪ್ರಯೋಗಶಾಲೆಯಲ್ಲಿಯೂ ಹೊರಗಡೆಯಲ್ಲಿಯೂ ಆಗಾಗ ಪರೀಕ್ಷಿಸುತ್ತಲೂ ಇದ್ದಾನೆ. ಮರುಭೂಮಿಗಳು ಸಮುದ್ರದ ತಳ ಮುಂತಾದೆಡೆಗಳಲ್ಲಿ ಈ ಪರೀಕ್ಷೆಗಳು ಆಗಾಗ ನಡೆಯುತ್ತಲೇ ಇವೆ.

ಕೈಗಾರಿಕಾಗಾರಗಳಿಂದ, ಕಾರ್ಖಾನೆಗಳಿಂದ ಹೊರಟ ಕೆಟ್ಟ ಹೊಗೆಯು ವಾಯು ಮಂಡಲವನ್ನು ಮಲಿನ ಮಾಡುತ್ತಿದೆ. ಈ ಕಾರ್ಖಾನೆಗಳು ಹೊರಬಿಡುವ ನೀರಿನಿಂದ ಜಲಮಾಲಿನ್ಯವೂ ಆಗುತ್ತಿದೆ. ಮೋಟಾರು, ಬಸ್ಸು ಲಾರಿ ಕಾರುಗಳು ಹೊರಬಿಡುವ ಹೊಗೆಯಿಂದಲೂ ವಾಯು ಮಂಡಲವು ಮಲಿನವಾಗುತ್ತಿದೆ. ಬೀಡಿ ಸಿಗರೇಟುಗಳ ಹೊಗೆಯೂ ವಾಯುಮಾಲಿನ್ಯಕ್ಕೆ ತನ್ನ ಕೊಡುಗೆಯನ್ನು ಸಲ್ಲಿಸಿ ಅಪಕಾರ ಪರಂಪರೆಗೆ ತಾವೂ ನೆರವಾಗಿವೆ. ಪರೀಕ್ಷಾರ್ಥವಾಗಿ ನಡೆಸಲ್ಪಡುತ್ತಿರುವ ಅಣು ಬಾಂಬುಗಳ ಸಿಡಿತದಿಂದ ವಾಯುಮಾಲಿನ್ಯದ ಜೊತೆಗೆ ಜಲಮಾಲಿನ್ಯ, ಸ್ಥಳಮಾಲಿನ್ಯವೂ ಆಗುತ್ತಿದೆ. ಈ ವಾಯು, ಜಲ, ಸ್ಥಳಮಾಲಿನ್ಯದಿಂದ, ಹೊಸ ಹೊಸ ರೋಗ ರುಜಿನಗಳು ಕಾಣಿಸಿಕೊಳ್ಳುತ್ತಿವೆ. ಇವುಗಳಿಗೆ ಕಾರಣವಾದ ಕ್ರಿಮಿ ಕೀಟಗಳೂ, ಬ್ಯಾಕ್ಟೀರಿಯ ವೈರಸ್ಸುಗಳೂ ಹೆಚ್ಚುತ್ತಿವೆ.

CC-O. In Public Domain. Digitized by eGangotri

ರೋಗಾಣುಗಳನ್ನು ನಾಶಪಡಿಸುವದರಲ್ಲಿ ಪ್ರಕೃತಿಯು ಎರಡು ವಿಧವಾಗಿ ಕೆಲಸ ಮಾಡುತ್ತದೆ. ಮೊದಲನೆಯದು ಸೂರ್ಯಕಿರಣಗಳಿಂದ ವಾತಾವರಣದಲ್ಲಿ ಇರಬಹುದಾದ ರೋಗಾಣುಗಳು ತಕ್ಷಣಕ್ಕೆ ನಶಿಸುತ್ತವೆ. ಕಾಲಕಾಲಕ್ಕೆ ಸುರಿವ ಮಳೆಯಿಂದಲೂ, ವಾತಾವರಣ ಶುದ್ಧವಾಗಿ, ಹಳೆಯ ನೀರು ಹೋಗಿ, ಹೊಸ ನೀರು ಉಪಯೋಗಕ್ಕೆ ಬರುತ್ತದೆ. ಇದಲ್ಲದೆ ಹಲವು ಮರಗಿಡಗಳು ಬಿಡುವ ಪುಷ್ಪಗಳ ಸೌರಭವೂ ರೋಗಾಣುಗಳ ಮಾರಕ ಶಕ್ತಿಯನ್ನು ಪಡೆದಿವೆ.

ಪ್ರಾಣಿಗಳ ಉಸಿರಾಟದಿಂದ ಬಂದ ಇಂಗಾಲವನ್ನು ಸ್ವೀಕರಿಸಿ, ಸಸ್ಯಗಳು ಆಮ್ಲಜನಕವನ್ನು ಕೊಟ್ಟು ಸಮತೋಲನವನ್ನು ಸಾಕಷ್ಟು ಕಾಯ್ದುಕೊಳ್ಳಬಲ್ಲವು. ಆದರೆ ಈಗ ಆಗುತ್ತಿರುವ ವಾಯು ಮಾಲಿನ್ಯವು ಅತಿ ಹೆಚ್ಚಿನದಾಗಿದ್ದು, ನಿಸರ್ಗ ಅದನ್ನು ಸರಿಪಡಿಸಲಾರದು. ಇದರ ಜೊತೆಗೆ ಇಂದು ಸಸ್ಯಗಳ ನಾಶವೂ ವ್ಯವಸ್ಥಿತವಾಗಿ ನಡೆಯುತ್ತಿದ್ದು ಊರನ್ನು ವಿಸ್ತರಿಸಲು ಕಾಡನ್ನು ಕಡಿಯಲಾಗುತ್ತಿದೆ. ತೋಟ ಹೊಲಗದ್ದೆಗಳನ್ನು ನಾಶಪಡಿಸಲಾಗುತ್ತಿದೆ. ಎಷ್ಟೋ ಕಡೆಗಳಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸಲು ಅತ್ಯಮೂಲ್ಯವಾದ ಗಿಡ ಮೂಲಿಕೆಗಳುಳ್ಳ ಅರಣ್ಯವನ್ನು ನಾಶಪಡಿಸಿದ ನಿದರ್ಶನಗಳೂ ಇವೆ. ಇನ್ನು ನೈಸರ್ಗಿಕ ಸಮತೋಲನ ಹೇಗೆ ಉಂಟಾಗಬೇಕು?

ಹಿಂದೆ ಈ ದೇಶದಲ್ಲಿ ಹಲವು ವೈದಿಕ ಹವನ ಹೋಮುಗಳು ಎಲ್ಲ ಹಳ್ಳಿ ಊರುಗಳಲ್ಲಿಯೂ ನಡೆಯುತ್ತಿದ್ದವು. ಅಗ್ನಿಕಾರ್ಯ, ಅಗ್ನಿಹೋತ್ರ, ಬಲಿಹರಣೆ ಮುಂತಾದ ಕರ್ಮಗಳು ಸಾಮಾನ್ಯವಾಗಿ ಗ್ರಾಮದ ಬಹು ಮನೆಗಳಲ್ಲಿ ನಡೆಯುತ್ತಿದ್ದವು. ಹಿಂದೆ ವ್ಯವಸಾಯ ಮತ್ತು ಪಶುಪಾಲನೆಯೇ ಜನಜೀವನಕ್ಕೆ ಪ್ರಮುಖವಾಗಿದ್ದರಿಂದ ಗ್ರಾಮಗಳೇ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಶ್ರೀಮಂತರು, ರಾಜ ಮಹಾರಾಜರು ಬೃಹದ್ಯಜ್ಞಗಳನ್ನು ವಿಶೇಷವಾಗಿ ನಡೆಸುತ್ತಿದ್ದರು. ಇವು ಕೇವಲ ವೈಯಕ್ತಿಕ ಕಾಮ್ಯ ಸಿದ್ಧಿಗಳಿಗಾಗಿ ಆಗಿರದೆ ಸಮಷ್ಟಿಯ ಕಲ್ಯಾಣಕ್ಕಾಗಿ ನಡೆಯುತ್ತಿದ್ದವು. -" ಸರ್ವೇಷಾಂ ಅವಿರೋಧೇನ "- ನಡೆಸಲ್ಪಡುವ ಕರ್ಮಗಳಾಗಿದ್ದವು. ಅವುಗಳ ಮುಖ್ಯ ಉದ್ದೇಶ " ಶಂನೋ ಅಸ್ತು ದ್ವಿಪದೇ ಶಂ ಚತುಷ್ಪದೇ " ಎಂಬುದಾಗಿತ್ತು.

ಈ ಹೋಮ ಹವನಗಳಲ್ಲಿ ಅಮೂಲ್ಯವಾದ ತುಪ್ಪವೂ ಗಿಡಮೂಲಿಕೆಗಳೆ ಸಮಿತ್ತು ಅರ್ಪಿತವಾಗುತ್ತಿದ್ದು ಅವುಗಳ ಹೊಗೆಯು ಪರಿಮಳದಿಂದ ಕೂಡಿ, ವಾತಾವರಣವನ್ನು ಶುದ್ಧಿಗೊಳಿಸಿ ಅನೇಕ ರೀತಿಯ ವೈರಸ್, ಬ್ಯಾಕ್ಟೀರಿಯ, ಕ್ರೀಮಿಕೀಟಗಳ ನಾಶಕ್ಕೆ ಕಾರಣವಾಗಿತ್ತು. ಈ ಹೊಗೆಯಲ್ಲಿ ಹೈಡ್ರೋಜನ್ ಆಮ್ಲದ ಸೂಕ್ಷ್ಮವಾದ ಕಣಗಳು ತುಂಬಿದ್ದು ಅವು ಕ್ರಿಮಿಕೀಟಗಳ ನಾಶಕ್ಕೆ ಪರಿಣಾಮಕಾರಿಯಾಗಿದ್ದವು. ಆಕಾಶದಲ್ಲಿ ಮೋಡಗಳುಂಟಾಗಲು ಈ ಹೊಗೆಯು ನ್ಯೂಕ್ಲಿಯಸ್ - ಕೇಂದ್ರಬಿಂದುವಾಗಿ ಪರಿಣಮಿಸಿ ಅದರ ಸುತ್ತಲೂ ಜಲಾಂಶವು ಶೇಖರನಾಗಿ, ಮೋಡಗಳು ಮೂಡಲು ಸಹಾಯವಾಗು

 CC-O. In Public Domain. Digitized by eGangotri

ತ್ತಿತ್ತು. ಇವುಗಳಿಂದ ಕಾಲಕಾಲಕ್ಕೆ ಮಳೆಯೂ, ಸಸ್ಯಸಮೃದ್ಧಿಯೂ ಆಗುತ್ತಿದ್ದುವು ಔಷಧಿ ವನಸ್ಪತಿಗಳು ಶುದ್ಧವಾಗಿ ಮಾನವ ಜೀವನವು ರೋಗ ರುಜಿನಗಳಿಂದ ದೂರ ವಾಗಿರುತ್ತಿತ್ತು. ಹೊಸ ಮಳೆಯ ನೀರು ಬಿದ್ದಂತೆಲ್ಲಾ ಹಳೆಯ ನೀರನ್ನು ಕೊಚ್ಚಿ ಕೊಂಡು ಹೋಗುತ್ತಿದ್ದರಿಂದ ನಿಂತ ನೀರಿನಲ್ಲಿ ಇರಬಹುದಾದ ಜಲಮಾಲಿನ್ಯವೂ ನಾಶ ವಾಗುತ್ತಿತ್ತು, ರೋಗಾಣುಗಳೂ ನಾಶವಾಗುತ್ತಿದ್ದವು.

ಈ ಹೋಮ ಹವನಗಳನ್ನು ಕುರಿತ ವೈಜ್ಞಾನಿಕ ಸಂಶೋಧನೆಗಳು ವಿಸ್ಮಯ ಗೊಳಿಸುವಂಥವಾಗಿವೆ. ಹೋಮ ಹವನಗಳಲ್ಲಿ, ದೊಡ್ಡ ಯಜ್ಞ ಯಾಗಾದಿಗಳಲ್ಲಿ ಆಹುತಿಯನ್ನು ಕೊಡಲು ಉಪಯೋಗಿಸುವ ಪದಾರ್ಥಗಳಿಂದ ಆಲ್ಡಿಹೈಡ್, ಫಿನೋಲ್ ಮತ್ತು ಹಲವಾರು ಆವ್ಲಪದಾರ್ಥಗಳು ಉತ್ಪನ್ನವಾಗುತ್ತವೆ. ಇವು ಹೋಮಕುಂಡ ದಿಂದ ಆವಿಯ ರೂಪದಲ್ಲಿ ಹೊರಬಿದ್ದು, ವಾಯುಮಂಡಲದಲ್ಲಿ ಸೇರಿಕೊಳ್ಳುತ್ತವೆ. ಗಾಳಿಯಲ್ಲಿರುವ ದುರ್ಗಂಧವನ್ನೂ, ಮಾಲಿನ್ಯವನ್ನೂ ನಾಶಮಾಡುವುದರ ಜೊತೆಗೆ ರೋಗ ಕಾರಕವಾದ ವೈರಸ್, ಬ್ಯಾಕ್ಟೀರಿಯಾಗಳನ್ನು ನಾಶಮಾಡುತ್ತದೆ.

ಭಾರತೀಯರು ತಾವು ನಿತ್ಯವೂ ಮಾಡುವ ದೇವತಾರ್ಚನೆಯಲ್ಲಿಯೂ ಕೂಡ, ಸುಗಂಧಯುಕ್ತವಾದ ಪುಷ್ಪಗಳು, ಧೂಪ, ಕರ್ಪೂರ, ದೀಪಗಳು ಇವನ್ನು ಧಾರಾಳ ವಾಗಿ ಬಳಸುತ್ತಾರೆ. ಪುಷ್ಪಗಳ ಸುಗಂಧವು ಗಾಳಿಯಲ್ಲಿರುವ ಸೂಕ್ಷ್ಮವಾದ ಕ್ರಿಮಿ ಗಳನ್ನು ದೂರ ಮಾಡಿದರೆ ಧೂಪದೀಪಗಳು ಸಹ ಅವುಗಳನ್ನು ದೂರಮಾಡಲು ಸಹಾಯ ಮಾಡುತ್ತವೆ ಮತ್ತು ಸೂಕ್ಷ್ಮ ರೋಗಾಣುಗಳನ್ನೂ ನಾಶ ಮಾಡುತ್ತವೆ. ದೀಪಗಳನ್ನು ಉರಿಸಲು ಒಳ್ಳೆಯ ತೈಲಗಳನ್ನೂ, ತುಪ್ಪವನ್ನೂ ಆರತಿಗಾಗಿ ತುಪ್ಪದ ಬತ್ತಿಗಳನ್ನೂ ಕರ್ಪೂರವನ್ನೂ, ಉಪಯೋಗಿಸುವುದರಿಂದ ಸುತ್ತಣ ವಾತಾವರಣವು ಮಧುರವಾಗು ತ್ತದೆ. ಈ ಸುವಾಸನೆಯ ವಸ್ತುಗಳಲ್ಲಿ ರೋಗ ಪ್ರತಿಬಂಧಕ ಶಕ್ತಿಯೂ ಇದ್ದು ಇವು ಬ್ಯಾಕ್ಟೀರಿಯ, ವೈರಸ್‌ಗಳನ್ನು ನಾಶಮಾಡುತ್ತದೆ. ಈ ಸುವಾಸನೆಯ ವಸ್ತುಗಳು ದಹನಗೊಂಡಾಗ ಆಗುವ ರಾಸಾಯನಿಕ ಪರಿಣಾಮದಿಂದ ಮಹತ್ತರವಾದ ಪ್ರಯೋಜನ ವನ್ನು ಪಡೆಯಬಹುದು.

ಈ ಹೋಮ ಹವನಾದಿಗಳಿಗಾಗಿ ಉಪಯುಕ್ತವಾಗುವ ತುಪ್ಪ ಅಕ್ಕಿ ಗೋಧಿ ಮುಂತಾದುವನ್ನು ತಿಂದರೆ ಪುಷ್ಟಿಕರವಾಗಿ ಆರೋಗ್ಯವಾಗಿರಬಹುದು; ಅಲ್ಲಿ ಬಳಸುವ ಗಂಧ, ಕರ್ಪೂರ ಮುಂತಾದ ಸುಗಂಧ ವಸ್ತುಗಳನ್ನು ಲೇಪಿಸಿಕೊಂಡರೆ ದುರ್ಗಂಧವನ್ನು ಹೋಗಲಾಡಿಸಬಹುದು. ಇವನ್ನು ಬೆಂಕಿಗೆ ಹಾಕಿ ಸುಟ್ಟು, ಬೂದಿ ಮಾಡುವುದು ಆದೂ, ಈ ಬಡದೇಶದಲ್ಲಿ ಹಸಿದವರೇ ಹೆಚ್ಚಾಗಿರುವ ಈ ಹಿಂದುಳಿದ ದೇಶದಲ್ಲಿ, ಹೀಗೆ ಈ ಪದಾರ್ಥಗಳನ್ನು ಹಾಳು ಮಾಡುವುದು ಮಹದಪರಾಧ ಎಂದು ವಾದಿಸಬಹುದು. ಹೌದು, ಸರಿಯಾದ ಆಕ್ಷೇಪ. ಈ ಪದಾರ್ಥಗಳನ್ನೆಲ್ಲಾ ತೆಗೆದುಕೊಂಡು ಹೋಗಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ಮನೆಯ ಒಲೆಯಲ್ಲಿ ಹಾಕಿ ಸುಟ್ಟರೆ ಅದರಿಂದ ಪ್ರಯೋಜನವಿಲ್ಲ. ಅದು ವ್ಯರ್ಥವಾಗುತ್ತದೆ. ಇದನ್ನು ಮಂತ್ರಯುಕ್ತವಾಗಿ ಶುದ್ಧಿಗೊಳಿಸಿ, ಶಾಸ್ತ್ರಗಳಲ್ಲಿ ವಿಧಿಸಿರುವಂತೆ, ನಿಯಮ ಬದ್ಧವಾಗಿ, ಸಸ್ವರವಾಗಿ ಮಂತ್ರಘೋಷ ಮಾಡುತ್ತಾ, ಅಗ್ನಿಯಲ್ಲಿ ಸಮರ್ಪಣೆ ಮಾಡಿದರೆ, ಅದು ಪ್ರಯೋಜನಕರ. ನಮಗೆ ಸಹ್ಯ : ಫಲವನ್ನೀಯುವ ಕರ್ಮದಿಂದಷ್ಟೇ ಲಾಭ ಎಂದು ಭಾವಿಸುವುದು ತಪ್ಪು. ಬೀಜಕ್ಕಾಗಿ ಇಟ್ಟ ಭತ್ತವನ್ನು ಕುಟ್ಟಿ ಅಕ್ಕಿ ಮಾಡಿ, ನಾಲ್ಕಾರು ದಿನ ತಿಂದು ಮುಗಿಸಬಹುದು. ಅದೇ ಭತ್ತವನ್ನು ಉತ್ತ ನೆಲದಲ್ಲಿ ಬಿತ್ತಿ, ಕೃಷಿ ಮಾಡಿದಾಗ ವರ್ಷವೆಲ್ಲಾ ಉಣ್ಣಬಹುದಷ್ಟು ಭತ್ತ ದೊರಕುವುದಿಲ್ಲವೇ? ಹಾಗೆಯೇ ಹೋಮದಲ್ಲಿ ಸದ್ಭಾವನೆಯಿಂದ ಸಮರ್ಪಿತವಾದ ದ್ರವ್ಯಗಳಿಂದಲೂ ಮಹತ್ಫಲ ವುಂಟು. ಕೆಲವುಗಿಡಗಳು ಬೇಗ ಫಲ ನೀಡುತ್ತವೆ, ಕೆಲವು ನಿಧಾನವಾಗಿ ಫಲನೀಡುತ್ತವೆ.

ಈ ಯಜ್ಞ ಯಾಗಾದಿಗಳ ಲೌಕಿಕ ಪ್ರಯೋಜನ ವಾಯು ಜಲಮಾಲಿನ್ಯ ರೋಗೋತ್ಪತ್ತಿಗೆ ಕಾರಣವಾದ ಕ್ರೀಮಿಕೀಟಗಳ ನಾಶ. ಇವುಗಳ ಆಧ್ಯಾತ್ಮಿಕ ಪ್ರಯೋಜನ ಇನ್ನೂ ಹೆಚ್ಚಿನದು. ಒಬ್ಬ ಮನುಷ್ಯನು ಊಟ ಮಾಡುವಷ್ಟು ಅನ್ನವನ್ನೂ, ತುಪ್ಪವನ್ನೂ ಹೋಮ ಮಾಡುವುದರಿಂದ ಸಾವಿರಾರು ಜನರಿಗೆ ಪರೋಕ್ಷವಾದ ಪ್ರಯೋಜನವಾಗುತ್ತದೆ ಯಜ್ಞಯಾಗಾದಿಗಳ ಸಂದರ್ಭದಲ್ಲಿ ವೇದಮಂತ್ರಗಳ ಪಠನವಾಗುವುದರಿಂದ, ವೇದಶಾಸ್ತ್ರಗಳ ಪೋಷಣೆಗೆ ಸಹಾಯವಾಗುತ್ತದೆ. ಈ ಮಂತ್ರಗಳಲ್ಲಿ ಅದ್ಭುತವಾದ ಶಕ್ತಿಯಿದ್ದು, ಅವುಗಳ ನಿಯಮ ಬದ್ಧವೂ, ಸಸ್ವರವೂ ಆದ ಪಠನದಿಂದ ಹೊರಹೊಮ್ಮುವ ಶಬ್ದ ತರಂಗಗಳು ಮಾನವನ ಮನಸ್ಸನ್ನು ಪ್ರವೇಶಿಸಿ, ಅವನಲ್ಲಿರಬಹುದಾದ ಕಾಮ, ಕ್ರೋಧ, ಲೋಭ ಮುಂತಾದ ಅನೈತಿಕ ಭಾವನೆಗಳನ್ನು ಹೋಗಲಾಡಿಸುತ್ತವೆ. ಸದ್ಭಾವನೆಗಳನ್ನೂ ಮೂಡಿಸಲು ಸಮರ್ಥವಾಗುತ್ತವೆ. ಇವುಗಳಿಂದ ದೇಹಬಲ, ಮನೋಬಲ, ಬುದ್ಧಿಬಲವುಂಟಾಗಿ ಆತ್ಮ ಸಾಧನೆಗೆ ಪ್ರಯೋಜನವಾಗುತ್ತದೆ.

ಪೂರ್ವಕಾಲದಲ್ಲಿ ಗ್ರಾಮಕ್ಕೆ ಒಂದೋ, ಎರಡೋ ವೈದಿಕ ಮನೆತನಗಳಿದ್ದು ಅಲ್ಲಿ ನಡೆಯುತ್ತಿದ್ದ ವೇದ ಮಂತ್ರಗಳ ಪಾರಾಯಣ, ಅಗ್ನಿಹೋತ್ರ, ಶಾಸನಾದಿಗಳಿಂದ ಇಡೀ ಗ್ರಾಮಕ್ಕೆ ಫಲದೊರಕಿ, ಆ ಗ್ರಾಮದ ಎಲ್ಲ ಜನರೂ ಪರಸ್ಪರ ಮೈತ್ರಿ ವಿಶ್ವಾಸಗಳಿಂದಸುಖವಾಗಿ ಬಾಳುತ್ತಿದ್ದರು. ಅಲ್ಲಿ ರೋಗ ರುಜಿನಗಳಲ್ಲದೆ, ಕಾಲ ಕಾಲಕ್ಕೆ ಮಳೆ ಬೆಳೆಗಳುಂಟಾಗಿ ತೃಪ್ತ ಜೀವನ ನಡೆಸುತ್ತಿದ್ದರು. ಈಗ ಅವೆಲ್ಲಾ ಅಪರೂಪವಾಗುತ್ತಿವೆ. ಗ್ರಾಮ ಸಂಸ್ಕೃತಿಯು ನಾಶವಾಗಿ ಈಗ ನಾಗರಿಕತೆಯು ತನ್ನ ಪ್ರಭಾವವನ್ನು ಬೀರಿ, ಗ್ರಾಮದ ಮತ್ತು ಇಡೀ ದೇಶದ ಜನ ಜೀವನವನ್ನು ಅಲ್ಲೋಲ ಕಲ್ಲೋಲ ಮಾಡಿಬಿಟ್ಟಿದೆ.

ಈ ಯಜ್ಞಯಾಗಾದಿಗಳು, ಹೋಮಹವನಾದಿಗಳ ಆಚರಣೆಯ ಪ್ರಯೋಜನವನ್ನು ಈಗಲೂ ಪ್ರತ್ಯಕ್ಷವಾಗಿ ಕಂಡುಕೊಳ್ಳಬಹುದು. ಅದರಲ್ಲಿ ಭಾಗವಹಿಸುವ

CC-O. In Public Domain. Digitized by eGangotri

ಪ್ರತಿಯೊಬ್ಬ ವ್ಯಕ್ತಿಯೂ- ಶುದ್ಧ ಮನಸ್ಕನಾಗಿ, ಸದ್ಭಾವನೆಗಳಿಂದ ಕೂಡಿದ್ದು ಶ್ರದ್ಧಾ ಭಕ್ತಿಗಳಿಂದ ತನ್ನ ತನ್ನ ಪಾಲಿನ ಕರ್ತವ್ಯವನ್ನು ಪಾಲಿಸಿದಲ್ಲಿ ಖಂಡಿತವಾಗಿ ಪ್ರಯೋಜನ ವುಂಟಾಗುತ್ತದೆ. ಅದಕ್ಕೊಂದು ನಿದರ್ಶನವನ್ನು ಕೊಡಬಹುದು.

ಚರ್ಮರೋಗಗಳಿಂದ ಬಾಧೆ ಪಡುವವರಿಗೆ ಎಕ್ಸಿಮಾ, ಇಸಬು, ತುರಿಕಜ್ಜಿ, ಸೊರಿಯಾಸಿಸ್ ಮುಂತಾದ ಚರ್ಮರೋಗಗಳಿಂದ ಬಾಧೆ ಪಡುವವರಿಗೆ ಶ್ರೀಸುಬ್ರಹ್ಮಣ್ಯ ಜಪ, ಶ್ರೀ ಅಂಗಾರಕ ಮಂತ್ರಜಪ, ನವಗ್ರಹ ಹೋಮಮಾಡುವುದು ಇವೆಲ್ಲವನ್ನೂ ಬಲ್ಲವರು ಪರಿಹಾರವಾಗಿ ಸಲಹೆ ಮಾಡುತ್ತಾರೆ. ವೈದ್ಯರು ಹಲವಾರು ಮೂಲಿಕೆಗಳನ್ನು ಹಾಕಿ ಕುದಿಸಿದ ನೀರಿನ ಸ್ನಾನ, ಖಾದಿರಾಸವ, ಖಾದಿರಾರಿಷ್ಟಗಳ ಸೇವನೆ ಮುಂತಾದು ವನ್ನು ಹೇಳುತ್ತಾರೆ.

ಮಂತ್ರವನ್ನು ಸಂಕಲ್ಪ ಪೂರ್ವಕವಾಗಿ, ಶ್ರದ್ಧೆಯಿಂದ ಜಪಮಾಡುವಾಗ ಮನಸ್ಸು ಕ್ರಮೇಣ ಸ್ಥಿರಗೊಂಡು ಬಲವೂ , ಏಕಾಗ್ರವೂ ಆಗುತ್ತದೆ. ಮನಸ್ಸು ಬಲವಾದಂತೆ, ಅದರಲ್ಲಿರುವ ಅಶುದ್ಧ ಭಾವನೆಗಳು ಹೊರದೂಡಲ್ಪಡುತ್ತವೆ. ಮನಸ್ಸು ಶುದ್ಧವಾದಾಗ ಮನಸ್ಸಿನ ಸ್ಥೂಲರೂಪವೇ ಆದ ಈ ಶರೀರವೂ ಮನಸ್ಸಿನಂತೆಯೇ ಶುದ್ಧವಾಗಲು ಆರಂಭವಾಗುತ್ತದೆ. ಮಂತ್ರಗಳನ್ನು ಸಸ್ವರವಾಗಿ ಉಚ್ಚರಿಸುತ್ತಾ ಅಗ್ನಿಯಲ್ಲಿ ಖದಿರ ಸಮಿಧವನ್ನು ಹೋಮ ಮಾಡುತ್ತಾ ಇದ್ದಲ್ಲಿ ಆದರಿಂದ ಹೊರಟ ಧೂಮವು ಮನೆಯ ನ್ನೆಲ್ಲಾ ವ್ಯಾಪಿಸಿ ಆಲ್ಲಿರಬಹುದಾದ ವೈರಸ್, ಬ್ಯಾಕ್ಟೀರಿಯಾ, ಮುಂತಾದ ಸೂಕ್ಷ್ಮಾತಿ ಸೂಕ್ಷ್ಮ ಕ್ರಿಮಿಗಳನ್ನು ನಾಶಗೊಳಿಸುತ್ತದೆ. ಖಾದಿರಾಸವ, ಆರಿಷ್ಟಗಳು ಔಷಧರೂಪ ದಲ್ಲಿ ದೇಹದ ಒಳಗಡೆ ಪರಿಣಾಮ ಬೀರುತ್ತವೆ. ರೋಗ ಬಾಧೆಯು ಕ್ರಮೇಣ ಕಡಿಮೆ ಯಾಗಿ, ನಿಶ್ಶೇಷವಾಗಿ ಹೊರಟು ಹೋಗುತ್ತದೆ.

ಹೀಗೆಯೇ ದೈಹಿಕ, ಮಾನಸಿಕವಾದ ರೋಗಗಳೆಲ್ಲಕ್ಕೂ ನಡೆಸಲ್ಪಡಬಹುದಾದ ಹೋಮ ಹವನ ಜಪ ಪೂಜಾದಿಗಳಿರುತ್ತವೆ. ಜನಜೀವನವು 'ನಗರೀಕರಣ' ವಾದಂತೆಲ್ಲಾ ಗ್ರಾಮ ಸಂಸ್ಕೃತಿಗೆ ಅವಲಂಬನೆ ತಪ್ಪಿತು. ಸ್ವಾವಲಂಬಿಯಾಗಿದ್ದ ಗ್ರಾಮ ಜೀವನ ಪರಾವಲಂಬಿಯಾಯಿತು. ವೈದಿಕ, ಯಜ್ಞ ಯಾಗಾದಿಗಳ ವಿಧಿ ವಿಧಾನ, ಅಂತರಾರ್ಥ ಬಲ್ಲವರಿಗೂ ಆಧಾರ ಪ್ರೋತ್ಸಾಹ ತಪ್ಪಿತು. ಇವುಗಳನ್ನು ಸ್ವಾರ್ಥಕ್ಕಾಗಿ ಬಳಸುವವರಿಂದ ಇಡೀ ವೈದಿಕ ಸಮೂಹಕ್ಕೇ ಅಪಖ್ಯಾತಿ ಬರುವಂತಾ ಯಿತು. ಈ ವೈದಿಕ ಕರ್ಮಗಳ ಬಗೆಗೆ ಪಾಶ್ಚಾತ್ಯ ದೇಶಗಳಲ್ಲಿ ಹಲವಾರು ಸಂಶೋಧನೆ ಗಳು ನಡೆದಿದ್ದು, ಭಾರತೀಯ ಜನಜೀವನ, ಆಚಾರ ವಿಚಾರಗಳೆಲ್ಲವನ್ನೂ ಅವರು ವೈಜ್ಞಾನಿಕ ದೃಷ್ಟಿಯಿಂದ ಕೆದಕಿ ಬೆದಕಿ ನೋಡಿ, ಇಲ್ಲಿನ ಪ್ರತಿಯೊಂದು ನಡೆಗೂ ವೈಜ್ಞಾನಿಕ ಆಧಾರವಿರುವುದನ್ನು ಕಂಡುಕೊಳ್ಳುತ್ತಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಸಂಭವಿಸುತ್ತಿರುವ ವಾಯು ಜಲ ಮಾಲಿನ್ಯಗಳ ನಿವಾರಣೆಗೆ, ವಿಜ್ಞಾನಿಗಳು ಪರಿಹಾರವನ್ನು ಹುಡುಕಬೇಕಾದುದು ಅಗತ್ಯ. ಆಲ್ಲಿಯ ವರೆಗೆ ನಮ್ಮ ಪೂರ್ವಿಕರು ಆಚರಿಸುತ್ತಿದ್ದ ಅತ್ಯಂತ ಕಡಿಮೆ ವೆಚ್ಚದ ಹೋಮ ಹವನಗಳನ್ನು ನಡೆಸುವುದು ಪ್ರಯೋಜನಕರವಲ್ಲವೇ ?

ಭರತಖಂಡದಲ್ಲಿ ಇಂದಾದರೂ ಆಧುನಿಕ ವಿದ್ಯಾವಂತರೂ, ವೇದಶಾಸ್ತ್ರ ವಿಶಾರದರೂ ಕಲೆತು ವೈದಿಕ ಯಜ್ಞ ಯಾಗಾದಿಗಳು ಮಂತ್ರಗಳು ಪೂಜಾವಿಧಿಗಳನ್ನು ಕುರಿತು ಪ್ರಾಮಾಣಿಕವಾದ ಸಂಶೋಧನೆಗಳನ್ನು ನಡೆಸಬೇಕು. ವಿಜ್ಞಾನಿಗಳು ಸಂಶೋಧಿಸಿ ಕೊಟ್ಟಿರುವ ಎಲೆಕ್ಟ್ರಾನಿಕ್ ಉಪಕರಣಗಳಿಂದ, ಪ್ರಯೋಗಗಳನ್ನು ನಡೆಸಬೇಕು. ಈ ಎಲ್ಲ ಕರ್ಮಗಳ ಪ್ರಯೋಜನವನ್ನು ಎಲ್ಲರಿಗೂ ದೊರಕಿಸಿಕೊಡಬೇಕು. ಬ್ರಹ್ಮಚಾರಿಗಳು ನಡೆಸಬೇಕಾದ ಅಗ್ನಿಕಾರ್ಯ, ಗೃಹಸ್ಥರು ನಡೆಸಬೇಕಾದ ಅಗ್ನಿಹೋತ್ರ ಆದಿಲ್ಲವಾದರೆ ಔಪಾಸನೆ ಮುಂತಾದುದಕ್ಕೆ ಪ್ರೋತ್ಸಾಹ ದೊರಕಬೇಕು. ಆಗಾಗ ಹೋಮ ಹವನಗಳು ಅಲ್ಲಲ್ಲಿ ಸಣ್ಣ ಪ್ರಮಾಣದಲ್ಲಾದರೂ ನಡೆಯುತ್ತಿರುವಂತೆ ಶ್ರದ್ಧಾವಂತರೂ, ವೇದಶಾಸ್ತ್ರವಿದರೂ ಪ್ರಯತ್ನ ಮಾಡಬೇಕು.

Manufacturers Quality Products :

1. Red Oxide Primer
2. Red Oxide Zinc Chromate Primer
3. Aluminium Paint
4. Smoke Grey Enamel Paint

M/s. INDUSTRIAL PAINTS & CHEMICALS

21/2, VITTAL NAGAR

CHAMARAJAPET, BANGALORE - 560 018

Sri Vidyabharathi Book Centre, Sringeri

CC-O. In Public Domain. Digitized by eGangotri

ಅದ್ವೈತ ಸಿದ್ಧಾಂತದ ತಿರುಳು

ಲೇಖಕರು :- ಬಿ. ವಿರೂಪಾಕ್ಷ ಭಟ್ಟ

ಶ್ರುತಿ ಸ್ಮೃತಿ ಪುರಾಣಾನಾಮಾಲಯಂ ಕರುಣಾಲಯಂ ।
ನಮಾಮಿ ಭಗವತ್ಪಾದ ಶಂಕರಂ ಲೋಕಶಂಕರಂ ॥
ಶಂಕರಂ ಶಂಕರಾಚಾರ್ಯಂ ಕೇಶವಂ ಬಾದರಾಯಣಂ ।
ಸೂತ್ರ ಭಾಷ್ಯ ಕೃತೌ ವಂದೇ ಭಗವಂತೌ ಪುನಃ ಪುನಃ ॥
ಜಗದೇಕ ಗುರವಃ ಶ್ರೀಮಚ್ಛಂಕರ ಭಗವತ್ಪೂಜ್ಯ ಪಾದಾಃ ।

ಮಹಾತ್ಮರೂ ಹಾಗೂ ಜ್ಞಾನ ಸೂರ್ಯರಾದ ಶ್ರೀ ಶಂಕರ ಭಗವತ್ಪಾದರಿಗೆ ನನ್ನ ಅನಂತ ಪ್ರಣಾಮಗಳನ್ನು ಸಲ್ಲಿಸಿ ಅದ್ವೈತ ಸಿದ್ಧಾಂತದ ಬಗ್ಗೆ ಬರೆಯಲು ಸಂತೋಷವಾಗುತ್ತಿದೆ.

ಶ್ರೀ ಶಂಕರ ಭಗವತ್ಪಾದರು ಅದ್ವೈತ ಸಿದ್ಧಾಂತದ ತಿರುಳನ್ನು ಕೇವಲ ಅರ್ಧ ಶ್ಲೋಕದಲ್ಲಿ ತಿಳಿಸಿ ಮಹದುಪಕಾರವನ್ನು ಮಾಡಿದ್ದಾರೆ.

ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥ ಕೋಟಿಭಿಃ ।
ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ॥

ಸಚ್ಚಿದಾನಂದ ಸ್ವರೂಪನಾದ ಪರಬ್ರಹ್ಮನು ಮಾತ್ರ ಸತ್ಯವಸ್ತು. ಜಗತ್ತು ತೋರಿಕೆಗೆ ಮಾತ್ರ ಇದೆ. ಅದು ಮಿಥ್ಯೆ. ಜೀವಾತ್ಮ ಹಾಗೂ ಪರಮಾತ್ಮರಿಗೆ ಬೇಧವಿಲ್ಲ. ದೇವರು ಒಬ್ಬನೇ. ಶಿವ ವಿಷ್ಣುವಿನಲ್ಲಿ ಬೇಧವಿಲ್ಲವೆಂಬುದೇ ಶ್ರೀ ಶಂಕರ ಭಗವತ್ಪಾದರ ದಿವ್ಯ ಸಂದೇಶವಾಗಿದೆ. ವೇದ ಪ್ರತಿಪಾದ್ಯವಾದ ಅದ್ವೈತ ಸಿದ್ಧಾಂತವನ್ನು ತಪ್ಪು ಪ್ರಸ್ಥಾನತ್ರಯ ಭಾಷ್ಯ ರಚನೆಮಾಡಿ ಮಾನವ ಕೋಟಿಯ ಉದ್ಧಾರ ಮಾಡಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು. ಬ್ರಹ್ಮಸೂತ್ರಗಳು, ದಶೋಪನಿಷತ್ತುಗಳು ಹಾಗೂ ಭಗವದ್ಗೀತೆಗಳು ಶ್ರೀಶಂಕರರ ಸಿದ್ಧಾಂತಕ್ಕೆ ಆಧಾರ ಗ್ರಂಥಗಳಾಗಿವೆ. "ಪ್ರಜ್ಞಾನಂ ಬ್ರಹ್ಮ ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ ಮತ್ತು ಅಯಮಾತ್ಮಾ ಬ್ರಹ್ಮ" ಈ ನಾಲ್ಕು ಮಹಾ ವಾಕ್ಯಗಳು ಅದ್ವೈತ ವೇದಾಂತಕ್ಕೆ ಅಡಿಗಲ್ಲಾಗಿವೆ.

ಸಾಕ್ಷಾತ್ ಪರಮೇಶ್ವರನ ಅವತಾರವಾದ ಶ್ರೀಶಂಕರ ಭಗವತ್ಪಾದರು ಭೂಲೋಕದಲ್ಲಿ ಜನಿಸುವುದಕ್ಕಿಂತ ಮುಂಚಿತವಾಗಿ ಅದ್ವೈತತತ್ತ್ವವೇ ಪ್ರಜಲಿಸದಲ್ಲಿತ್ತೆಂದು ವಿದ್ವಾಂಸರುಗಳು ಅಭಿಪ್ರಾಯ ಪಟ್ಟಿದ್ದಾರೆ. ಶ್ರೀಶಂಕರರು ಬೌದ್ಧರ ಅನಾತ್ಮವಾದ

Sri Vidyabharathi Book Centre, Sringeri

 CC-O. In Public Domain. Digitized by eGangotri

ವನ್ನು ಜ್ಞಾನದ ಅನೇಕತ್ವವಾದವನ್ನು, ಚಾರ್ವಾಕರ ಲೋಕಾಯುತವಾದವನ್ನು ಖಂಡಿಸಿ ಅವರ ಕಾಲದಲ್ಲಿದ್ದ ನಾಸ್ತಿಕ ಮತಗಳನ್ನು ಖಂಡಿಸಿ ವೇದಮತವನ್ನು ಪುನರುಜ್ಜೀವನಗೊಳಿಸಿದರು. ಬ್ರಹ್ಮವು ಪರಮ ತತ್ತ್ವವಾಗಿದೆ. ಅದ್ವೈತ ಮುಖ್ಯ ಉದ್ದೇಶ ಪರಮ ತತ್ತ್ವವಾದ ಬ್ರಹ್ಮನನ್ನು ಅರಿಯುವುದೇ ಆಗಿದೆ ಎಂದು ಶ್ರೀಶಂಕರರು ಒಪ್ಪುತ್ತಾರೆ. ಜ್ಞಾನಮಾರ್ಗ ಪ್ರವರ್ತಕರಾದ ಶ್ರೀ ಶಂಕರರು " ನ ಹಿ ಜ್ಞಾನೇನ ಸದೃಶಂ " ಎಂಬ ಶ್ರೀಕೃಷ್ಣ ಪರಮಾತ್ಮನ ಸಂದೇಶವನ್ನು ಎತ್ತಿ ಹಿಡಿದು ಜ್ಞಾನದಿಂದಲೇ ಮೋಕ್ಷ ಎಂದು ಸ್ಪಷ್ಟಪಡಿಸಿದ್ದಾರೆ. ದುಃಖರಹಿತವಾದ ಅಖಂಡವಾದ ಆನಂದದಾಯಕವಾದ ಸ್ಥಿತಿಗೆ ಮೋಕ್ಷವೆಂದು ಹೇಳುವುದು ಸಮಂಜಸವಾದುದೆಂದು ಶ್ರೀ ಶಂಕರ ಭಗವತ್ಪಾದರಿಗೆ ಸಮ್ಮತವಾಗಿದೆ. ನಿತ್ಯವೂ, ಸ್ವಯಂಪ್ರಕಾಶವೂ ಅಖಂಡವೂ ಆದ ಚಿತ್ ತತ್ತ್ವದ ಜ್ಞಾನವೇ ಸರಿಯಾದ ಜ್ಞಾನವೆಂದು ಶ್ರೀ ಶಂಕರರು ಈ ಜ್ಞಾನವನ್ನು ಸ್ವರೂಪಜ್ಞಾನವೆಂದು ಕರೆದಿದ್ದಾರೆ. ಶ್ರವಣ, ಮನನ, ನಿದಿಧ್ಯಾಸನಗಳ ಅವಶ್ಯಕತೆಯನ್ನು ಸಹಾ ಶ್ರೀಶಂಕರರು ಒಪ್ಪುತ್ತಾರೆ. ಸನಾತನ ಧರ್ಮೋದ್ಧಾರಕರಲ್ಲಿ ಶ್ರೀಶಂಕರರು ಪ್ರಮುಖರು. ಅವರ ಕಾಲದಲ್ಲಿ ಪ್ರಚಲಿತವಿದ್ದ ಅದ್ವೈತ ಸಿದ್ಧಾಂತವನ್ನು ಸಮರ್ಪಕವಾದ ರೀತಿಯಲ್ಲಿ, ಪ್ರಸ್ಥಾನತ್ರಯ ಭಾಷ್ಯದ ಮೂಲಕ ತಿಳಿಸಿದ ಕೀರ್ತಿ ಶ್ರೀಶಂಕರರಿಗೆ ಸಲ್ಲುತ್ತದೆ.

ಶ್ರೀಶಂಕರರ ಪರಮ ಗುರುಗಳಾದ ಶ್ರೀ ಗೌಡಪಾದರು ತಮ್ಮ ಮಾಂಡೂಕ್ಯಕಾರಿಕೆಯಲ್ಲಿ " ಮಾಯಾ ಮಾತ್ರಮಿದಂ ದ್ವೈತಂ " ಎಂದು ಹೇಳಿ ಅದ್ವೈತವೇ ಪರಮ ತತ್ತ್ವ ಎಂದು ಹೇಳಿದ್ದಾರೆ.

" ಏಕಂ ಸತ್ಯಂ " ಎಂಬ ವೇದ ವಾಕ್ಯವನ್ನು ಶ್ರೀ ಗೌಡಪಾದರು ಅಕ್ಷರಶಃ ನಂಬಿದ್ದರು. ಅವಸ್ಥಾತ್ರಯಗಳಲ್ಲಿ ಸ್ಫುಟವಾಗಿ ಪ್ರಕಾಶಿಸುತ್ತಿರುವ ಚೈತನ್ಯವಾವುದೋ ಬ್ರಹ್ಮನಿಂದ ಹಿಡಿದು ಸಕಲ ಜೀವರಾಶಿಗಳಲ್ಲಿಯೂ ಸರ್ವಜಗತ್ತಿನಲ್ಲಿಯೂ ಪ್ರಕಾಶಿಸುತ್ತಿರುವ ಚೈತನ್ಯವೇ ನಾನು ಎಂದು ಶ್ರೀಶಂಕರರು " ಮನೀಷಾ ಪಂಚಕ " ದಲ್ಲಿ ಸ್ಪಷ್ಟಪಡಿಸಿದ್ದಾರೆ. ಉನ್ನತ ಮಟ್ಟದಲ್ಲಿರುವ ತತ್ತ್ವಗಳು ತಮಗಿಂತ ಸ್ವಲ್ಪ ಕೆಳಮಟ್ಟದಲ್ಲಿರುವ ತತ್ತ್ವಗಳನ್ನು ಮೆಟ್ಟಿ ನಿಲ್ಲುವುದಕ್ಕೆ ಬದಲಾಗಿ ಅವುಗಳಲ್ಲಿರುವ ಲೋಪದೋಷಗಳನ್ನು ನಿವಾರಣೆ ಮಾಡಿ ಅವುಗಳನ್ನು ಸಹಾ ತಲೆಯೆತ್ತಿ ನಿಲ್ಲುವಂತೆ ಮಾಡುತ್ತಿದ್ದವು. ದ್ವೈತಾದ್ವೈತಗಳು ಪರಸ್ಪರ ಸ್ಪರ್ಧೆಗಿಳಿಯ ಬೇಕಾದ ಪ್ರಮೇಯವಿಲ್ಲವೆಂದು ಗೌಡಪಾದರು ಹೇಳಿದ್ದಾರೆ. ಶ್ರೀ ಶಂಕರರು ರಾಮಾನುಜರನ್ನಾಗಲೀ, ಮಧ್ವಾಚಾರ್ಯರನ್ನಾಗಲೀ ತಮ್ಮ ಪ್ರಸ್ಥಾನತ್ರಯ ಭಾಷ್ಯದಲ್ಲಿ ಎಲ್ಲಿಯೂ ಉದಾಹರಿಸಿಲ್ಲವಾದ್ದರಿಂದ ಶ್ರೀ ಗೌಡಪಾದರ ಕಾಲದಲ್ಲಿ ಹಾಗೂ ಶ್ರೀ ಶಂಕರರ ಕಾಲದಲ್ಲಿ ಆಗಲೀ ವಿಶಿಷ್ಟಾ ದ್ವೈತಮತವಾಗಲೀ (ಶ್ರೀ ರಾಮಾನುಜರ), ದ್ವೈತಸಿದ್ಧಾಂತವಾಗಲೀ (ಮಧ್ವಾಚಾರ್ಯರ) ಪ್ರಚಲಿತದಲ್ಲಿ ಇದ್ದಿಲ್ಲವೆನ್ನುವದು ಸ್ಪಷ್ಟವಾಗುತ್ತಿದೆ.

CC-O. In Public Domain. Digitized by eGangotri

ಸರ್ವಂ ಖಲ್ವಿದಂ ಬ್ರಹ್ಮ, ಏಕನೇವಾದ್ವಿತೀಯಂ ಬ್ರಹ್ಮ, ಬ್ರಹ್ಮವಿದ್ ಬ್ರಹ್ಮೈವ ಭವತಿ, ಓಂ ತತ್ಸತ್‌ಗಳು ಸಹಾ ಅದ್ವೈತವನ್ನೇ ಬೋಧಿಸುತ್ತಿವೆ. ಋಗ್ವೇದದಲ್ಲಿ ಬರುವ ನಾಸದೀಯ ಸೂಕ್ತವು ಅದ್ವೈತ ತತ್ವವನ್ನೇ ಬೋಧಿಸುತ್ತಿದೆ. ಜನಸಾಮಾನ್ಯರ ದೃಷ್ಟಿಂ ಇಂದ ಹೇಳುವುದಾದರೆ " ಇದೇನು ಬ್ರಹ್ಮ ವಿದ್ಯೆ ಏನು " ಎಂದು ಮಾತನಾಡುವುದನ್ನು ಕೇಳಿದ್ದೇನೆ. ಆವರ ದೃಷ್ಟಿಯಲ್ಲಿ ಬ್ರಹ್ಮವಿದ್ಯೆ ಅತ್ಯಂತ ಕಠಿಣವಾದ ವಿದ್ಯೆಯಾಗಿದೆ. " ನಗುರೋರಧಿಕಂ " ಎಂಬಂತೆ ಆತ್ಮ ತತ್ವವನ್ನು ಗುರು ಮುಖೇನವೇ ತಿಳಿದುಕೊಳ್ಳಬೇಕು. ಸಂಸಾರ ಸಾಗರವನ್ನು ದಾಟಿಸುವ ಅಂಬಿಗನೆ ಗುರುವಾಗಿದ್ದಾನೆ. ಗುರೂಪದೇಶವಿಲ್ಲದೆ ಮನುಷ್ಯನು ಉದ್ಧಾರವಾಗಲಾರನೆಂದು ಶ್ರೀ ಶಂಕರರು ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಶಂಕರರ ಅದ್ವೈತ ಸಿದ್ಧಾಂತವನ್ನು ಅವರ ನಂತರ ಜನಿಸಿದ ಅನುಯಾಯಿಗಳು ಸಹಾ ಅನೇಕ ಗ್ರಂಥಗಳನ್ನು ಬರೆದು ಶ್ರೀ ಶಂಕರರ ವಿಚಾರಗಳನ್ನೇ ಅನುಮೋದಿಸಿದ್ದಾರೆ. ವಿವರಣ ಶಾಲೆ (Vivarana School) ಮತ್ತು ಭಾಮತಿಶಾಲೆ (Bhamati School) ಗಳು ಶ್ರೀ ಶಂಕರ ಸಿದ್ಧಾಂತವನ್ನು ಸಮರ್ಥಿಸಿವೆ. ಶ್ರೀ ಪ್ರಕಾಶಾತ್ಮನ್ನರು (Sri Prakasatman) ವಿವರಣಶಾಲೆಯ ಪ್ರಮುಖರು ಇವರು ಶ್ರೀ ಶಂಕರರಸಾಕ್ಷಾತ್ ಶಿಷ್ಯರಾದ ಶ್ರೀಪದ್ಮಪಾದರ ಪಂಚಪಾದಿಕಾ ಟೀಕೆಗೆ ವ್ಯಾಖ್ಯಾನವನ್ನು ಬರೆದು ಅದ್ವೈತತತ್ವವನ್ನು ಪ್ರಚಾರಮಾಡಿದರು. ಶ್ರೀಪ್ರಕಾಶಾತ್ಮನ್ನರ ವಿವರಣವನ್ನು ಅಖಂಡಾನಂದರು ತಮ್ಮ "ತತ್ವದೀಪನ" ದಲ್ಲಿ ವ್ಯಾಖ್ಯಾನಮಾಡಿದ್ದಾರೆ.

ಶ್ರೀ ವಾಚಸ್ಪತಿಯವರು ಭಾಮತಿಶಾಲೆಗೆ ಪ್ರಮುಖರು. ಶ್ರೀ ಅಮಲಾನಂದರು ಶ್ರೀ ವಾಚಸ್ಪತಿಯವರ ಭಾಮತಿಗೆ ವ್ಯಾಖ್ಯಾನವನ್ನುಮಾಡಿದ್ದಾರೆ. ಅವರ ವ್ಯಾಖ್ಯಾನವನ್ನು " ಕಲ್ಪತರು " ವಿನಲ್ಲಿ ನಾವು ನೋಡಬಹುದು. ಪರಮಶಿವಾವತಾರವಾದ ಶ್ರೀ ಅಪ್ಪಯ್ಯ ದೀಕ್ಷಿತರು ಶ್ರೀ ಅಮಲಾನಂದರು " ಕಲ್ಪತರುವಿನಲ್ಲಿ " ಉಲ್ಲೇಖಿಸಿದ ಮುಖ್ಯಾಂಶಗಳನ್ನು ತಮ್ಮ ಗ್ರಂಥವಾದ " ಪರಿಮಳ " ದಲ್ಲಿ ವಿವರವಾಗಿ ಹೇಳಿದ್ದಾರೆ. ಶ್ರೀ ಸುರೇಶ್ವರಾಚಾರ್ಯರ " ನೈಷ್ಕರ್ಮ್ಯಸಿದ್ಧಿ " (Naiskarmasiddhi) ಶ್ರೀ ಸರ್ವಜ್ಞಾತ್ಮಮುನಿಯವರ " ಸಂಕ್ಷೇಪಶಾರೀರಕ " ಶ್ರೀ ಆನಂದಬೋಧರ " ನ್ಯಾಯ ಮಕರಂದ " ವಿದ್ಯಾರಣ್ಯರ ವೇದಾಂತ ಪಂಚದಶಿ, ಶ್ರೀ ಮಧುಸೂಧನ ಸರಸ್ವತಿಯವರ " ಅದ್ವೈತಸಿದ್ಧಿ " ಗಳು ಶ್ರೀ ಶಂಕರಭಗವತ್ಪಾದರ ಅದ್ವೈತವೇದಾಂತದ ರಹಸ್ಯವನ್ನು ತಿಳಿಯಲು ರತ್ನಪ್ರಾಯವಾದ ಗ್ರಂಥಗಳಾಗಿವೆ. ಶ್ರೀ ಧರ್ಮರಾಜ ಅಧ್ವರೀಂದ್ರರ " ವೇದಾಂತಪರಿಭಾಷಾ " ಶ್ರೀ ಸದಾನಂದರ (Sri Sadananda) " ವೇದಾಂತ ಸಾರ"ವು ಹಾಗೂ " ಶ್ರೀ ಹರ್ಷನ ಖಂಡನ ಖಂಡಖಾದ್ಯ "ಗಳು ಸಹಾ ಅದ್ವೈತತತ್ವ ತಿಳಿಯಲುಸಹಾಯಕಗ್ರಂಥಗಳಾಗಿವೆ. ಜಗನ್ಮಾನ್ಯ ಅದ್ವೈತಸಿದ್ಧಾಂತ ಪ್ರತಿಪಾದಕರಾದ

CC-O. In Public Domain. Digitized by eGangotri

ಶ್ರೀ ಶಂಕರ ಭಗವತ್ಪಾದರನ್ನು ಮೇಲೆ ತಿಳಿಸಿದ ಆನುಯಾಯಿಗಳು ಮುಕ್ತಕಂಠದಿಂದ ಹೊಗಳಿದ್ದಾರೆ.

" The whole universe is born in me, has its support in me and dissolves in me ". Therefore that very Brahman in deed am I. Brahman alone is real and the world is untrnth " ಎಂಬುದೇ ಶ್ರೀ ಶಂಕರ ಭಗವತ್ಪಾದರ ಅದ್ವೈತಸಿದ್ಧಾಂತ ತಿರುಳಾಗಿದೆ. ಶ್ರೀ ಶಂಕರಭಗವತ್ಪಾದರು ಸಕಲಜೀವಂತಿಗಳಿಗೆ ಕಲ್ಯಾಣವನ್ನು ಉಂಟುಮಾಡಿ ಕಾಪಾಡಲಿ ಎಂದು ಆಶಿಸುತ್ತೇನೆ.

ಸೂರ್ಯಸ್ತೋತ್ರಂ

ಪ್ರಾತಃ ಸ್ಮರಾಮಿ ಖಲು ತತ್ಸವಿತುರ್ವರೇಣ್ಯಂ
ರೂಪಂ ಹಿ ಮಂಡಲಮೃಜೋಽಥನೂರ್ಯಜೂಂಷಿ ।
ಸಾಮಾನಿ ಯಸ್ಯಕಿರಣಃ ಪ್ರಭವಾದಿಹೇತುಂ
ಬ್ರಹ್ಮೇಶವಿಷ್ಣುಸುರರೂಪಮಚಿಂತ್ಯ ಶಕ್ತಿವತ್ ॥

ಪ್ರಾತರ್ನಮಾಮಿ ತರಣಿಂ ತನುವಾಙ್ಮನೋಭಿಃ
ಬ್ರಹ್ಮೇಂದ್ರಪೂರ್ವಕಸುರೈರ್ನುತಮರ್ಚಿತಂ ಚ ।
ವೃಷ್ಟಿಪ್ರಮೋಚನ ವಿನಿಗ್ರಹಹೇತು ಭೂತಂ
ತ್ರೈಲೋಕ್ಯಪಾಲನಪರಂ ತ್ರಿಗುಣಾತ್ಮಕಂ ಚ ॥

ಪ್ರಾತರ್ಭಜಾಮಿ ಸವಿತಾರಮನಂತ ಶಕ್ತಿಂ
ಪಾಪೌಘಶತ್ರುಭಯರೋಗಹರಂ ಪರಂ ।
ತಂ ಸರ್ವಲೋಕ ಕಲನಾತ್ಮಕಕಾಲಮೂರ್ತಿಂ
ಗೋಕಂಠಬಂಧನ ವಿಮೋಚನಮಾದಿದೇವಮ್ ॥

ತ್ರೈಲೋಕತ್ರಯಮಿದಂ ಭಾನೋಃ ಪ್ರಾತಃ ಪ್ರಾತಃ ಪಠೇತ್ಸುಧೀಃ ।
ಸ ಸರ್ವವ್ಯಾಧಿನಿರ್ಮುಕ್ತಃ ಪರಂ ಸುಖಮವಾಪ್ನುಯಾತ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಸ್ತಕ ಪರಿಚಯ

ಅಮೃತವಾಣೀ ಪ್ರಚಾರಿಣೀ ಸಭಾ

ಪ್ಲಾಟ್ 254, ಜವಾಹರ್‌ನಗರ್, ಗೊರೇಗಾನ್ ಪಶ್ಚಿಮ
ಬೊಂಬಾಯಿ - 400 062

ಮಾನವಕುಲಕ್ಕೇ ಶ್ರೇಯಸ್ಕರವಾಗಿರುವ ಸಮ್ಯಜ್ಞಾನವನ್ನು ನೀಡುತ್ತ ಅನ್ವರ್ಥವಾಗಿ ' ಅಮೃತವಾಣಿ ' ಯಾಗಿರುವ ಸಂಸ್ಕೃತಭಾಷೆಯ ಮತ್ತು ಅದರಲ್ಲಿ ಅಡಗಿರುವ ತತ್ತ್ವಬೋಧೆಯ ಪ್ರಚಾರವೇ ಈ ಸಭೆಯ ಮುಖ್ಯಗುರಿಯಾಗಿದೆ.

ಈ ಸಭೆಯು ಈ ಗುರಿಯ ಸಾಧನೆಯ ಮಾರ್ಗದಲ್ಲಿ ಸಂಸ್ಕೃತವಿದ್ಯಾ ಪ್ರಚಾರಕ್ಕಾಗಿ ತರಗತಿಗಳನ್ನು ಏರ್ಪಡಿಸಿರುವುದಲ್ಲದೆ ಅದಕ್ಕೆ ಅವಶ್ಯಗಳಾದ ಪಠ್ಯಪುಸ್ತಕಗಳನ್ನು ಪ್ರಚಾರಮಾಡುತ್ತದೆ.

ತತ್ತ್ವಬೋಧನೆಗಾಗಿ ಶಾಸ್ತ್ರೀಯ ಗ್ರಂಥಗಳನ್ನು ಪ್ರಚಾರಮಾಡುತ್ತದೆ. ಈಗಾಗಲೇ ಶ್ರೀ ಸ್ಕಂದಸ್ವಾಮಿಪ್ರಣೀತವಾದ ಶ್ರೀ ರುದ್ರಭಾಷ್ಯವು ಆಂಗ್ಲಾನುವಾದ ಸಹಿತವಾಗಿ ಪ್ರಕಟವಾಗಿದೆ. ಇದರಂತೆ ಶ್ರೀ ಪದ್ಮಪಾದಾಚಾರ್ಯರವರ ಸರ್ವಾಮ್ನಾಯ ವಿಜ್ಞಾನದೀಪಿಕೆಯೂ ಸಹ ಪ್ರಕಟವಾಗಲಿದೆ.

ಬಾಲ್ಯಪಾಠಕ್ಕಾಗಿ ನಿತ್ಯೋಪಯೋಗಿಯಾದ ಪಂಚಾಯತನದೇವತೆಗಳ ಸ್ತೋತ್ರಗಳ " ಸ್ತೋತ್ರರತ್ನಪಂಚಕಂ " ಮತ್ತು " ಬಾಲಬೋಧಿನೀಗೀತಾ " ಪುಸ್ತಕಗಳು ಪ್ರಕಟವಾಗಿವೆ.

ಈ ಪುಸ್ತಕಗಳ ಬೆಲೆ ರೂ. 2-40 ಮತ್ತು 1-60 ಮಾತ್ರ

ಇವು ಆಂಗ್ಲಾನುವಾದ ಸಹಿತವಾಗಿವೆ. ಭಾರತೀಯ ಕಲೆಯನ್ನು ತಿಳಿಯಬಯಸುವ ಎಲ್ಲರೂ ಈ ಗ್ರಂಥಗಳಿಂದ ವಿಶೇಷಪ್ರಯೋಜನವನ್ನು ಪಡೆಯಬಹುದು.

ಶೃಂಗಗಿರಿ ಕವಿ ನರಸಿಂಹಶರ್ಮಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮಚ್ಛಂಕರಭಗವತ್ಪಾದಾಚಾರ್ಯಪ್ರಣೀತಂ

ಶ್ರೀಮಹಾಗಣೇಶಪಂಚರತ್ನಂ

ಮುದಾ ಕರಾತ್ತಮೋದಕಂ ಸದಾ ವಿಮುಕ್ತಿಸಾಧಕಂ
ಕಲಾಧರಾವತಂಸಕಂ ವಿಲಾಸಲೋಕರಕ್ಷಕಂ ।
ಅನಾಯಕೈಕನಾಯಕಂ ವಿನಾಶಿತೇಭದೈತ್ಯಕಂ
ನತಾಶುಭಾಶುನಾಶಕಂ ನಮಾಮಿ ತಂ ವಿನಾಯಕಂ ॥ ೧ ॥

ಶ್ರೀವಿನಾಯಕಸ್ವಾಮಿಯು ಮೋದಕಪ್ರಿಯನು; ತನಗೆ ಪ್ರಿಯವಾಗಿರುವ ಮೋದಕವನ್ನು ಕೈಯಲ್ಲಿ ಹಿಡಿದುಕೊಂಡು ಸಂತೋಷದಿಂದಿದ್ದಾನೆ; ಕಿರೀಟದಲ್ಲಿ ಚಂದ್ರಕಲೆಯಿಂದ ಅಲಂಕೃತನಾಗಿ ನೋಡುವವರಿಗೆ ಆನಂದಕರನಾಗಿದ್ದಾನೆ; ಲೋಕಕಂಟಕನಾಗಿದ್ದ ಗಜಾಸುರನನ್ನು ಅನಾಯಾಸವಾಗಿ ಸಂಹರಿಸಿ ಲೋಕರಕ್ಷಕನಾಗಿದ್ದಾನೆ; ಅನಾಥರಿಗೆ ಮುಖ್ಯ - ಆಶ್ರಯನಾಗಿದ್ದಾನೆ; ಶರಣಾಗತರಾಗಿ ಬಂದು ನಮಸ್ಕರಿಸುವವರ ಸಕಲ ಆಪತ್ತುಗಳನ್ನೂ ನಾಶಮಾಡುವನು; ಸಂಸಾರದುಃಖದಿಂದ ತಪ್ತರಾಗಿ ಮೋಕ್ಷವನ್ನು ಬಯಸುವವರಿಗೆ ಮೋಕ್ಷವನ್ನೂ ಅನುಗ್ರಹಿಸುವನು. ಇಂಥ ಮಹಿಮಶಾಲಿಯಾಗಿರುವ ಶ್ರೀಮಹಾಗಣಪತಿಸ್ವಾಮಿಯನ್ನು ನಮ್ಮ ಸಕಲೇಷ್ಟಾರ್ಥದ ಸಿದ್ಧಿಗಾಗಿ ಸಂತೋಷದಿಂದ ಯಾವಾಗಲೂ ನಮಸ್ಕರಿಸುತ್ತೇನೆ.

ಈ ಸ್ತೋತ್ರದಲ್ಲಿ ಪ್ರತಿಪಾದದ ಕಡೆಯ ಅಕ್ಷರದಲ್ಲಿ ಪ್ರಾಸವಿರುತ್ತದೆ.

ನತೇತರಾತಿಭೀಕರಂ ನವೋದಿತಾರ್ಕಭಾಸ್ವರಂ
ನಮತ್ಸುರಾರಿನಿರ್ಜರಂ ನತಾಧಿಕಾಪದುದ್ಧರಂ ।
ಸುರೇಶ್ವರಂ ನಿಧೀಶ್ವರಂ ಗಜೇಶ್ವರಂ ಗಣೇಶ್ವರಂ
ಮಹೇಶ್ವರಂ ತಮಾಶ್ರಯೇ ಪರಾತ್ಪರಂ ನಿರಂತರಂ ॥ ೨ ॥

ಶ್ರೀಗಣೇಶ್ವರನು ತನ್ನನ್ನು ಆರಾಧಿಸದೆ ಮತ್ತು ನಮಸ್ಕರಿಸದೆ ಇರುವವರಿಗೆ ಭಯವನ್ನು ಉಂಟುಮಾಡುವನು. ಉದಯಿಸುತ್ತಿರುವ ಶ್ರೀಸೂರ್ಯದೇವನಂತೆ ಸ್ವಪ್ರಕಾಶನಾಗಿರುವ ಶ್ರೀ ವಿಘ್ನೇಶ್ವರಸ್ವಾಮಿಯು ಶರಣಾಗತರಾದವರ ಆಪತ್ತುಗಳನ್ನೆಲ್ಲ ಪರಿಹರಿಸಿ ಉದ್ಧರಿಸುವವನಾಗಿ ದೇವಾಸುರರುಗಳಿಗೂ ಆರಾಧ್ಯನಾಗಿದ್ದಾನೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಸುರೇಶ್ವರನೂ, ನಿಧೀಶ್ವರನೂ, ಗಜೇಶ್ವರನೂ, ಗಣೇಶ್ವರನೂ, ಮಹೇಶ್ವರನೂ ಆಗಿ, ಸಾಕ್ಷಾತ್ಪರಮಾತ್ಮನೇ ಆಗಿರುವ ಶ್ರೀಮಹಾಗಣಪತಿಸ್ವಾಮಿಯನ್ನೇ ನಾನು ಯಾವಾಗಲೂ ರಕ್ಷಕನನ್ನಾಗಿ ಆಶ್ರಯಿಸುವೆನು.

ಸಮುಸ್ತಲೋಕಶಂಕರಂ ನಿರಸ್ತದೈತ್ಯಕುಂಜರಂ
ದರೇತರೋದರಂ ವರಂ ವರೇಭವಕ್ತ್ರಮಕ್ಷರಂ ।
ಕೃಪಾಕರಂ ಕ್ಷಮಾಕರಂ ಮುದಾಕರಂ ಯಶಸ್ಕರಂ
ಮನಸ್ಕರಂ ನಮಸ್ಕೃತಾಂ ನಮಸ್ಕರೋಮಿ ಭಾಸ್ವರಂ ॥ ೩ ॥

ಶ್ರೀವಿಘ್ನೇಶ್ವರಸ್ವಾಮಿಯು ಯಾರಲ್ಲಿಯೂ ರಾಗದ್ವೇಷಾಭಿಮಾನಾದಿಗಳಿಲ್ಲದೆ ಸರ್ವರಿಗೂ ಅವರವರ ಕರ್ಮಗಳಿಗನುಸಾರವಾಗಿ ಸುಖವನ್ನು ಅನುಗ್ರಹಿಸುವನು; ಆದ್ದರಿಂದಲೇ ಧರ್ಮವಿರೋಧಿಯಾಗಿದ್ದ ಗಜಾಸುರನನ್ನು ಸಂಹರಿಸಿದನು. ಗಜಾನನನೂ, ಲಂಬೋದರನೂ ಸ್ಥೂಲರೂಪದಿಂದ ಆಗಿದ್ದರೂ, ಪರಮಾರ್ಥವಾಗಿ ಸರ್ವೋತ್ತಮವಾದ ನಿತ್ಯಪರಮಾತ್ಮನೇ ಆಗಿದ್ದಾನೆ. ದಯಾಮಯನೂ, ಭಕ್ತರ ಅಪರಾಧಗಳನ್ನು ಕ್ಷಮಿಸುವವನೂ, ಧರ್ಮನಿಷ್ಠರಾದ ಎಲ್ಲರಿಗೂ ಸಂತೋಷವನ್ನೂ ಕೀರ್ತಿಯನ್ನೂ ಉಂಟುಮಾಡುವವನೂ, ಸನ್ಮಾರ್ಗಜ್ಞಾನವನ್ನು ಅನುಗ್ರಹಿಸಿ ಧನ್ಯರನ್ನಾಗಿ ಮಾಡುವ ಸ್ವಪ್ರಕಾಶಸ್ವರೂಪನೂ ಆಗಿರುವನು. ಇಂಥ ಶ್ರೀವಿಘ್ನೇಶ್ವರನನ್ನು ಭಕ್ತಿಶ್ರದ್ಧೆಗಳಿಂದ ವಂದಿಸುತ್ತೇನೆ.

ಅಕಿಂಚನಾರ್ತಿವಾರ್ಜನಂ ಚಿರಂತನೋಕ್ತಿಭಾಜನಂ
ಪುರಾರಿಪೂರ್ವನಂದನಂ ಸುರಾರಿಗರ್ವಚರ್ವಣಂ ।
ಪ್ರಪಂಚನಾಶಭೀಷಣಂ ಧನಂಜಯಾದಿಭೂಷಣಂ
ಕಪೋಲದಾನವಾರಣಂ ಭಜೇ ಪುರಾಣವಾರಣಂ ॥ ೪ ॥

ದರಿದ್ರರ ದುಃಖವು ಅಸಾರವೂ ಅಸಹ್ಯವೂ ಆದುದು; ಶ್ರೀವಿಘ್ನನಾಯಕನು ಭಕ್ತರಾಗಿ ಬರುವವರ ಇಂಥ ದಾರಿದ್ರ್ಯದುಃಖವನ್ನು ಕಳೆಯುವನು. ಜಗದೇಕಾಧಿಪತಿಯಾದ ಶ್ರೀಪರಮೇಶ್ವರನ ಜ್ಯೇಷ್ಠಪುತ್ರನಾಗಿ ಪರಮಪಾವನನು. ಸುರವಿರೋಧಿಗಳಾದ ಅಸುರರ ದರ್ಪವನ್ನು ನಾಶಮಾಡಿರುವನು. ಪ್ರಪಂಚವನ್ನು ಪ್ರಳಯಮಾಡುವಾಗ ಅತ್ಯಂತಭಯಂಕರವಾಗಿರುವನು. ಅರ್ಜುನಾದಿಸಾತ್ವಿಕ ಭಕ್ತಕರಿಗೆ ಅಲಂಕಾರವಾಗಿರುವನು. ಗಜಮುಖನಾಗಿ, ಕಪೋಲಗಳಲ್ಲಿ ನಿರಂತರವೂ ಸುರಿಯುತ್ತಿರುವ ಮದೋದಕರಸವನ್ನು ಸೊಂಡಲಿನಿಂದ ಒರೆಸಿಕೊಳ್ಳುತ್ತಿರುವನು;

CC-O. In Public Domain. Digitized by eGangotri

ನಿತ್ಯವಾಣಿಯಾದ ವೇದಶಾಸ್ತ್ರಗಳ ತಾತ್ಪರ್ಯಾರ್ಥವಾದ ತತ್ತ್ವರೂಪನಾಗಿರುವ ಆ ಚಿರಂತನಗಜಸ್ವರೂಪನಾದ ವಿಘ್ನರಾಜನನ್ನು ಸೇವಿಸುತ್ತೇನೆ.

ನಿತಾಂತಕಾಂತದಂತಕಾಂತಿಮಂತಕಾಂತಕಾತ್ಮಜಂ
ಅಚಿಂತ್ಯರೂಪಮಂತಹೀನಮಂತರಾಯಕೃಂತನಂ ।
ಹೃದಂತರೇ ನಿರಂತರಂ ವಸಂತಮೇವ ಯೋಗಿನಾಂ
ತಮೇಕದಂತಮೇವ ತಂ ವಿಚಿಂತಯಾಮಿ ಸಂತತಂ ॥ ೫ ॥

ಅತ್ಯಂತಶುಭ್ರವಾಗಿ ಹೊಳೆಯುವ ದಂತಗಳಿಂದ ರಮ್ಯನಾಗಿರುವ;ಮೃತ್ಯುಂಜಯನಾದ ಶ್ರೀ ಪರಮೇಶ್ವರನ ಪ್ರಿಯಕುವರನಾಗಿ ಭಕ್ತರ ಶ್ರೇಯೋವಿಘ್ನಗಳನ್ನು ನಾಶಮಾಡುವ; ನಿತ್ಯನೂ, ಸರ್ವವಿಶೇಷರಹಿತನಾಗಿ ಚಿಂತನೆಗೂ ಗೋಚರನಾಗದ; ಯೋಗಿಗಳ ಹೃದಯಕಮಲದಲ್ಲಿ ನಿತ್ಯಪ್ರಕಾಶನಾಗಿ ನೆಲೆಸಿರುವ; ಆ ಏಕದಂತಸ್ವಾಮಿಯನ್ನೇ ಸಂತತವಾಗಿ ಧ್ಯಾನಿಸುತ್ತೇನೆ.

ಮಹಾಗಣೇಶಪಂಚರತ್ನಮಾದರೇಣ ಯೋಽನ್ವಹಂ
ಪ್ರಜಲ್ಪತಿ ಪ್ರಭಾತಕೇ ಹೃದಿ ಸ್ಮರನ್ ಗಣೇಶ್ವರಂ ।
ಅರೋಗತಾಮದೋಷತಾಂ ಸುಸಾಹಿತೀಂ ಸುಪುತ್ರತಾಂ
ಸಮಾಹಿತಾಯುರಷ್ಟಭೂತಿಮಭ್ಯುಪೈತಿ ಸೋಽಚಿರಾತ್ ॥ ೬ ॥

ಶ್ರೀಗಣಾಧಿಪತಿಯನ್ನು ಮನಸ್ಸಿನಲ್ಲಿ ಸ್ಮರಿಸುತ್ತ ಪ್ರತಿದಿನವೂ ಪ್ರಾತಃಕಾಲದಲ್ಲಿ ಈ ಮಹಾಗಣೇಶಪಂಚರತ್ನವೆಂಬ ಸ್ತೋತ್ರವನ್ನು ಯಾರು ಪಠಿಸುವರೋ, ಅವರು ಶೀಘ್ರವಾಗಿ ಆರೋಗ್ಯ, ಸರ್ವದೋಷರಾಹಿತ್ಯ, ಉತ್ತಮಪಾಂಡಿತ್ಯ, ಸತ್ಸಂತಾನ, ಪೂರ್ಣಾಯಸ್ಸುಗಳೊಡನೆ ಅಷ್ಟಸಿದ್ಧಿಗಳನ್ನು ಪಡೆದು ಶ್ರೇಯೋವಂತರಾಗುವರು.

ಇತಿ ಶ್ರೀ ಶಂಕರಭಗವತ್ಪಾದವಿರಚಿತಂ ಮಹಾಗಣೇಶಪಂಚರತ್ನಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮಚ್ಛಂಕರಭಗವತ್ಪಾದವಿರಚಿತಂ

ಪ್ರಾತಃಸ್ಮರಣಂ

(' ಆದೌ ಪೂಜ್ಯೋ ಗಣಾಧಿಪಃ ' ಎಂಬ ಪ್ರಮಾಣದಂತೆ ಸರ್ವಕಾರ್ಯ ಸಿದ್ಧಿಗಾಗಿ ಶ್ರೀ ವಿಘ್ನೇಶ್ವರನ ಸ್ತೋತ್ರವನ್ನು ಮೊದಲು ತಿಳಿಸಿದ್ದಾಯಿತು. ಈಗ ಪ್ರತಿದಿನವೂ ಮೊದಲು ಧ್ಯಾನಮಾಡಬೇಕಾಗಿರುವ ತತ್ತ್ವವನ್ನು ಶ್ರೀ ಭಗವತ್ಪಾದರವರು " ಪ್ರಾತಃಸ್ಮರಣ " ದಲ್ಲಿ ಉಪದೇಶಿಸಿದ್ದಾರೆ.)

ಪ್ರಾತಃ ಸ್ಮರಾಮಿ ಹೃದಿ ಸಂಸ್ಫುರದಾತ್ಮತತ್ತ್ವಂ ಸಚ್ಚಿತ್ಸುಖಂ
ಪರಮಹಂಸಗತಿಂ ತುರೀಯಂ।
ಯತ್ಸ್ವಪ್ನಜಾಗರಸುಷುಪ್ತಿಮವೈತಿ ನಿತ್ಯಂ ತದ್ಬ್ರಹ್ಮ
ನಿಷ್ಕಲಮಹಂ ನ ಚ ಭೂತಸಂಘಃ ॥ ೧ ॥

' ನಾನು, ನಾನು '–ಎಂದು ನಿತ್ಯವೂ ವ್ಯವಹರಿಸುತ್ತಿದ್ದೇವೆ. ಎಲ್ಲವನ್ನೂ ತಿಳಿಯುತ್ತಿರುವ ಈ ' ನಾನು ' ಎಂಬ ಆತ್ಮವು ಜ್ಞಾನಸ್ವರೂಪದ್ದೆಂದು ಸ್ಪಷ್ಟವು. ಸ್ವಪ್ನ, ಜಾಗರ, ಸುಷುಪ್ತಿಗಳೆಂಬ ಮೂರು ಅವಸ್ಥೆಗಳೂ, ಅವುಗಳಲ್ಲಿ ಆಗುವ ಹಲವಾರು ಅನುಭವಗಳೂ, ಬಂದುಹೋಗುತ್ತಿರುವುದು ಆತ್ಮನಿಗೆ ಅನುಭವ ಸಿದ್ಧವಾಗಿದೆ. ಆದ್ದರಿಂದ ಆತ್ಮನು ಇವುಗಳಿಗೆಲ್ಲ ಸಾಕ್ಷಿಯಾಗಿ, ಬೇರೆಯಾಗಿ, ಇವುಗಳ ಸಂಬಂಧವಿಲ್ಲದೆ ಇದ್ದಾನೆ–ಸಾಕ್ಷಿಯಾದವನಿಗೆ ಸಾಕ್ಷ್ಯವಸ್ತುಗಳ ಸಂಬಂಧವಿರುವುದಿಲ್ಲ. ಬಂದು ಹೋಗುವ ಈ ಅವಸ್ಥೆಗಳಿಗೆ ಸಾಕ್ಷಿಯಾಗಿರುವ ಆತ್ಮನು ಸಚ್ಚಿತ್ಸುಖರೂಪನು-ನಿತ್ಯನೂ, ಜ್ಞಾನಸ್ವರೂಪನೂ, ಸರ್ವದುಃಖರಹಿತನಾದ ಸುಖಸ್ವರೂಪನೂ ಆಗಿರುತ್ತಾನೆ. ತುರೀಯನು–ಈ ಮೂರು ಅವಸ್ಥೆಗಳಿಗೂ ವಿಚಾರಿ ತುರೀಯನಾಗಿದ್ದಾನೆ. ಪರಮಹಂಸ ಗತಿಯು ಮುಮುಕ್ಷುಗಳಾದ ಪರಮಹಂಸಸನ್ಯಾಸಿಗಳಿಗೆ ಪರಮಗತಿಯಾಗಿರುವನು. ಆಪ ಕಾರಣ ತದ್ಬ್ರಹ್ಮನಿಷ್ಕಲಂ ಅಹಂ-ಅಂಥ ನಿತ್ಯನಿರವಯವವಾಗಿ ನಿರ್ವಿಕಾರವಾಗಿರುವ, ಶಾಸ್ತ್ರಪ್ರತಿಪಾದ್ಯವಾಗಿರುವ ಆ ಪರಬ್ರಹ್ಮಸ್ವರೂಪನೇ ನಾನೆಂದು ನಿಶ್ಚಿತವು. ಆದ್ದರಿಂದ ಆತ್ಮನು-ನ ಚ ಭೂತ ಸಂಘಃ ಪಾಂಚಭೌತಿಕವಾಗಿರುವ ಈ ಶರೀರದಸ್ವರೂಪನಲ್ಲ. ಹೃದಿ ಸಂಸ್ಫುರದಾತ್ಮತತ್ತ್ವಂಪ್ರಾತಃ ಸ್ಮರಾಮಿ ಹೀಗೆ ಹೃದಯಕಮಲದಲ್ಲಿ ನಿತ್ಯವಾಗಿ ಬೆಳಗುವ ಆತ್ಮನ ಈಪರತತ್ತ್ವವನ್ನು ನಿತ್ಯವೂ ಪ್ರಾತಃಕಾಲದಲ್ಲಿ ಮೊದಲುಸ್ಮರಿಸುತ್ತೇನೆ. ಮುಂದಿನ ದಿನದ ವ್ಯವಹಾರಗಳಲ್ಲಿಯೂ ಈ ತತ್ತ್ವವನ್ನು ಮರೆಯದೆ ಧರಿಸುತ್ತೇನೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಪ್ರಾತರ್ಭಜಾಮಿ ಚಮನೋ ವಚಸಾಮಗಮ್ಯಂ
ವಾಚೋ ವಿಭಾಂತಿ ನಿಖಿಲಾ ಯದನುಗ್ರಹೇಣ ॥
ಯಂ ನೇತಿ ನೇತಿ ವಚನೈರ್ನಿಗಮಾ ಅವೋಚ-
ಸ್ತಂ ದೇವದೇವಮಜಮಚ್ಯುತಮಾಹುರಗ್ರ್ಯಮ್ ॥ ೨ ॥

ಸಕಲವನ್ನೂ ತಿಳಿಯುತ್ತಿರುವ ಆತ್ಮನನ್ನು ತಿಳಿಯಲಾಗುವುದಿಲ್ಲ. ಮಾತು ಮನಸ್ಸುಗಳೂ ಆತ್ಮನ ಬಲದಿಂದಲೇ ಹೊರಗಿನ ವಸ್ತುಗಳನ್ನು ತಿಳಿಯುತ್ತವೆ. ತಿಳಿದು ಬರುವುದೆಲ್ಲ ಅನಾತ್ಮವಸ್ತುಗಳೇ ಆಗಿರುವುದರಿಂದ ವೇದಶಾಸ್ತ್ರವೂ ಸಹ 'ಇದಲ್ಲ-ಇದಲ್ಲ' ಎಂದು-ಇದು-ಎಂದು ತಿಳಿದುಬರುವುದು ಆತ್ಮವಲ್ಲವೆಂದೇ ತಿಳಿಸುತ್ತದೆ. ಆದಕಾರಣ ಆತ್ಮನು ಸ್ವಪ್ರಕಾಶನೂ, ಜನ್ಮ ಮರಣ ರಹಿತವಾಗಿ ನಿತ್ಯನೂ ಸರ್ವೋತ್ತಮನೂ ನಿತ್ಯ ಮುಕ್ತ ಪರಬ್ರಹ್ಮ ಸ್ವರೂಪನೂ ಆಗಿರುತ್ತಾನೆ. ಈ ಆತ್ಮ ತತ್ತ್ವವನ್ನು ನಿತ್ಯವೂ ಪ್ರಾತಃಕಾಲದಲ್ಲಿ ಭಜನೆ ಮಾಡುತ್ತೇನೆ.

ಪ್ರಾತರ್ನಮಾಮಿ ತಮಸಃ ಪರಮರ್ಕವರ್ಣಂ
ಪೂರ್ಣಂ ಸನಾತನಪದಂ ಪುರುಷೋತ್ತಮಾಖ್ಯಮ್ ॥
ಯಸ್ಮಿನ್ನಿದಂ ಜಗದಶೇಷಮಶೇಷ ಭೂತೌ
ರಜ್ಜೌ ಭುಜಂಗಮ ಇವ ಪ್ರತಿಭಾಸಿತಂ ವೈ ॥ ೩ ॥

ಸೂರ್ಯನಂತೆ ಸ್ವಪ್ರಕಾಶವಾಗಿ ನಿರಂತರವೂ ಬೆಳಗುತ್ತಿರುವ, ಅಖಂಡ ಪರಿಪೂರ್ಣವಾದ ಪರಮಾತ್ಮ ಸ್ವರೂಪವನ್ನು ಪ್ರಾತಃಕಾಲದಲ್ಲಿ ತ್ರಿಕರಣಗಳಿಂದಲೂ ನಮಸ್ಕರಿಸುತ್ತೇನೆ. ರಜ್ಜುವಿನಲ್ಲಿ ಹಾವು ತೋರಿಬರುವಂತೆ ಇಂಥ ಆತ್ಮನಲ್ಲಿಯೇ ಸಮಸ್ತದ್ವೈತ ಪ್ರಪಂಚವೂ ಕಲ್ಪಿತವಾಗಿ ಭ್ರಾಂತಿಯಾಗಿದೆಯಾಗಿ, ನಾನು ಅಖಂಡ ದ್ವಿತೀಯ ಸಚ್ಚಿದಾನಂದ ಪರಬ್ರಹ್ಮ ಸ್ವರೂಪನೇ ಆಗಿದ್ದೇನೆ.

ಶ್ಲೋಕತ್ರಯಮಿದಂ ಪುಣ್ಯಂ ಲೋಕತ್ರಯವಿಭೂಷಣಮ್ ॥
ಪ್ರಾತಃಕಾಲೇ ಪಠೇದ್ಯಸ್ತು ಸ ಗಚ್ಛೇತ್ಪರಮಂ ಪದಂ ॥

ಪುರುಷಾರ್ಥಸಾಧನವಾದ ಪರತತ್ತ್ವವನ್ನು ಪ್ರತಿಪಾದಿಸುವ ಈಮೂರುಪದ್ಯಗಳು ಸಕಲ ಸಂಸಾರದೋಷವನ್ನೂ ಪರಿಹರಿಸುತ್ತ ಪುಣ್ಯಕರವಾಗಿ ಮೂರುಲೋಕಗಳಿಗೂ ಆಲಂಕಾರವಾಗಿರುತ್ತದೆ. ನಿತ್ಯವೂ ಇದನ್ನು ಪಠಿಸುವವನು ಕ್ರಮೇಣ ಈ ತತ್ತ್ವದ ಅನುಭವವನ್ನು ಪಡೆದು ಪರಮಪದವಾದ ಮೋಕ್ಷವನ್ನು ಹೊಂದುವನು.

ಇತಿ ಶ್ರೀಮಚ್ಛಂಕರಭಗವತ್ಪಾದವಿರಚಿತಂ ಪ್ರಾತಃಸ್ಮರಣಂ

CC-O. In Public Domain. Digitized by eGangotri

ಪುಸ್ತಕ ಪರಿಚಯ

ಶ್ರೀ ಭಟ್ಟ ತ್ರಯಂಬಕಶಾಸ್ತ್ರಿ
(ಭಾಷ್ಯಭಾನುಪ್ರಭಾ ಲೇಖಕರು)

ಅದ್ವೈತಸಿದ್ಧಾಂತವು ಶ್ರೀ ಆದಿಶಂಕರರಿಗಿಂತಲೂ ಮುಂಚಿತವಾಗಿಯೇ ಇದ್ದರೂ ಆದಿಶಂಕರಾಚಾರ್ಯರೇ ಭಾಷ್ಯಕಾರರಲ್ಲಿ ಮೊದಲಿಗರು ಎನ್ನುವ ಅಂಶವು ನಿರ್ವಿವಾದವಾದ ವಿಷಯವಾಗಿದೆ. ಜಗತ್ತು ಪ್ರಳಯವಾಗುವವರೆಗೂ ಅವರ ಪ್ರಸ್ಥಾನತ್ರಯ ಭಾಷ್ಯವು ಪ್ರಸಿದ್ಧದಲ್ಲಿರುತ್ತದೆ ಎಂದು ವಿದ್ವಾಂಸರ ವಿಚಾರಧಾರೆಯಾಗಿದೆ. ಅವರ ಪ್ರಸ್ಥಾನತ್ರಯಭಾಷ್ಯದ ರಹಸ್ಯವನ್ನು ಹಾಗೂ ಅವರ ಹೃದಯವನ್ನು ತಿಳಿದುಕೊಂಡವರಲ್ಲಿ ಸಾಕ್ಷಾತ್ ಶಿಷ್ಯರುಗಳಾದ ಶ್ರೀ ಪದ್ಮಪಾದರು, ಶ್ರೀ ಸುರೇಶ್ವರಾಚಾರ್ಯರು, ಶ್ರೀ ಹಸ್ತಾಮಲಕಾಚಾರ್ಯರು ಪ್ರಮುಖರೆನ್ನಬಹುದು. ಶ್ರೀ ಪದ್ಮಪಾದರ ಪಂಚಪಾದಿಕ ಟೀಕಾ ಹಾಗೂ ಶ್ರೀ ಸುರೇಶ್ವರಾಚಾರ್ಯರ ನೈಷ್ಕರ್ಮ್ಯಸಿದ್ಧಿಗಳು ಜಗನ್ಮಾನ್ಯವಾಗಿವೆ. ನಂತರ ಬಂದ ಶ್ರೀ ವಿದ್ಯಾರಣ್ಯರು, ಶ್ರೀ ಮಧುಸೂಧನಸರಸ್ವತಿಗಳು ಹಾಗೂ ಶ್ರೀ ಅಪ್ಪಯ್ಯದೀಕ್ಷಿತರುಗಳು ಶ್ರೀ ಶಂಕರಾಚಾರ್ಯರನ್ನು ಮನಸಾರೆ ಕೊಂಡಾಡಿದವರಲ್ಲಿ ಪ್ರಮುಖರೆನ್ನಹುದು. ಅವರುಗಳು ಸಹಾ ಶ್ರೀ ಶಂಕರರ ಹೃದಯವನ್ನು ಸರಿಯಾಗಿ ಅರ್ಥಮಾಡಿಕೊಂಡರೆನ್ನಬಹುದು. ಆಸ್ತಿಕಜನರು ಶ್ರೀ ಶಂಕರಾಚಾರ್ಯರಿಗೆ ಸಲ್ಲಿಸುವ ಗೌರವವನ್ನು ಇವರಿಗೂ ಸಹಾ ಕೃತಜ್ಞತಾಪೂರ್ವಕವಾಗಿ ಸಲ್ಲಿಸುತ್ತಾರೆ.

ಶ್ರೀ ಶಂಕರಭಗವತ್ಪಾದರ ಅನುಗ್ರಹಕ್ಕೆ ಪಾತ್ರರಾದವರಲ್ಲಿ ಭಟ್ಟ ತ್ರಯಂಬಕ ಶಾಸ್ತ್ರಿಗಳು ಒಬ್ಬರೆನ್ನಬಹುದು. ಅವರು ಈಗಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿರುವ ರಾಯದುರ್ಗದವರು. ವಿದ್ವಾಂಸರ ಮನೆತನದಲ್ಲಿ ಜನಿಸಿದ ಮೇಧಾವಿಗಳಾದ ಅವರು ನ್ಯಾಯ ತರ್ಕ ಮುಂತಾದದರ್ಶನಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದವರಾಗಿದ್ದರು ಅವರ ಪಾಂಡಿತ್ಯಕ್ಕೆ ಆಗಿನ ಪಂಡಿತರುಗಳು ಸಹಾ ಬೆರಗಾಗಿದ್ದರು.

ವಿದ್ವಾಂಸರಾದ ಅವರು ತಮ್ಮ ಅರ್ಧ ಆಯುಷ್ಯವನ್ನು ಕಳೆದ ನಂತರ ವಿಚಾರ ಕ್ಕೊಳಗಾದರು. ತರ್ಕ ನ್ಯಾಯಗಳಲ್ಲಿ ಪ್ರಾವೀಣ್ಯತೆ ಪಡೆದು ಜೀವನ ಸಾಗಿಸಿದ ಶಾಸ್ತ್ರಿಗಳು ತಮ್ಮ ಅರ್ಧ ಆಯುಷ್ಯ ಮುಗಿದರೂ ಸಹ ತಮಗೆ ಒಬ್ಬ ಯೋಗ್ಯ ಗುರುವು ದೊರೆಯಲಿಲ್ಲವೆಂದು ಚಿಂತಿಸತೊಡಗಿದರು. ಅಜ್ಞಾನವನ್ನು ತೊಲಗಿಸುವವನೇ ಗುರುವು ಗುರುಸ್ಥಾನ ದೊಡ್ಡದು. " ದಗುರುರೋರಧಿಕಂ " ವೆಂಬ ಉಕ್ತಿಯೂ ಇದೆ. ಆವರಿಗೆ ತಮಗೆ ಬಂದಿರುವ ಸಂದೇಹಗಳನ್ನು ನಿವಾರಿಸಲು ಒಬ್ಬ ಯೋಗ್ಯ ಗುರುವಿನ ಆವಶ್ಯಕತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಇತ್ತೆಂಬುದು ನಮಗೆ ಸ್ಪಷ್ಟವಾಗುತ್ತದೆ. ಜ್ಞಾನದಿಂದಲೇ ಮೋಕ್ಷವೆಂಬುದನ್ನು ತಿಳಿದ ಶಾಸ್ತ್ರಿಗಳು ಗುರೂಪದೇಶವಿಲ್ಲದೆ ಮೋಕ್ಷವು ಸಿಗದು ಹಾಗೂ ಜ್ಞಾನವು ಬರಲಾರದೆಂದು ತಿಳಿದುಕೊಂಡ ಅವರು ಚಿಂತಾಕ್ರಾಂತರಾದರು.

ವೇದಾಂತ ಹಾಗೂ ಜೀವನಕ್ಕೆ ಸಂಬಂಧಪಟ್ಟ ಸಂದೇಹಗಳಪಟ್ಟಿಯನ್ನು ಅವರು ಮಾಡಿದರು. ಯೋಗ್ಯ ಗುರುವು ದೊರೆತಲ್ಲಿ ತಮ್ಮ ಸಂದೇಹಗಳನ್ನು ಹೇಳಿ ಅವುಗಳ ನಿವಾರಣೆ ಮಾಡಿಕೊಳ್ಳಬೇಕೆಂಬ ಉತ್ಕಟೇಚ್ಛೆ ಅವರಿಗಿದ್ದಿತು. ಯೋಗ್ಯ ಗುರುವಿನ ಸಲುವಾಗಿ ಅಲೆದಾಡತೊಡಗಿದರು. ಕೃಪಾಸಾಗರರಾದ ಶ್ರೀ ಶಂಕರಾಚಾರ್ಯರು ಶಾಸ್ತ್ರಿಗಳ ಉತ್ಕಟೇಚ್ಛೆಯನ್ನರಿತು ಅವರಿಗೆ ಅನುಗ್ರಹಮಾಡಿ ಕೃತಾರ್ಥರನ್ನಾಗಿ ಮಾಡುವ ಉದ್ದೇಶವಿಟ್ಟುಕೊಂಡು ಶಾಸ್ತ್ರಿಗಳು ಸಂಚರಿಸುತ್ತಿರುವಾಗ ಸನ್ಯಾಸಿಯ ವೇಷದಿಂದ ಶಾಸ್ತ್ರಿಗಳಿಗೆ ದರ್ಶನವಿತ್ತರು. ನಂತರ ತ್ರಯಂಬಕಶಾಸ್ತ್ರಿಗಳಿಗೂ ಹಾಗೂ ಸನ್ಯಾಸಿರೂಪದಿಂದ ಬಂದ ಶಂಕರರಿಗೂ ಸಂಭಾಷಣೆಯಾಯಿತು. ಶಾಸ್ತ್ರಿಗಳ ಸಂದೇಹಗಳನ್ನೆಲ್ಲಾ ಮೂರುದಿವಸಗಳಲ್ಲಿ ತಾವು ಪರಿಹರಿಸುತ್ತೇವೆನೆಂಬ ಮಾತುಗಳನ್ನು ಕೇಳಿದ ಶಾಸ್ತ್ರಿಗಳಿಗೆ ಮಹದಾನಂದವಾಯಿತು. ಶಾಸ್ತ್ರಿಗಳು ತಮ್ಮ ಸಂದೇಹಗಳನ್ನು ಕೇಳುವುದಕ್ಕಿಂತ ಮುಂಚಿತವಾಗಿ ಸನ್ಯಾಸಿರೂಪಿ ಶಂಕರರು ಒಂದು ಷರತ್ತು ಹಾಕಿದ್ದರು. ತಾವು ಗುರುದಕ್ಷಿಣೆಯಾಗಲೀ ಆಹಾರಾದಿಗಳನ್ನಾಗಲೀ ಸ್ವೀಕರಿಸುವುದಿಲ್ಲವೆಂಬುದೇ ಅವರ ಷರತ್ತಾಗಿತ್ತು. ಶಾಸ್ತ್ರಿಗಳು ಅವರ ಷರತ್ತಿಗೆ ಒಪ್ಪಿ ತಮ್ಮ ಸಂದೇಹಗಳ ಪಟ್ಟಿಯನ್ನು ತೆರೆದು ಒಂದೊಂದೇ ಪ್ರಶ್ನೆಯನ್ನು ಕೇಳತೊಡಗಿದರು. ಸನ್ಯಾಸಿರೂಪಿ ಶಂಕರರು ಉತ್ತರಿಸತೊಡಗಿದರು. ಸ್ವಲ್ಪ ಸಮಯದ ನಂತರ ಶಾಸ್ತ್ರಿಗಳಿಗೆ ಸನ್ಯಾಸಿರೂಪಿ ಶಂಕರರು ಇಂತೆಂದರು. ನೀವು ಬರೆದ ಸಂದೇಹಪಟ್ಟಿಯನ್ನು ತೆರೆಯಿರಿ ತಮ್ಮ ಸಂದೇಹಗಳಿಗೆಲ್ಲಾ ನಾನು ಉತ್ತರಿಸುತ್ತೇನೆ. ಉತ್ತರಿಸಿದಂತೆಲ್ಲ ನೀವು ನಿಮ್ಮ ಸಂದೇಹಗಳಿಗೆ ಉತ್ತರಗಳು ದೊರೆತವುಗಳೆಂದು ಗುರುತುಹಾಕಿಕೊಳ್ಳುತ್ತಾ ನಡೆಯಿರಿ ಎಂದು ಸೂಚನೆ ನೀಡಿದರು.

ಕೇವಲ ಒಂದೂವರೆ ದಿವಸಗಳಲ್ಲಿ ತ್ರಯಂಬಕಶಾಸ್ತ್ರಿಗಳ ಸಂದೇಹಗಳಿಗೆಲ್ಲ ಸಮರ್ಪಕವಾದ ಉತ್ತರಗಳು ದೊರೆತವು. ಶಾಸ್ತ್ರಿಗಳಿಗೆ ಮಹದಾನಂದವಾಯಿತು. ತಮ್ಮ ಜೀವನದಲ್ಲಿ ಯೋಗ್ಯ ಗುರುವು ದೊರೆತಿದ್ದಕ್ಕೆ ಅವರಿಗಾದ ಆನಂದ ಹೇಳತೀರದು. ಸನ್ಯಾಸಿರೂಪದಿಂದ ಶಾಸ್ತ್ರಿಗಳಿಗೆ ದರ್ಶನಕೊಟ್ಟ ಶ್ರೀ ಶಂಕರರ ವಾಗ್ವೈಖರಿ, ಚತುರತೆ, ಪ್ರತಿಭೆ, ಜಾಣ್ಮೆ, ಬುದ್ಧಿವಂತಿಕೆಯ ಹಾಗೂ ಉತ್ತರಗಳನ್ನು ಕೊಡುವ ರೀತಿಗಳನ್ನು ಕಂಡ ಶಾಸ್ತ್ರಿಗಳು ತಮಗೆ ದರ್ಶನನೀಡಿ ಸಂದೇಹಗಳನ್ನು ಪರಿಹರಿಸಿದ ಸನ್ಯಾಸಿಯೇ ತಮ್ಮ ಗುರುವೆಂದು ಕಾಯಾ ವಾಚಾ ಮನಸಾಗಳಿಂದ ಅಂದುಕೊಂಡರು. " ಸನ್ಯಾಸಿರೂಪದಿಂದ ಬಂದ ಇವರು ಸಾಮಾನ್ಯ ಪುರುಷರಲ್ಲ. ಶ್ರೀ ಶಂಕರಭಗವತ್ಪಾದರೆ ತಮ್ಮ

CC-O. In Public Domain. Digitized by eGangotri

ನೇಲೆ ಅನುಗ್ರಹಮಾಡುವುದಕ್ಕಾಗಿ ಬಂದಿದ್ದಾರೆಂದು '' ಅವರ ಮನಸ್ಸಿಗೆ ಮನಗಟ್ಟಾಯಿತಂತೆ. ವಿಷ್ಣುರೂಪಿ ವ್ಯಾಸಮಹರ್ಷಿಗಳಿಂದ ಪ್ರಣೀತವಾದ ವೇದಾಂತ ಸೂತ್ರಗಳಿಗೆ ಬರೆದ ಭಾಷ್ಯವನ್ನು ಶಾಸ್ತ್ರಿಗಳಿಗೆ ಸಂಪೂರ್ಣವಾಗಿ ತಿಳಿಸಿದ ನಂತರ ಶಾಂತಿಪಾಠ ಮುಗಿದಮೇಲೆ ಶಾಸ್ತ್ರಿಗಳು ಭಕ್ತಿಭಾವದಿಂದ ನಮಸ್ಕರಿಸಿದ ಕೂಡಲೇ ಸನ್ಯಾಸಿರೂಪದ ಶಂಕರರು ಅದೃಶ್ಯರಾದರೆಂದು ತಿಳಿದು ಬರುತ್ತದೆ.

ಶ್ರೀ ಶಂಕರಭಗವತ್ಪಾದರು ಯಾವಗುರುದಕ್ಷಿಣೆಯನ್ನು ಬಯಸದಿದ್ದರೂ ಆವರು ಅದೃಶ್ಯರಾದ ನಂತರ ಭಟ್ಟತ್ರಯಂಬಕಶಾಸ್ತ್ರಿಗಳು ಶ್ರೀ ಶಂಕರರ ಬ್ರಹ್ಮಸೂತ್ರಭಾಷ್ಯಕ್ಕೆ ಸವಿಸ್ತಾರವಾದ ವ್ಯಾಖ್ಯಾನವನ್ನು ಬರೆದು ಅಜರಾಮರರಾಗಿದ್ದಾರೆ. ಆವರು ಬರೆದಿರುವ ಈ ವ್ಯಾಖ್ಯಾನಗ್ರಂಥವೇ " ಭಾಷ್ಯಭಾನುಪ್ರಭಾ " ವಾಗಿದೆ. ಇದೊಂದು ಅಮೂಲ್ಯವಾದ ಅಮುದ್ರಿತ ಗ್ರಂಥವಾಗಿದೆ. ಭಟ್ಟ ತ್ರಯಂಬಕಶಾಸ್ತ್ರಿಗಳು ಶ್ರೀ ಶಂಕರಾಚಾರ್ಯರವರಿಗೆ ಸಲ್ಲಿಸಿದ ಈ ಕಾಣಿಕೆಯೇ ಭಾಷ್ಯಭಾನುಪ್ರಭಾ ಗ್ರಂಥವಾಗಿದೆ.

ಯಾರಮನೆಯಲ್ಲಿಯೇ ಆಗಲಿ ಶ್ರೀ ಭಟ್ಟ ತ್ರಯಂಬಕಶಾಸ್ತ್ರಿಗಳು ಬರೆದ ಭಾಷ್ಯಭಾನುಪ್ರಭಾ ಅಮುದ್ರಿತ ಗ್ರಂಥವು ಸಂಪೂರ್ಣವಾಗಿದ್ದಲ್ಲಿ ಶ್ರೀ·ಆದಿಶಂಕರರ ಭಕ್ತನಾದ ನನಗೆ ತಿಳಿಸಬೇಕೆಂದು ಕೋರುತ್ತೇನೆ. ತಿಳಿಸಿದಲ್ಲಿ ಅಮೂಲ್ಯವಾದ ಈ ಗ್ರಂಥದ ಮುದ್ರಣ ಕಾರ್ಯವನ್ನು ಆಸ್ತಿಕ ಆಪ್ಪೈತಿಗಳಾದ ನಾವೆಲ್ಲರೂ ಕೂಡಿ ಪ್ರಾರಂಭಿಸೋಣವೆಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಬಿ. ವಿರೂಪಾಕ್ಷಭಟ್ಟ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ವಾ ಕೆ. ಪಿ. ಶಂಕರಶಾಸ್ತ್ರೀ

ಅವತಾರಿಕೆ :- ವ್ಯವಹಾರ ಸೌಕರ್ಯಕ್ಕಾಗಿ ಧಾರಣಾ, ಧ್ಯಾನ-ಸಮಾಧಿ ಯೆಂಬ ಈ ಮೂರು ಅಂಗಗಳಿಗೆ ಒಂದು ಸಂಕೇತ ಸಂಜ್ಞೆಯನ್ನು ಹೇಳುತ್ತಾರೆ.

ಸೂತ್ರ :- ತ್ರಯಮೇಕತ್ರ ಸಂಯಮಃ ॥ ೪ ॥

ಅರ್ಥ :- ಏಕವಸ್ತು ವಿಷಯವಾಗಿ ಅಭ್ಯಾಸ ಬಲದಿಂದ ಬರುವ ಈ ಧಾರಣಾ ಧ್ಯಾನ-ಸಮಾಧಿ ಈ ಮೂರಂಗಗಳಿಗೂ ಸೇರಿ "ಸಂಯಮ" ವೆಂದು ಹೆಸರು ಈ ಸಂಯಮಾಭ್ಯಾಸದ ಫಲವೇನು ಎಂದರೇ.

ಸೂತ್ರ :- ತಜ್ಜಯಾತ್ ಪ್ರಜ್ಞಾಲೋಕಃ ॥ ೫ ॥

ಅರ್ಥ :- ತಜ್ಜಯಾತ್ = ಈ ಏಕವಸ್ತು ವಿವಯಕವಾದ ಸಂಯಮ ಸಿದ್ಧಿಯಾಗುವುದರಿಂದ ಪ್ರಜ್ಞಾಲೋಕಃ = ಸಮಾಧಿ ಪ್ರಜ್ಞೆಯ ಪ್ರಕಾಶವು ಉಂಟಾ ಗುವುದು.

ತಾತ್ಪರ್ಯ :- ಏಕವಸ್ತು ವಿಷಯಕವಾದ ಸಂಯಮವು ಎಷ್ಟರಮಟ್ಟಿಗೆ ಸ್ಥಿರ ಗೊಳ್ಳುತ್ತದೋ ಅಷ್ಟರಮಟ್ಟಿಗೆ ಸಮಾಧಿಯ ವಿಕಾಸವೂ ಬಲವಾಗಿ ಉಂಟಾಗು ವುದು ॥ ೫ ॥

ಅವತಾರಿಕೆ :- ಹಿಂದೆ ಹೇಳಿದ ಸಂಯಮವನ್ನು ಯಾವ ವಷಯದಲ್ಲಿ ಮಾಡಿ ದರೇ ಇಲ್ಲಿ ಹೇಳಿದ ಫಲವುಂಟಾಗುವುದೋ ಆದನ್ನು ಇಲ್ಲಿ ಹೇಳುತ್ತಾರೆ.

ಸೂತ್ರ :- ತಸ್ಯ ಭೂಮಿಷು ವಿನಿಯೋಗಃ ॥ ೬ ॥

ಅರ್ಥ :- ತಸ್ಯ = ಆ ಸಂಯಮಕ್ಕೆ ಭೂಮಿಷು ವಿನಿಯೋಗಃ = ಮುಂದಿನ ಹಂತಗಳಲ್ಲಿ ಉಪಯೋಗವುಂಟಾಗುತ್ತದೆ.

ತಾತ್ಪರ್ಯ :- ಯೋಗಮಾರ್ಗದಲ್ಲಿ ಕೆಳಗಿನ ಹಂತವನ್ನು ಸಾಧಿಸಿಕೊಂಡವ ನಿಗೆ ಆದರ ಮೇಲಿನ ಹಂತದಲ್ಲಿ ಬರಲು ಆಸೆಯುಂಟಾದಾಗ, ಆ ಮೇಲಿನ ಹಂತದ ವಿಷಯದಲ್ಲಿ ಸಂಯಮವನ್ನು (ಧಾರಣಾ-ಧ್ಯಾನ-ಸಮಾಧಿಗಳನ್ನು) ಮಾಡತಕ್ಕದು. ಹೇಗೆಂದರೇ ಸಂಯಮದಿಂದ ಸ್ಥೂಲ ವಿಷಯಗಳಲ್ಲಿ ಸವಿತರ್ಕ ಸಮಾಧಿ ಸ್ಥಿತಿಯನ್ನು ಪಡೆದನಂತರ, ಸೂಕ್ಷ್ಮ ವಿಷಯಕವಾದ ನಿರ್ವಿಕಲ್ಪ ಸಮಾಧಿಯಲ್ಲಿ ಆಸೆಯುಂಟಾಗ

CC-O. In Public Domain. Digitized by eGangotri

ಬಹುದು. ಆವಾಗ ಈ ಸಂಯಮವನ್ನು ಆ ಸೂಕ್ಷ್ಮ ವಿಷಯಕವಾದ ನಿರ್ವಿಕಲ್ಪ ಸಮಾಧಿ ವಿಷಯದಲ್ಲಿ ಮಾಡುವುದರಿಂದ ಅದರ ಸಿದ್ಧಿಯಾಗುತ್ತದೆ. ಹಾಗೆಯೇ ಸವಿಚಾರ ಸಮಾಧಿ ಸಿದ್ಧಿಯಾದವನು ನಿರ್ವಿಚಾರ ಸಮಾಧಿಯಲ್ಲಿ ಸಂಯಮ ಮಾಡ ಬಹುದು. ಈಶ್ವರಾನುಗ್ರಹದಿಂದ ಮೇಲಿನ ಹಂತಕ್ಕೆ ಬಂದವನು ಕೆಳಗಿನ ವಿಷಯವಾಗಿ ಸಂಯಮ ಮಾಡುವುದು ಅನಾವಶ್ಯಕವಷ್ಟೇ ? ಮತ್ತು, ಈ ಯೋಗ ವಿಷಯದಲ್ಲಿ, ಈ ಭೂಮಿಕೆ (ಹಂತವು) ಮೇಲಿನದು ಇವೇ ಕೆಳಗಿನದು ನಾನಿಂತಹ ಹಂತದಲ್ಲಿ ಬಂದಿದ್ದೇನೆ ನುಮಂಪೆ ಇದು ಬೇಕು-ಎಂಬುದನ್ನು ಅವನವನ ಯೋಗಾಭ್ಯಾಸ ಪಾಟವದ ಮೂಲಕ ತಿಳಿದುಕೊಳ್ಳಬೇಕಲ್ಲದೇ ಹಂತಗಳ ಉತ್ತಮಾಧಮ (ಉಚ್ಚ-ನೀಚ) ಭಾವಗಳನ್ನು ಶಾಸ್ತ್ರದ ಮೂಲಕವಾಗಿ ಯಾರೂ ಹೇಳಲು ಸಾಧ್ಯವಿಲ್ಲ. ಇದನ್ನೇ ಯೋಗೇನ ಯೋಗೋ ಜ್ಞಾತವ್ಯೋ, ಯೋಗೋ ಯೋಗಾತ್ ಪ್ರವರ್ತತೆ. ಯೋಽಪ್ರಮತ್ತಸ್ತು ಯೋಗೇನ ಸ ಯೋಗೇ ರಮತೇ ಚಿರಂ. ಎಂಬುದಾಗಿ ಬೇರೆ ಕಡೆಯಲ್ಲಿಯೂ ಹೇಳಿರುತ್ತೆ. ॥ ೬ ॥

ಅವತಾರಿಕೆ :- ಸಂಯಮವೆಂಬ ಧಾರಣಾ-ಧ್ಯಾನ-ಸಮಾಧಿ ಈ ಮೂರೂ ಸಂಪ್ರಜ್ಞಾತ ಸಮಾಧಿಗೆ ಇತರಾಂಗಗಳಿಗಿಂತಲೂ ಅಂತರಂಗವಾದುದೆಂದು ಹೇಳುತ್ತಾರೆ.

ಸೂತ್ರ :- ತ್ರಯಮಂತರಂಗಂ ಪೂರ್ವೇಭ್ಯಃ ॥ ೭ ॥

ಅರ್ಥ :- ಪೂರ್ವೇಭ್ಯಃ = ಮೊದಲು ಹೇಳಿದ ಯಮ-ನಿಯಮಾದಿ ಐದು ಅಂಗಗಳಿಗಿಂತಲೂ, ತ್ರಯಂ = ಸಂಯಮವೆಂಬ ಧ್ಯಾನ-ಧಾರಣಾದಿ ಮೂರೂ ಉತ್ತರಾಂಗಗಳು ಸಂಪ್ರಜ್ಞಾತ ಸಮಾಧಿಗೆ ಅಂತರಂಗವಾದುದೆಂದು ತಿಳಿಯಬೇಕು ॥ ೭ ॥

ಸೂತ್ರ :- ತದಪಿ ಬಹಿರಂಗಂ ನಿರ್ಬೀಜಸ್ಯ ॥ ೮ ॥

ಅರ್ಥ :- ಧಾರಣಾದಿಯಾದ ಅಂಗತ್ರಯವೂ ಕೂಡ ಸಂಪ್ರಜ್ಞಾತ ಸಮಾಧಿಗೆ ಅಂತರಂಗ ಸಾಧನವಾಗುತ್ತದೇ ಹೊರತು, ಅದೇ ಮೂರು-ನಿರ್ಬೀಜಸ್ಯ ಬಹಿರಂಗಂ = ನಿರ್ವಿಕಲ್ಪಕ ಸಮಾಧಿಗೆ ಬಹಿರಂಗವೇ ಆಗುತ್ತದೆ. ॥ ೮ ॥

ಅವತಾರಿಕೆ :- ಇದೇ ಮೂರನೇ ಪಾದದ 16ನೇ ಸೂತ್ರದಲ್ಲಿ ಧರ್ಮ, ಲಕ್ಷಣ ಅವಸ್ಥಾರೂಪವಾದ ಮೂರು ಪರಿಣಾಮಗಳಲ್ಲಿಯೂ ಸಂಯಮವನ್ನು ಮಾಡುವುದರಿಂದ ಭೂತ-ಭವಿಷ್ಯದ್ವಿಷಯಗಳ ಜ್ಞಾನವುಂಟಾಗುತ್ತದೆಯೆಂದು " ಪರಿಣಾಮತ್ರಯ ಸಂಯಮಾತ್ ಅತೀತಾನಾಗತ ಜ್ಞಾನಂ " ಉಪದೇಶ ಮಾಡಿರುತ್ತಾರೆ. ಆ ಪರಿಣಾಮಗಳು ಯಾವುವು ? ಎಂಬುದನ್ನು ಇಲ್ಲಿ ಉಪದೇಶಿಸುತ್ತಾರೆ-ಆದರಲ್ಲಿಯೂ ವ್ಯುತ್ಥಾನಾವಸ್ಥೆ-ಸಂಪ್ರಜ್ಞಾತಾವಸ್ಥೆಯೆಂಬ ಎರಡವಸ್ಥೆಗಳಲ್ಲಿ ಚಿತ್ತದ ಪರಿಣಾಮವೆಂತಹದು?

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬುವನ್ನು ಇಲ್ಲಿಯವರೆಗೆ ಹೇಳಿದ್ದರಲ್ಲಿ ತಿಳಿಯಬಹುದು. ನಿರುದ್ಧಾವಸ್ಥೆಯಲ್ಲಿ ಮಾತ್ರ ಚಿತ್ತದ ಪರಿಣಾಮವು ಯಾವ ವಿಧವಾಗುತ್ತದೆಯೆಂದು ತಿಳಿಯಲಸಾಧ್ಯವಾಗಿದೆ. ನಮಗದು ದುರ್ವಿಜ್ಞೇಯವಾದ ಮಾತ್ರಕ್ಕೆ ನಿರುದ್ಧಾವಸ್ಥೆಯಲ್ಲಿ ಚಿತ್ತಕ್ಕೆ ಯಾವ ಪರಿಣಾಮವೂ ಇಲ್ಲವೆಂದು ಹೇಳಲಾಗುವುದಿಲ್ಲ. "ಚಲಂ ಗುಣವೃತ್ತಂ" ಎಂದು ಹೇಳಿದಂತೆ ತ್ರಿಗುಣಾತ್ಮಕ ಚಿತ್ತವು ಒಂದು ಕ್ಷಣವಾದರೂ ಪರಿಣಾಮವಿಲ್ಲದಿರಲಾಗುವುದಿಲ್ಲ. ಆದ್ದರಿಂದ ಆ ನಿರುದ್ಧಾವಸ್ಥೆಯಲ್ಲಿ ಈ ಚಿತ್ತದ ಪರಿಣಾಮವೆಂತಹದೆಂಬುದನ್ನು ಇಲ್ಲಿ ಹೇಳುತ್ತಾರೆ.

ಸೂತ್ರ :- ವ್ಯುತ್ಥಾನ ನಿರೋಧ ಸಂಸ್ಕಾರಯೋ-ರಭಿಭವ-ಪ್ರಾದುರ್ಭಾವೌ ನಿರೋಧಕ್ಷಣ ಚಿತ್ತಾನ್ವಯೋ ನಿರೋಧ ಪರಿಣಾಮಃ ॥ ೯ ॥

ಅರ್ಥ :- ಯಾವಾಗ ವ್ಯುತ್ಥಾನ-ನಿರೋಧ ಸಂಸ್ಕಾರಯೋಃ = ಕ್ಷಿಪ್ತ, ಮೂಢ-ವಿಕ್ಷೇಪವೆಂಬ ಮೂರೂ ವಿಧವಾದ ವ್ಯುತ್ಥಾನಾವಸ್ಥೆಗೂ, ಮತ್ತೆ ಯಾವ ಬದಲಾವಣೆಯೂ ಇಲ್ಲದೆ ಶುದ್ಧ ಸತ್ವಮಯವಾಗಲು ಯೋಗ್ಯವಾದ ನಿರೋಧಾವಸ್ಥೆಗೂ, ಅಭಿಭವ-ಪ್ರಾದುರ್ಭಾವೌ (ಭವತಃ) = ಕ್ರಮವಾಗಿ ವ್ಯುತ್ಥಾನಸ್ಥೆ ಅಭಿಭಾವವೆಂದರೆ ನ್ಯೂನತೆಯೂ, ನಿರೋಧಕ್ಕೆ ಪ್ರಾದುರ್ಭಾವವೆಂದರೆ ಅಭಿವೃದ್ಧಿಯೂ ಆಗುವುದೋ, (ಆವಾಗ) ನಿರೋಧಕ್ಷಣ ಚಿತ್ತಾನ್ವಯಃ = ವೃತ್ತಿ ನಿರೋಧವಾಗುವ ಕಾಲದಲ್ಲಿ ಚಿತ್ತ ಕ್ಕುಂಟಾಗುವ ಅನ್ವಯ = ಸಂಬಂಧವೇ (ವಿಲೀನವಾಗುವಿಕೆ) ನಿರೋಧ ಪರಿಣಾಮವೆನ್ನಲ್ಪಡುವುದು ॥ ೯ ॥

ತಾತ್ಪರ್ಯ :- ಚಿತ್ತವು ಧರ್ಮಿ, ವ್ಯುತ್ಥಾನ - ನಿರೋಧಕಳೆರಡೂ ಆದರ ಧರ್ಮಗಳೆಂದು ತಿಳಿಯಬೇಕು. ಧರ್ಮಿಯಾದ ಚಿತ್ತದಲ್ಲಿ - 'ವ್ಯುತ್ಥಾನ' ವೆಂಬ ಧರ್ಮವು ಕಡಿಮೆಯಾಗಿ, ನಿರೋಧ ಧರ್ಮವು ವೃದ್ಧಿಹೊಂದುವಾಗ, ಬಹುಕಾಲ ಬಾಹ್ಯವ್ಯವಹಾರಾಭ್ಯಾಸದಿಂದುಂಟಾದ ವ್ಯುತ್ಥಾನ ಸಂಸ್ಕಾರ ಧರ್ಮವು ಸಮೂಲನಾಶವಾಗುತ್ತದೆ. ಅದು ನಾಶವಾಗುತ್ತಲೇ, ನಿರೋಧಧರ್ಮವು ವೃದ್ಧಿ ಹೊಂದಲಾರಂಭಿಸುತ್ತದೆ. ಆಸನುಯಜಲ್ಲಿ ಧರ್ಮಿಯಾದ ಚಿತ್ತಕ್ಕೆ ನಿರೋಧ ಸಂಸ್ಕಾರವೆಂಬ ಧರ್ಮಜೊಡನೆ ಸಂಬಂಧವುಂಟಾದಂತಾಯಿತು. ಅಂದರೇ ಚಿತ್ತವು ಮೇಲೆ ಮೇಲೆ ನಿರೋಧ ಸಂಸ್ಕಾರವುಳ್ಳದ್ದಾಗಿ (ನಿರ್ವೃತ್ತಿಕವಾಗಿ) ಆಗುತ್ತದೆ. ಇದೇ ನಿರೋಧ ಪರಿಣಾಮ ಈ ದಶೆಯಲ್ಲಿ ಚಿತ್ತವು ನಿರೋಧಸಂಸ್ಕಾರ ಮಾತ್ರ ತೇಷವಾಗಿರುತ್ತದೆಯೆಂದು ಹಿಂದೆಯೇ ಹೇಳಲಾಗಿದೆ

ಅವತಾರಿಕೆ :- ಈ ಸಮಯದಲ್ಲಿ ಚಿತ್ತದ ಪರಿಣಾಮ ಯಾವ ವಿಧವಿರುತ್ತದೆಯೆಂದು ಹೇಳುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೂತ್ರ :- ತಸ್ಯ ಪ್ರಶಾಂತವಾಹಿತಾ - ಸಂಸ್ಕಾರಾತ್ ॥ ೧೦ ॥

ಅರ್ಥ :- ತಸ್ಯ = ನಿರೋಧವಾಗುವ ಚಿತ್ತಕ್ಕೆ, ಸಂಸ್ಕಾರಾತ್ = ನಿರೋಧ ಸಂಸ್ಕಾರದ ವೃದ್ಧಿಯ ನಿಮಿತ್ತವಾಗಿ, ಪ್ರಶಾಂತವಾಹಿತಾ = ವಿಕ್ಷೇಪವಾಸನಾನಾಶವಾಗಿ ನಿರೋಧಸಂಸ್ಕಾರ ಪ್ರವಾಹದಿಂದ ಕೂಡಿರುವಿಕೆಯು (ಭವತಿ = ಉಂಟಾಗುತ್ತದೆ) ॥ ೧೦ ॥

ಅವತಾರಿಕೆ :- ಈ ಸೂತ್ರದಲ್ಲಿ ಸಮಾಧಿ ಪರಿಣಾಮವನ್ನು ಹೇಳುತ್ತಾರೆ

ಸೂತ್ರಂ :- ಸರ್ವಾರ್ಥತೈಕಾಗ್ರತಯೋಃ ಕ್ಷಯೋದಯೌ ಚಿತ್ತಸ್ಯ ಸಮಾಧಿ ಪರಿಣಾಮಃ ॥ ೧೧ ॥

ಅರ್ಥ:--ಸರ್ವಾರ್ಥೈಕಾಗ್ರತಯೋಃ = ವಿಕ್ಷಿಪ್ತಾವಸ್ಥೆ, ಏಕಾಗ್ರತಾವಸ್ಥೆ - ಇವುಗಳ ಕ್ಷಯೋದಯೌ = ಏನಾಶಾವಿರ್ಭಾವಗಳು ಚಿತ್ತಸ್ಯ (ಯದಾಭವತಃ) ಚಿತ್ತಕ್ಕೆ ಯಾವಾಗ ಬರುತ್ತವೆಯೋ ಆವಾಗಲೇ ಆದುವೇನಿರೋಧ ಪರಿಣಾಮವು.

ತಾತ್ಪರ್ಯ :- ಚಿತ್ತದ ಕ್ಷಿಪ್ತ - ಮೂಢ -ವಿಕ್ಷಿಪ್ತಗಳೆಂಬ ಬಹಿರ್ಮುಖಾವಸ್ಥೆಯೇ ಸರ್ವಾರ್ಥತೆಯೆನ್ನುವುದು. ಈ ಸರ್ವಾರ್ಥತೆಯು ಚಿತ್ತದ ಧರ್ಮ. ಹಾಗೆಯೇ ಏಕವಸ್ತ್ರ ವಿಷಯಕವಾಗುವುದು ಏಕಾಗ್ರತೆಯು. ಸರ್ವಾರ್ಥತೆ ಹೋಗಿ ಚಿತ್ತಕ್ಕೆ ಏಕಾಗ್ರತೆಯುಂಟಾದುವುದೇ ಸಮಾಧಿಪರಿಣಾಮವೆನ್ನುವುದು ॥ ೧೧ ॥

ಅವತಾರಿಕೆ :- ಹಿಂದಿನ ಸೂತ್ರದಲ್ಲಿ-ಅಭ್ಯಾಸಬಲದಿಂದ ಚಿತ್ತದ ವಿಕ್ಷೇಪವು ನಷ್ಟವಾಗಿ, ಏಕಾಗ್ರತಾ ಸ್ಥಿತಿಯುಂಟಾಗುತ್ತೆಂದು ಹೇಳಿ, ಈ ಸೂತ್ರದಿಂದ - ವಿಕ್ಷೇಪನಾಶ - ಏಕಾಗ್ರತಾssವಿರ್ಭಾವ - ಇವುಗಳಮಧ್ಯೆ ಚಿತ್ತದಲ್ಲಿ ಇನ್ನಾವ ವೃತ್ತಿಯೂ ಉಂಟಾಗದೆಂದೂ, ವಿಕ್ಷೇಪನಾಶ ಏಕಾಗ್ರತಾssವಿರ್ಭಾವಗಳು ಏಕಕ್ಷಣದಲ್ಲಿ ಏಕ ವಿಷಯದಲ್ಲಿ ಉಂಟಾಗುವುದೆಂದೂ ಹೇಳುತ್ತಾರೆ.

ಸೂತ್ರ ;- ಶಾಂತೋದಿತೌ ತುಲ್ಯ ಪ್ರತ್ಯಯೌ ಚಿತ್ತಸ್ಯೈಕಾಗ್ರತಾ ಪರಿಣಾಮಃ ॥ ೧೨ ॥

ಅರ್ಥ :- ಶಾಂತೋದಿತೌ = ಪ್ರಶಾಂತವೂ, ಉತ್ಪನ್ನವೂ ಆಗಿರುವ ಚಿತ್ತಸ್ಯ = ಚಿತ್ತದ ತುಲ್ಯಪ್ರತ್ಯಯೌ = ಸಮಾನವಾದ ಎರಡು ಪ್ರತ್ಯಯಗಳೇ, ಏಕಾಗ್ರತಾ ಪರಿಣಾಮಃ-ಏಕಾಗ್ರತೆಯೆಂಬ ಪರಿಣಾಮವಾಗುತ್ತದೆ.

CC-O. In Public Domain. Digitized by eGangotri

ತಾತ್ಪರ್ಯ :- ಸರ್ವಾರ್ಥತೆಯೆಂಬ ವಿಕ್ಷೇಪ ವೃತ್ತಿಯು ನಿಶ್ಶೇಷವಾಗಿ ನೀಗಿ ಹೋಗುತ್ತಲೂ. ಏಕಾಗ್ರತೆಯುಂಟಾಗಿ, ವಿನಷ್ಟವೂ-ಉತ್ಪನ್ನವೂ ಆದ, ಸಮಾನ ಪ್ರತ್ಯಯಗಳು ಚಿತ್ತದಲ್ಲುಂಟಾಗುವವು. ಹೀಗೆ ಏಕಾಗ್ರತೆಯುಂಟಾಗುತ್ತಲೂ, ನಿರೋಧ ಸ್ಥಿತಿಯನ್ನು ವೃದ್ಧಿಗೊಳಿಸುವ ವೃತ್ತಿಗಳು ಮೇಲೆ ಮೇಲಾಗಿ ಬರುತ್ತಿರುವುವು. ಈ ಎರಡು ಬೇರೆ ಬೇರೆಯಾಗದೇ ಒಂದೇ ವಿಷಯಕವಾಗಿ ಬರುವುದು. ಈ ತರಹದ ಚಿತ್ತ ಸ್ಥಿತಿಯೇ ನಿರೋಧ ಪರಿಣಾಮವೆನ್ನುವದು. ಮೊತ್ತದಲ್ಲಿ ಪೂರ್ವ ಸ್ಥಿತಿ ಹೋಗಿ ಬೇರೆ ಸ್ಥಿತಿಯಲ್ಲಾಗುವುದೇ ಪರಿಣಾಮವೆನ್ನುವದು.

ಅವತಾರಿಕೆ :- ನಿರೋಧ-ಸಮಾಧಿ-ಏಕಾಗ್ರತೆಯೆಂಬ ಮೂರು ವಿಧ ಚಿತ್ತ ವೃತ್ತಿಗಳಲ್ಲಿ ಹೇಳಿದ ನಿಯಮವೇ ಪೃಥಿವ್ಯಾದಿ ಮಹಾಭೂತಗಳಲ್ಲಿಯೂ, ಚಕ್ಷುರಾದೀಂದ್ರಿಯಗಳಲ್ಲಿಯೂ ಹೊಂದುತ್ತದೆಯೆಂದು ಹೇಳುತ್ತಾರೆ.

ಸೂತ್ರ :- ಏತೇನ ಭೂತೇಂದ್ರಿಯೇಷು ಧರ್ಮ-ಲಕ್ಷಣಾ-ವಸ್ಥಾ ಪರಿಣಾಮಾ ವ್ಯಾಖ್ಯಾತಾಃ ॥ ೧೩ ॥

ಅರ್ಥ :- ಏತೇನ = ಮನಸ್ಸಿನ ಪರಿಣಾಮ ಕ್ರಮವನ್ನು ಹೇಳಿದ್ದರಿಂದಲೇ ಭೂತೇಂದ್ರಿಯೇಷು = ಪೃಥಿವ್ಯಾದಿ ಭೂತಗಳಲ್ಲಿಯೂ, ಇರತಕ್ಕ ಧರ್ಮ-ಲಕ್ಷಣ ಪರಿಣಾಮಾಃ = ಧರ್ಮಪರಿಣಾಮ ಲಕ್ಷಣಪರಿಣಾಮ ಅವಸ್ಥಾ ಪರಿಣಾಮಗಳು ವ್ಯಾಖ್ಯಾತಾಃ = ಉಕ್ತಪ್ರಾಯವಾಯಿತು ॥ ೧೩ ॥

ತಾತ್ಪರ್ಯ :- ಧರ್ಮಪರಿಣಾಮ, ಲಕ್ಷಣಾ ಪರಿಣಾಮ-ಅವಸ್ಥಾ ಪರಿಣಾಮವೆಂದು ಪರಿಣಾಮವು (ಬದಲಾವಣೆಯು) ಮೂರು ವಿಧವಾಗಿರುತ್ತದೆ. ಹೇಗೆಂದರೆ ಮಣ್ಣಿನ ಉಂಡೆ (ಮುದ್ದೆ) ಯಿಂದ ಘಟವುಂಟಾಗುತ್ತದೆಯಷ್ಟೇ ? ಅಲ್ಲಿ ಮೃತ್ತಿಂಬ್ಯ ಧರ್ಮಿಯಲ್ಲಿ ಪಿಂಡಾಕಾರವೆಂಬ ಧರ್ಮವು ಹೋದಮೇಲೆ ಘಟಾಕಾರವೆಂಬ ಇನ್ನೊಂದ ಧರ್ಮವುಂಟಾಗುತ್ತದೆ. ಅಂತೆಯೇ ಚಿತ್ತರೂಪವಾದ ಧರ್ಮಿಯಲ್ಲಿ ವ್ಯುತ್ಥಾನ (ವಿಕ್ಷೇಪಾದಿಗಳು) ಎಂಬ ಧರ್ಮ ನೀಗಿಹೋಗುತ್ತಲೂ ವ್ಯುತ್ಥಾನಧರ್ಮ ಉಂಟಾಗುತ್ತದೆ. ಇದೇ " ಧರ್ಮ ಪರಿಣಾಮವು ". ಲಕ್ಷಣ ಪರಿಣಾಮವೆಂದರೆ ಲಕ್ಷಯತಿ ಕಾರ್ಯರೂಪಂ ಧರ್ಮಂ ವ್ಯಾವರ್ತಯತೀತಿ ಲಕ್ಷಣಂ ಕಾಲತ್ರಯಂ ಇತ್ಯರ್ಥಃ ಅಂದರೆ ಕಾರ್ಯರೂಪವಾದ ಧರ್ಮವನ್ನು ಪೃಥಕ್ಕಾಗಿ ಯಾವುದು ತಿಳಿಸುತ್ತದೋ ಅದೇ ಲಕ್ಷಣವು ಅಂದರೇ ಅರ್ಥಾತ್ ಭೂತ ಭಾವಿ ವರ್ತಮಾನವೆಂಬ ಕಾಲತ್ರಯವೇ ಇದನ್ನು ಭೂತಾಧ್ವಾ ವರ್ತಮಾನಾಧ್ವಾ ವ್ಯುದವಸ್ಥೆ ಅತೀತಾಧ್ವಾ, ಘಟಾವಸ್ಥೆ ಅನಾಗತಾದ್ವಾ ಇವುಗಳಲ್ಲಿ ಒಂದಕ್ಕಿಂತ ಮತ್ತೊಂದವಸ್ಥೆ ಬೇರೆಬೇರೆಯಾಗಿದೆಯಲ್ಲವೇ. " ಕ್ಷಣಪರಿಣಾಮಿನೋ ಹಿ ಗುಣಾಃ ಋತೇ ಚಿತಿ ಶಕ್ತೇಃ ? ಚಿದಾತ್ಮವನ್ನು ಹೊರತಾಗಿ ಬಾಕಿಎಲ್ಲವೂ ತ್ರಿಗುಣಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಣಾಮವಾದುದರಿಂದ ಅದು ಕ್ಷಣಕ್ಷಣ ಬದಲಾವಣೆಯಾಗುತ್ತಲೇ ಇರುತ್ತದೆ. ಘಟವು ಒಡೆದು ಹೋದರೆ ಅದು ಅತೀತಾವಸ್ಥಾ ಪರಿಣಾಮವಾಗುತ್ತದೆ. ಕಪಾಲಶಕಲಾವಸ್ಥೆ ವರ್ತಮಾನವಾಗುತ್ತದೆ. ಹೀಗೆ ಕಾಲತ್ರಯದಲ್ಲೆಯೂ ಬೇರೆ ಬೇರೆ ಅವಸ್ಥೆಗಳು ಬರುತ್ತಿರುತ್ತವೆ. ಇದೇ ಅವಸ್ಥಾ ಪರಿಣಾಮವು ॥ ೧೫ ॥

ಅವತಾರಿಕೆ : ಈ ಧರ್ಮ ಲಕ್ಷಣ (ಕಾಲ) ಅವಸ್ಥಾ ರೂಪಗಳಾದ ಪರಿಣಾಮಗಳು ಯಾವ ಧರ್ಮಿಗೆ ಹೇಳಲ್ಪಟ್ಟವೋ ಆ ಧರ್ಮಿಯನ್ನು ಹೇಳುತ್ತಾರೆ.

ಸೂತ್ರ : ಶಾಂತೋದಿತಾವ್ಯಪದೇಶ್ಯ ಧರ್ಮಾನುಪಾತೀ ಧರ್ಮೀ ॥ ೧೪ ॥

ಅರ್ಥ : ಶಾಂತ-ತನ್ನ ಕಾರ್ಯವಾದ ನಂತರ ಭೂತಕಾಲ ಪ್ರವೇಶ ಹೊಂದಿರುವುದಾಗಿಯೂ ಉದಿತ - ಜಲಾಹರಣಾದಿ ರೂಪವಾದ ಕಾರ್ಯದಲ್ಲಿದ್ದು ವರ್ತಮಾನ ಶಬ್ದವ್ಯಪದೇಶ್ಯವಾಗಿಯೂ, ಅವ್ಯಪದೇಶ್ಯ - ಶಕ್ತಿಮಾತ್ರವಾಗಿ ಮೃದ್ರೂಪಧರ್ಮಿಯಲ್ಲಿರುವುದೂ ಆಗಿರುವ ಈ ತ್ರಿವಿಧ ಧರ್ಮಗಳನ್ನು ಅನುಪಾತೀ - ಅನುಸರಿಸಿ ಕಾಲತ್ರಯದಲ್ಲೆಯೂ ಅನುಸ್ಯೂತವಾಗಿ ಯಾವದಿರುವುದೋ ಅದೇ ಧರ್ಮಿಯು.

ತಾತ್ಪರ್ಯ : ಈ ಯೋಗಶಾಸ್ತ್ರದಲ್ಲಿ ಕಾರಣವಸ್ತುವನ್ನು ಧರ್ಮಿಯೆಂತಲೂ, ಕಾರ್ಯ ಸ್ವರೂಪವನ್ನು ಧರ್ಮವೆಂದೂ ಹೇಳುವುದಾಗಿದೆ. ಉದಾಹರಣೆಗಾಗಿ ಮೃತ್ಪಿಂಡ ರೂಪವೇ ಕಾಲತ್ರಯದಲ್ಲಿಯೂ ಅನುಸ್ಯೂತವಾಗಿರುವುದು ಧರ್ಮಿ. ಆಯಾ ಕಾಲಗಳಲ್ಲಿ ಬದಲಾಯಿಸಿ ಬರತಕ್ಕ ಪಿಂಡತ್ವ ಘಟತ್ವಾದಿಗಳು ಧರ್ಮಗಳೆಂದು ತಿಳಿಯಬೇಕು. ಮೃತ್ತೆಂಬ ಧರ್ಮಿಯು ಪಿಂಡ ಘಟಾದಿಕಾರ್ಯಗಳಲ್ಲಿ ಅನುಸ್ಯೂತವಾಗಿ ಬದಲಾಯಿಸದೆ ಇರುತ್ತದೆ. ಪಿಂಡತ್ವ ಘಟತ್ವ, ಶಕಲತ್ವಾದಿ ಧರ್ಮಗಳು ಬದಲಾಯಿಸುತ್ತಾ ಹೋಗುತ್ತದೆ. ಕಾಲತ್ರಯದಲ್ಲೆಯೂ ಬದಲಾವಣೆಯಾಗುತ್ತಿರುವ ಧರ್ಮಗಳಲ್ಲಿ ಅನುಗತವಾಗಿ ಏಕರೂಪವಾಗಿರುವುದೇ ಧರ್ಮಿಯು. ಕಾರಣವಸ್ತುವಿನಲ್ಲಿರುವ ಕಾರ್ಯೋತ್ಪತ್ತ್ಯಾನುಕೂಲವಾದ ಶಕ್ತಿಯನ್ನೇ ಸೂತ್ರದಲ್ಲಿ ಅವ್ಯಪದೇಶ್ಯವೆಂದು ಹೇಳಲಾಗುತ್ತದೆ ॥ ೧೪ ॥

ಅವತಾರಿಕೆ : ಒಂದೇ ಧರ್ಮಿಯಾದ ವಸ್ತುವಿಗೆ ಅನೇಕವಿಧ ಬದಲಾವಣೆಗಳಾಗುವುದಕ್ಕೆ ಯೋಗ್ಯವಾದ ಕಾರಣವನ್ನು ಇಲ್ಲಿ ಹೇಳುತ್ತಾರೆ.

ಸೂತ್ರಂ : ಕ್ರಮಾನ್ಯತ್ವಂ ಪರಿಣಾಮಾನ್ಯತ್ವೇ ಹೇತುಃ ॥ ೧೫ ॥

ಅರ್ಥ : ಮೃದ್ರೂಪವಾದ ಧರ್ಮಿಯಲ್ಲಿ ತೋರಿಬರುವ ಕ್ರಮಾನ್ಯತ್ವಂ-ಆಯಾ ಅವಸ್ಥಾ ಕ್ರಮದ ಭೇದವೇ ಪರಿಣಾಮ ಭೇದಕ್ಕೆ ಕಾರಣವಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಾತ್ಪರ್ಯ : ಮಣ್ಣನ್ನು ತೆಗೆದುಕೊಳ್ಳೋಣ. ಅದರಲ್ಲಿ ಮೊದಲು ಚೂರ್ಣಾವಸ್ಥೆ, ಆನಂತರ ಪಿಂಡಾವಸ್ಥೆ, ಆನಂತರ ಘಟಾವಸ್ಥೆ, ಆಮೇಲೆ ಒಡೆದರೆ ಶಕಲಾವಸ್ಥೆ, ಇದರಲ್ಲಿ ಚೂರ್ಣಾವಸ್ಥೆಯ ಆನಂತರ ಬೇರೆ ಪರಿಣಾಮವೇ ಪಿಂಡಭಾವವು. ಆದರ ಆನಂತರವೇ ಘಟಾವಸ್ಥೆಯಾಗುವುದು. ಕ್ರಮವಿಶಿಷ್ಟವಾದ ಬೇರೆ ಬೇರೆ ಪರಿಣಾಮ ರೂಪಧರ್ಮಗಳಾಗುವುದೇ ತತ್ತತ್ಸ್ಥಾಲದ ಪರಿಣಾಮ ಭೇದಕ್ಕೂ ಕಾರಣವು ಮತ್ತು ಕಾಮು ಸುಖ ಮುಂತಾದ ಕೆಲವು ಪರಿಣಾಮಗಳು ಚಿತ್ತಕ್ಕೆ ಪ್ರತ್ಯಕ್ಷವಾಗಿ ತಿಳಿಯುತ್ತೆ. ಕೆಲವು ಪರಿಣಾಮಗಳನ್ನು ಶ್ರುತಿ ಅನುಮಾನಾದಿಗಳಿಂದ ತಿಳಿಯಬೇಕು. ಅಂತಹವುಗಳು " ನಿರೋಧ ಕರ್ಮ ಸಂಸ್ಕಾರಾಃ ಪರಿಣಾಮಶ್ಚಜೀವನಂ । ಚೇಷ್ಟ ಶಕ್ತೇಶ್ಚ ಚಿತ್ತಸ್ಯ ಧರ್ಮಾಃ ದರ್ಶನ ವರ್ಜಿತಾಃ " ಎಂದು ಉಕ್ತವಾಗಿದೆ ॥ ೧೫ ॥

ಅವತಾರಿಕೆ : ಈ ರೀತಿ ಸಂಯಮದ ಧರ್ಮಗಳಾದ ಧರ್ಮ ಲಕ್ಷಣಾವಸ್ಥೆಗಳನ್ನು ಹೇಳಲಾಯಿತು. ಇನ್ನು ಪಾದಸನಾಪ್ತಿವರೆಗೂ ಸಂಯಮ ಸಾಧ್ಯವಾದ ವಿಷಯ ವಶೀಕಾರಜ್ಞಾನಕ್ಕೆ ಬೇಕಾಗುವ ವಿಭೂತಿಗಳನ್ನು ಉಪದೇಶಿಸುತ್ತಾರೆ.

ಸೂತ್ರ :- ಪರಿಣಾಮತ್ರಯಸಂಯಮಾದತೀತಾನಾಗತಜ್ಞಾನಂ ॥ ೧೬ ॥

ಅರ್ಥ :- ಪರಿಣಾಮತ್ರಯ ಸಂಯಮಾತ್ = ಧರ್ಮ - ಲಕ್ಷಣ - ಅವಸ್ಥಾ ರೂಪವಾದ ತ್ರಿವಿಧ ಪರಿಣಾಮಗಳಲ್ಲಿಯೂ ಸಂಯಮವನ್ನು ಮಾಡುವುದರಿಂದ, ಅತೀತಾಗತಜ್ಞಾನಂ = ಹಿಂದೆ ಕಳೆದುಹೋಗಿರುವ - ಮತ್ತು ಮುಂದೆ ಬರಬಹುದಾದ ವಸ್ತು ವಿಷಯಕ ಜ್ಞಾನವುಂಟಾಗುತ್ತದೆ ॥ ೧೬ ॥

ತಾತ್ಪರ್ಯ :- ಚಿತ್ತವು ಸ್ವಭಾವತಃ ಶುದ್ಧಸತ್ವಮಯವಾಗಿರುವುದರಿಂದ ಯಾವದನ್ನೂ ಪ್ರಕಾಶಗೊಳಿಸುವ ಸ್ವಭಾವವುಳ್ಳದ್ದೇ ಆಗಿದೆ, ಆದರೆ ರಜಸ್ತಮೋ ಗುಣರೂಪವಾದ ಮಲಸಂಬಂಧದಿಂದ ಅದರ ಸಹಜಗುಣಶಕ್ತಿಯನ್ನು ಹೊಂದುತ್ತಿಲ್ಲ ಸಂಯಮ ಬಲದಿಂದ ರಜಸ್ತಮೋಗುಣ ಮಲವು ನಾಶವಾದಾಗ ಬೇರೆ ಯಾವ ಇಂದ್ರಿಯಗಳ ಸಹಾಯವೂ ಇಲ್ಲದೇನೇ ಯಾವ (ಎಂತಹ) ವಿಷಯವನ್ನಾದರೂ ಅರಿಯಲು ಶಕ್ತವಾಗುತ್ತದೆ. ಒಂದರಲ್ಲಿ ಸಂಯಮ ಮಾಡುವುದರಿಂದ ಇನ್ನೊಂದರ ಸಾಕ್ಷಾತ್ಕಾರವು ಹೇಗಾಗುತ್ತದೆ? ಎಂದು ಶಂಕಿಸಬೇಕಾಗಿಲ್ಲ. ಧರ್ಮಾಧಿ ತ್ರಿವಿಧ ಪರಿಣಾಮದಲ್ಲಿ ಸಂಯಮವಾದರೆ, ಆ ಪರಿಣಾಮಗಳಲ್ಲಿ ಅನುಗಶವಾಗಿರುವ ಅತೀತಾನಾಗತ (ಭೂತ - ಭಾವಿ) ಜ್ಞಾನವನ್ನೂ ಈ ಸಂಯಮವೇ ತಂದುಕೊಡುತ್ತದೆ, ಪರಿಣಾಮತ್ರಯದ ಸಾಕ್ಷಾತ್ಕಾರವೇ ಅದರ ವಿಷಯದಲ್ಲಿರುವ ಅತೀತಾದಿ ಸಾಕ್ಷಾತ್ಕಾರ ರೂಪವೂ ಆಗುತ್ತದಾದ್ದರಿಂದ ವಿಷಯಭೇದವಿಲ್ಲ.

ಅವತರಣಿಕೆ :- ಸಂಯಮದ ಮೂಲವಾಗಿ ಆಯಾ ಪ್ರಾಣಿಗಳ ಜ್ಞಾನದ ಸಿದ್ಧಿಯೂ (ಸಾಕ್ಷಾತ್ಕಾರವೂ) ಬರುತ್ತದೆಯೆನ್ನುತ್ತಾರೆ.

CC-O. In Public Domain. Digitized by eGangotri

ಸೂತ್ರಂ :- ಶಬ್ದಾರ್ಥಪ್ರತ್ಯಯಾನಾಮಿತರೇತರಾಧ್ಯಾಸಾತ್ ಸಂಕರಃ, ತತ್ಪ್ರವಿಭಾಗ ಸಂಯಮಾತ್ ಸರ್ವಭೂತರುತ ಜ್ಞಾನಂ ॥ ೧೬ ॥

ಅರ್ಥ :- ಶಬ್ದಾರ್ಥಪ್ರತ್ಯಯಾನಾಂ = ಶ್ರೋತ್ರಗ್ರಾಹ್ಯವಾಗಿ, ನಿಯತಾನ್ನ ಪೂರ್ವಿಯಲ್ಲಿದ್ದು ಒಂದೇ ಅರ್ಥವನ್ನು ಬೋಧಿಸುವ ಶಬ್ದಕ್ಕೂ, ಅರ್ಥ = ಜಾತಿ-ಗುಣ - ಕ್ರಿಯಾರೂಪವಾದ ಅದರ ಅರ್ಥಕ್ಕೂ, ಪ್ರತ್ಯಯಾನಾಂ = ಪೂರ್ವೋಕ್ತ, ಶಬ್ದಗಳ ಮೂಲಕವಾಗಿ ಬರುವ ವಿಷಯಾಕಾರ ಬುದ್ಧಿವೃತ್ತಿಗಳಿಗೂ, ಇತರೇತರಾಧ್ಯಾಸ್ಯಾತ್ = ಪರಸ್ಪರಾಧ್ಯಾಸ ನಿಮಿತ್ತವಾಗಿರುವ, ಸಂಕರಃ ಭವತಿ = ಮಿಶ್ರೀಭಾವವು ಉಂಟಾಗುತ್ತದೆ. ತತ್ಪ್ರವಿಭಾಗಸಂಯಮಾತ್ = ಶಬ್ದಬೇರೆ, ಅರ್ಥಬೇರೆ ಮನೋವೃತ್ತಿಬೇರೆಯೆಂದು ಮೂರನ್ನೂ ವಿಂಗಡಿಸಿ, ಆ ವಿಭಕ್ತಸ್ವರೂಪದಲ್ಲಿ ಸಂಯಮ ಮಾಡುವುದರಿಂದ, ಸರ್ವಭೂತರುತಜ್ಞಾನಂ ಭವತಿ = ಸರ್ವಪ್ರಾಣಿಗಳ ಶಬ್ದಜ್ಞಾನವೂ ಉಂಟಾಗುತ್ತದೆ.

ತಾತ್ಪರ್ಯ :- ಲೋಕದಲ್ಲಿ "ಗಾಂ ಆನಯ (ಗೋವನ್ನು ಕರೆದು ಕೊಂಡು ಬಾ') ಎಂಬ ವಾಕ್ಯವನ್ನು ಕೇಳಿದಾಗ, ಗೋತ್ವಜಾತಿವಿಶಿಷ್ಟವಾದ ಸಾಸ್ನಾದಿಮದ್ವ್ಯಕ್ತಿಯನ್ನೂ, ಆ ವ್ಯಕ್ತಿಯನ್ನು ತಿಳಿಸಿಕೊಡುವ 'ಗೌ' ಎಂಬ ಶಬ್ದವನ್ನೂ ಈ ಶಬ್ದಶ್ರವಣದಿಂದ ಚಿತ್ತದಲ್ಲಿ ಉಂಟಾಗುವ ವೃತ್ತಿರೂಪ ಜ್ಞಾನವನ್ನೂ, ಈ ಮೂರನ್ನೂ ಬೇರೆ ಬೇರೆಯಾಗಿ ತಿಳಿಯದೇ ಒಂದಾಗಿಯೇ ಭಾವಿಸಿಕೊಂಡು ಗೋವನ್ನು ತರಲು ಹೊರಡುತ್ತಾನೆ. ಹಾಗಲ್ಲದೇ, 'ಗೌಃ' ಎಂಬ ಶಬ್ದವು ಈ ವ್ಯಕ್ತಿಗೆ ವಾಚಕವಾಗಿದೆ, ಗೋತ್ವಜಾತಿವಿಶಿಷ್ಟ ವ್ಯಕ್ತಿಯು ಈ ಶಬ್ದಕ್ಕೆ ವಾಚ್ಯವಾದುದು, ಈ ಶಬ್ದ, ಮತ್ತು ಅರ್ಥಗಳ ವಿಷಯಕವಾದ ಅರಿವು (ಜ್ಞಾನವು) ನನಗುಂಟಾಗಿದೆ, ಎಂದು - ಶಬ್ದ - ಅರ್ಥ - ಜ್ಞಾನಗಳನ್ನು ವಿಂಗಡಿಸಿ ತಿಳಿದುಕೊಂಡು ಹೊರಡುವುದಿಲ್ಲ. ಅಂದರೇ - ಶಬ್ದವೆಂಬುದು ಯಾವುದು ? ಅರ್ಥ ಯಾವುದು ? ಅದರ ಜ್ಞಾನನೆಂಬುದು ಎಂತಹುದು ? ಎಂದು ವಿವೇಚನೆಮಾಡಿ ಕೊಳ್ಳದೇ, ಎಲ್ಲದಕ್ಕೂ 'ಗೌಃ' ಎಂಬ ಒಂದೇ ಸಮಾಧಾನವನ್ನು ಹೇಳುತ್ತಾನೆಯೇ ಹೊರತು - ಪ್ರತ್ಯೇಕಿಸಿ ಹೇಳುವುದಿಲ್ಲ (ಶಬ್ದಯಾವದು ? ಗೌಃ. ಅರ್ಥವೇನು ? ಗೌಃ ಜ್ಞಾನನೆಂತಹದು ? ಗೌಃ ಎಂದೇ ಹೇಳುತ್ತಾನೆಂದು ತಾತ್ಪರ್ಯ) = ನ ಲೋಕಃ ಕಾರಣಾಭಾವಾತ್ ಏತದ್ವಿಜ್ಞಾತುಮರ್ಹತಿ । ಬಲಾಬಲವಿವೇಕಾರ್ಥಂ ಶಾಸ್ತ್ರಜ್ಞಾನ್ತು ವಿವಿಚ್ಯತೆ. ಎಂದು ಕುಮಾರಿಲಭಟ್ಟರು ಹೇಳಿರುತ್ತಾರೆ. ಅಂದರೆ ಲೋಕವ್ಯವಹಾರದಲ್ಲಿ ಇವುಗಳನ್ನು ವಿವೇಚ ಮಾಡಬೇಕಾದ ಅವಶ್ಯಕತೆ ಇರುವುದಿಲ್ಲ-ಪ್ರಯೋಜವಿಲ್ಲವಾದ್ದರಿಂದ. ಶಾಸ್ತ್ರಗಳಲ್ಲಿ ಬಲಾಬಲ ವಿವೇಕಕ್ಕಾಗಿ ಇವೆಲ್ಲವನ್ನೂ ವಿವೇಚನಮಾಡಿ ತಿಳಿಸಲೇಬೇಕಾಗಿದೆ ಎಂದಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri



With Prayers to Sri Sharada of Sringeri

MULTI-SPEED HUBS
LIMITED

MYSORE-BELAGOLA INDUSTRIAL AREA
MYSORE-KRS ROAD
METAGALLY
MYSORE

MANUFACTURES OF HIGH SPEED GEARS FOR BICYCLES

Telephone No. :
Office : 24962
Residence : 23503
Grams : Speedmaker

Sri Vidyabharathi Book Centre, Sringeri

CC-0. In Public Domain. Digitized by eGangotri

60 ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ

ಈ ಸಂಸ್ಥೆಯಲ್ಲಿ ಲೋಕಪ್ರಸಿದ್ಧಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್ ಆಯಿಲ್, ಕರವಸ್ತ್ರಪ ಸೆಂಟ್,

ಸುಗಂಧದ್ರವ್ಯಗಳೂ ಸಹ

ಪ್ರತಿನಿತ್ಯ ಅತ್ಯುತ್ತಮರೀತಿಯಲ್ಲಿ ತಯಾರಾಗುತ್ತಲಿವೆ

ದಿ ಸಜ್ಜೀವ್ಯಶಾಲಾ (ಪ್ರೈವೇಟ್) ಲಿಮಿಟೆಡ್

ನಂಜನಗೂಡು, ಮೈಸೂರು ಡಿಸ್ಟ್ರಿಕ್ಟ್.

ಶಾಖೆಗಳು :– ಮೈಸೂರು, ಬೆಂಗಳೂರು ಮತ್ತು ಮಂಗಳೂರು.

ಸೋಲ್ ಏಜಂಟರು :— (ಕರ್ನಾಟಕದಾಚೆಗೆ)

ದಿ ಯುನೈಟೆಡ್ ಕನ್ಸರ್ನ್ಸ್, 54, ಬಂದರ್ ಸ್ಟ್ರೀಟ್, ಮದ್ರಾಸ್.

Sri Vidyabharathi Book Centre, Sringeri

CC-O. In Public Domain. Digitized by eGangotri

With best compliments from :

Chamundi Plasto Sacks (P) Ltd.

Regd. Office :
2909, Temple Street, V. V. Mohalla,
MYSORE - 570002.

Factory :
Mysore - KRS Road, Metagally,
MYSORE - 571106.

Biggest Manufacturers of :
HDPE Woven Sacks for Packing Fertilizers, Chemicals, Food : Stuffs and other Commodities

For High Class Laminations from 80 gauge to 600 gauge
Contact Associate firm :
SRI KRUPA LAMINATES
in the same compound.

RAPSRI
ENGINEERING INDUSTRIES PVT LTD.,

Post Bag No. 4104, Jayanagar
BANGALORE - 560 041
Manufacturers of :
Machined and unmachined
Nonferrous castings

Regd. office & Works :
39 & 40/2, Gowdanapalya
Subramanyapura Post
BANGALORE - 560 061

Phone - Office : 40243
Works : 41703

Grams : "RAPSRI"
Telex : 0845 522

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಹಾರ್ದಿಕ ಶುಭಾಶಯಗಳು

ಮದುವೆ ಜವಳಿಗೆ

ಶುದ್ಧ ರೇಷ್ಮೆ ಸೀರೆಗಳಿಗೆ

ಒಮ್ಮೆ ಭೇಟಿ ಕೊಡಿ

ಫೋ : 22446.

ಎಂ. ವಿ. ಭೋಜಯ್ಯ ಬಿ. ಎ., & ಬ್ರದರ್ಸ್,

ಶಿವರಾಂಪೇಟೆ, ಮೈಸೂರು.

ಫೋ : 22287.

ಭೋಜಯ್ಯ ಸನ್ಸ್, ನೇತ್ರ ಸಿಲ್ಕ್ ಲ್ಯಾಂಡ್,

ನಂ. 2, ಕೆ. ಆರ್. ಸರ್ಕಲ್, ಕೆ. ಆರ್. ಸರ್ಕಲ್,

ಮೈಸೂರು. ಮೈಸೂರು.

PHONE: 23792

GRAMS: DINGDONG

ಪೂಜೆ ಪುನಸ್ಕಾರಗಳಿಗೆ



ಗೋಪಿಕಾ ಕಸ್ತೂರಿ ದರ್ಬಾರ್ ಬತ್ತಿ

GOPIKA PERFUMERY WORKS, MYSORE-4

Sri Vidyabharathi Book Centre, Sringeri

CC-0. In Public Domain. Digitized by eGangotri

Time does not stand still.

Which was why Rajni and her husband Raghunath wisely approached Bank of India for a loan, to purchase fertilizers for their crops.

With the bumper harvest that resulted the following season, Raghunath was able to implement his plans for his children's future.

Besides assisting with loans repayable at low rates of interest, Bank of India has a number of savings schemes to suit your special needs—long term and short term.

Visit your nearest Bank of India branch today. Come, secure your future with the largest nationalised bank in India.

Bank of India
(A Government of India Undertaking)
Where service makes the difference.

Sri Vidyabharathi Book Centre, Srinagar

CONCEPT-BOI-4279

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

With best compliments from :

RITZ GROUP OF HOTELS

When you visit Mysore,
please stay at

HOTEL METROPOLE or
HOTEL KRISHNARAJASAGAR

RITZ HOTELS (Mysore) Limited,
Jhansi Laxmibai Road,
MYSORE – 570 005
Telephone No. 20681

ಭಿಷಗ್ರತ್ನ ಪಾಳ್ಕದ ವೆಂಕಟಾಚಲಪಂಡಿತರ

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು

68ವರ್ಷಗಳಿಂದಲೂ ಜಗತ್ಪ್ರಸಿದ್ಧವಾಗಿರುವ ವಿಶೇಷ ತಾಜಾ ಮತ್ತು ಅಸಲಿ ಕಸ್ತೂರಿ ಮಾತ್ರೆಗಳು.

ಮಕ್ಕಳು ಮತ್ತು ದೊಡ್ಡವರ ಮಂದ, ಎಳವು (ಪಕ್ಕೆ ಕಚ್ಚಿ ಎಳೆವುದು) ಶೀತ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮು, ನೆಗಡಿ, ಅಜೀರ್ಣಭೇದಿ, ಇನ್ಫ್ಲುಯೆನ್ಜಾ, ಜೀರ್ಣಕಾಲದಲ್ಲಿ ಬರುವ ತಲೆನೋವು, ಆಗಾಗ್ಗೆ ಬರುವ ಹೊಟ್ಟೆನೋವು, ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಕೇವಲ ಹಿಂದೂಸ್ಥಾನದಲ್ಲೆ ಅಲ್ಲದೆ ಸಿಲೋನ್, ಬರ್ಮಾ, ಮಲಯ ಮುಂತಾದ ದೇಶಗಳಲ್ಲೆಲ್ಲಾ ಪ್ರಖ್ಯಾತವಾಗಿದ್ದು ಲಕ್ಷೋಪಲಕ್ಷ ಜನರು ವರ್ಷಂಪ್ರತಿ ನಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುತ್ತಿದ್ದು, ಅದರ ಗುಣಗಳಿಗೆ ಮಾರುಹೋಗಿ ಅನೇಕಾನೇಕ ಪ್ರಶಂಸಾ ಪತ್ರಗಳನ್ನು ಬರೆದಿರುತ್ತಾರೆ.

ದಂತೋಜ್ವಲ ಹಲ್ಲುಪುಡಿ BLACK TOOTH POWDER

ಔಷಧೋಪಯುಕ್ತ, ಸುಗಂಧಭರಿತ. ದಂತರೋಗ ಪರಿಹಾರ ಹಲ್ಲುಪುಡಿ. ಈ ಹಲ್ಲುಪುಡಿಯನ್ನು ಉಪಯೋಗಿಸಿದವರೆಲ್ಲಾ ಇದರಬಗ್ಗೆ ಹೊಗಳಿ ಪ್ರಶಂಸಾಪತ್ರಗಳನ್ನು ಬರೆದಿದ್ದಾರೆ. ನೀವೂ ಒಮ್ಮೆ ಉಪಯೋಗಿಸಿ ಇದರ ಗುಣವನ್ನು ಪರೀಕ್ಷಿಸಿ.

ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

The Mysore Amalgamated Coffee Estates Limited.,

Regd. Office : **4581, Narasimharaja Mohalla, Mysore - 7**

Estates : **Theerthagundy, Kudiregundy, Elephant & Kithale.**

Board of Directors :

1. Sri P. R. Subramanyam, *(Chairman)*
2. Sri A. J. T. Mathias
3. Sri P. R. Hariharan
4. Sri P. R. Venkatesan
5. Sri R. J. J. Saldanha
6. Sri R. K. Ananda Ramaih
7. Sri K. S. Menon
8. Sri H. Ramachandra
9. Viswanath Subramanyam

THE PORTLAND RUBBER ESTATES LIMITED.

Regd. Office : 135, Residency Road, Bangalore-25

Board of Directors :

Chairman

1. Sri P. R. Subramanyam

Directors in charge :

2. Sri K. Kurian Uthup
3. Sri K. Korah

Directors :

4. Sri P. R. Hariharan
5. Sri M. M. Varghese
6. Sri K. Rajue
7. Sri Kurian Joshuae
8. Sri K. Thomas
9. Sri Mathew Joshuae

Sri Vidyabharathi Book Centre, Sringeri

CC-O. In Public Domain. Digitized by eGangotri

With the best compliments from :

ANNAPURNA ENTERPRISES

1670/1, Hanumantha Rao Street, MYSORE - 1

Agents for—

DANDEKAR RICE MILL PLANTS of half, one, two and four ton capacity Rice Mills of Schule Economy and Emery Type Shellers and Parboiling and drying Equipments. Also Modernisation Kits.

With best compliments from :

Messrs N. S. Padaki

HANUMANTHA RAO STREET

MYSORE

Distributors :

Advani Oerlikon Ltd., Bomday

Asiatic Oxygen, Ltd., Calcutta

Sri Vidyabharathi Book Centre, Sringeri

CC-O. In Public Domain. Digitized by eGangotri

Perimeter Protection + Trap Protection = Total Protection

Get your property and men protected by highly talented security experts. We give our people result oriented tough training like Defence forces. Let your property be small or big. We will shoulder the entire responsibility to protect your property once if you are in touch with us.

Contact :

K. T. R. SECURIPLANS **K. Thiagarajan Iyer**
(Security Consultants & Agents) *Director*
1769, Mission Hospital Road Phone : 25715
Mysore - 570 001

Manufacturers of Quality Products :

1. Red Oxide Primer
2. Red Oxide Zinc Chromate Primer
3. Aluminium Paint
4. Smoke Grey Enamel Paint

INDUSTRIAL PAINTS & CHEMICALS
11, Mananthavadi Road, Mysore South
MYSORE - 570 008 Phone : 24931

CC-O. In Public Domain. Sri Vidyabhaskara Puri Collection, Sringeri

CC-O. In Public Domain. Digitized by eGangotri

ಶ್ರೀ ಶಂಕರಕೃಪಾ ಗ್ರಂಥಮಾಲೆಯ ಪ್ರಕಟಣೆಗಳು :-

	ರೂ. ಪೈ.
1. ಶೃಂಗೇರಿಯ ಪುನರ್ದರ್ಶನ	1—50
2. ಉಪನಿಷತ್ತಿನ ಸಾರ	2—00
3. ಸಂಧ್ಯಾವಂದನೆಯ ತತ್ತ್ವಾರ್ಥ	2—50
4. ಶ್ರೀ ಶಂಕರ ಕಥಾಮೃತ	1—50
5. ಶಬರಿಮಲೈ ಅಯ್ಯಪ್ಪನ್ ಪಾಟ್ರು	0—25

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳು :-

1. ಶ್ರೀ ಜಗದ್ಗುರು 30—00
2. ಸುರಸರಸ್ವತೀಸಭೆಯ ಸಂಸ್ಕೃತ ಪಠ್ಯಪುಸ್ತಕಗಳು :-

ಪ್ರಥಮ	1—00	ತುರೀಯ	2—00
ದ್ವಿತೀಯ	1—20	ಪ್ರವೇಶ	2—00
ತೃತೀಯ	2—00	ಅನುವಾದ ಪ್ರದೀಪ	
		1ನೇ ಭಾಗ	2—00
		2ನೇ ಭಾಗ ಅಚ್ಚಿನಲ್ಲಿದೆ	

3. ಶ್ರೀಶ್ರೀ ಜಗದ್ಗುರು ಚಂದ್ರಶೇಖರಭಾರತೀ ಮಹಾಸ್ವಾಮಿಗಳವರ ಪಠಗಳು ಕಾಪಿ 1 ಕ್ಕೆ 2—50
4. Shri Adya Shankaracharya : His Maths & Memorials By M.S. Dave 3—
5. ವೇದಾಂತ ಸಿದ್ಧಾಂತ-ಶೃಂಗಗಿರಿ ಕವಿನರಸಿಂಹಶರ್ಮಾ ವಿರಚಿತ (ಆಂಜೆವೆಚ್ಚ ಸೇರಿ) 20—0

ದೊರೆಯುವ ಸ್ಥಳ :

ಶ್ರೀ ಪಿ. ಆರ್. ಹರಿಹರನ್
ಗೋಮತಿ, ನರಸಿಂಹರಾಜಮೊಹಲ್ಲಾ ಮೈಸೂರು - 570007
ಸೆಕ್ರೆಟರಿ, ಶ್ರೀ ಶಾರದಾ ಸೇವಾ ಸಮಿತಿ,
C/o,
ಶಂಕರಮಠ, ಟೆಲಾಂಗ್ ರೋಡ್, ಮಾಟುಂಗ, ಬಾಂಬೆ - 400 019.
ಮತ್ತು
ಶ್ರೀ ಶಾರದಾ ಮುದ್ರಣ ಪ್ರಕಾಶನಾಲಯ (ಪ್ರೈ.) ಲಿ. ಮೈಸೂರು-4

ಸಂಪಾದಕ ಮಂಡಲಿ :
ಶ್ರೀ ತ. ರಾ. ಸು. ಶ್ರೀ ಲ. ನ. ಶಾಸ್ತ್ರೀ. ವಿದ್ವಾನ್ ಬಾಲಗಣಪತಿಭಟ್ಟ
ಡಾ|| ಎಸ್. ಎಸ್. ದಕ್ಷಿಣಾಮೂರ್ತಿ
ಪ್ರಕಾಶಕರು
ಶ್ರೀ. ಪಿ. ಆರ್. ಹರಿಹರನ್

Sri Vidyabharathi Book Centre, Sringeri

CC-O. In Public Domain. Digitized by eGangotri

Registered No. KRNN - 8

ಶಂಕರ ಕೃಪಾ : ಧಾರ್ಮಿಕಪ್ರಚಾರಗಳಿಗೆ ಸಂಸ್ಥಾಪಿಸಿದ [illegible] ರೂ. 100

ಚಂದಾ : ಮಹಾಪೋಷಕರು ರೂ. 1000 ವಾರ್ಷಿಕ ಚಂದಾ ರೂ. 10

[illegible] ಪ್ರತಿ ಒಂದಕ್ಕೆ ರೂ. 1

ಸಾರ್ವಜನಿಕ ಗ್ರಂಥಾಲಯಗಳಿದ್ದು ಎಲ್ಲಾ ಹೈಸ್ಕೂಲುಗಳಿಗೂ, ಟ್ರೈನಿಂಗ್ ಸಂಸ್ಥೆಗಳಿಗೆಲ್ಲ ಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು (No. T4, 248, LIB. 2/69-[illegible] 28-12-70) ಸರ್ಕಾರದವರು ಶಿಫಾರಸ್ ಮಾಡಿರುತ್ತಾರೆ.

211 Sri A. Subramanya Sastry
Book-Seller, Sri Sringeri Mutt
Sringeri-Kadur – 577 139

If undelivered please return to :

Sri P. R. HARIHARAN,
Publisher
4581, Temple Road.
Narasimharaja Mohalla, Mysore

Sri Vidyabharathi Book Centre, Sringeri